ಬುಧವಾರ, ಸೆಪ್ಟೆಂಬರ್ 8, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣೆಗೆ ತಯಾರಿ

ಲಖನೌದ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಕಚೇರಿಯಲ್ಲಿ ಮಂಗಳವಾರ ನಡೆದ ಪ್ರಬುದ್ಧ ಸಮ್ಮೇಳನದ ವಿಚಾರ ಗೋಷ್ಠಿಯಲ್ಲಿ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ಬೆಳ್ಳಿಯ ತ್ರಿಶೂಲ ಪ್ರದರ್ಶಿಸಿದರು




‘ಸುಸ್ಥಿರ ಆಡಳಿತ, ಚುನಾವಣೆ ನಾಯಕತ್ವದ ಸವಾಲು’

ಪ್ರಜಾವಾಣಿ ಸಂವಾದ

ಬೆಂಗಳೂರು: ‘ಬಿಜೆಪಿಯು 2023ರ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಎದುರಿಸಲಿದೆ’ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯು ಬಿಜೆಪಿ ರಾಜ್ಯ ಘಟಕದಲ್ಲಿ ಸಂಚಲನ ಮೂಡಿಸಿದೆ. ಚುನಾವಣೆಗೆ ದೀರ್ಘ ಸಮಯ ಇರುವಾಗಲೇ ನಾಯಕತ್ವದ ಕುರಿತು ತೀವ್ರ ಚರ್ಚೆ ಆರಂಭವಾಗಿದೆ.

ಇದೇ ವಿಷಯ ಕುರಿತು ‘ಪ್ರಜಾವಾಣಿ’ ಮಂಗಳವಾರ ನಡೆಸಿದ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಪಾಲ್ಗೊಂಡಿದ್ದ ನಾಲ್ವರು ಅತಿಥಿಗಳು ಹಂಚಿಕೊಂಡಿರುವ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಮೊದಲು ಸ್ಥಿರ ಸರ್ಕಾರ ನೀಡಲಿ



ಬಿಜೆಪಿ ಸರ್ಕಾರ ಬಂದಿದ್ದೇ ಆಪರೇಷನ್ ಕಮಲದಿಂದ. ಎರಡೇ ವರ್ಷದಲ್ಲಿ ಯಡಿಯೂರಪ್ಪ ಅವರನ್ನು ಕೆಳಗಿಳಿಸಿ ಬಸವರಾಜ ಬೊಮ್ಮಾಯಿ ಅವರಿಗೆ ಅಧಿಕಾರ ನೀಡಲಾಗಿದೆ. ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ. ಈಗಲೂ ಸರ್ಕಾರದ ಕುರಿತು ಬಿಜೆಪಿಯಲ್ಲಿ ಅಪಸ್ವರ ಇದೆ. ಬಿಜೆಪಿಯ ನಾಯಕರೊಬ್ಬರಿಗೆ ಬಿಸಿ ಮುಟ್ಟಿಸಲು ಅಮಿತ್ ಶಾ ಈ ಹೇಳಿಕೆ ನೀಡಿದ್ದಾರೆ.

ಬಿಜೆಪಿ ಮತ್ತು ಕಾಂಗ್ರೆಸ್ ಹೈಕಮಾಂಡ್ ಹಿಡಿತದಲ್ಲಿ ನಡೆಯುವ ರಾಜಕೀಯ ಪಕ್ಷಗಳು. ಹೈಕಮಾಂಡ್ ತನಗೆ ಬೇಕಾದಾಗಲೆಲ್ಲ ನಾಯಕತ್ವ ಬದಲಾವಣೆ ಮಾಡುತ್ತಾರೆ. ಈಗ ನಾಯಕತ್ವದ ಪ್ರಶ್ನೆ ಉದ್ಭವಿಸಬಾರದು. ಮೊದಲು ಸ್ಥಿರ ಸರ್ಕಾರ ನೀಡಲಿ, ನಂತರ ನಾಯಕತ್ವದ ಬಗ್ಗೆ ಚರ್ಚಿಸಲಿ.

ಜೆಡಿಎಸ್ ಅಸ್ತಿತ್ವ ಕಳೆದುಕೊಂಡಿದೆ ಎಂಬ ಮಾತು ಒಪ್ಪಲ್ಲ. ಬಿಜೆಪಿ ಅಧಿಕಾರದಲ್ಲಿರುವ ಪಕ್ಷ, ಸ್ಥಳೀಯ ವಿಷಯಗಳೂ ಸೇರಿಕೊಂಡು ಬಿಜೆಪಿಗೆ ಅನುಕೂಲವಾಗಿದೆ. ಜೆಡಿಎಸ್‌ಗೆ ದೆಹಲಿಯಲ್ಲಿ ಹೈಕಮಾಂಡ್ ಇಲ್ಲ. ಎಲ್ಲವೂ ಕರ್ನಾಟಕದಲ್ಲೇ ನಿರ್ಧಾರ ಆಗುತ್ತದೆ.

– **ಬಂಡೆಪ್ಪ ಕಾಶೆಂಪೂರ,** ಜೆಡಿಎಸ್ ಶಾಸಕ

ಜನನಾಯಕ ಆಗುವ ಸವಾಲು ಸಿಎಂ ಮುಂದಿದೆ



ಯಡಿಯೂರಪ್ಪ ನೈತಿಕ ಬಲ ಕಳೆದುಕೊಂಡಿದ್ದರು. ಅದಕ್ಕಾಗಿ ಸರ್ಕಾರ ಅಸ್ಥಿರತೆಯಲ್ಲಿ ಸಿಲುಕಿತ್ತು. ಮಗನ ಹಸ್ತಕ್ಷೇಪ ಜಾಸ್ತಿಯಾಗಿತ್ತು. ಅದಕ್ಕಾಗಿ ಬದಲಿಸಿದರು. ಅದನ್ನು ಮುಂದಿಟ್ಟುಕೊಂಡು ಕಾಂಗ್ರೆಸ್, ಜೆಡಿಎಸ್ ರಾಜಕಾರಣ ಮಾಡುತ್ತಿರುವುದು ಹಾಸ್ಯಾಸ್ಪದ.

ರಾಜಕೀಯ ನಾಯಕತ್ವ ವಹಿಸುವುದು ಕೂಡ ಬಸವರಾಜ ಬೊಮ್ಮಾಯಿ ಅವರ ಮುಂದಿರುವ ಮುಖ್ಯ ಸವಾಲು. ಪಕ್ಷದ ಕಾರ್ಯಕರ್ತರ ಜತೆ ನಂಟು ಸಾಧಿಸಬೇಕು. ಯಡಿಯೂರಪ್ಪ ದುಬಾರಿ ಕಾರು ಖರೀದಿಸಿ ಮಕ್ಕಳ ಜತೆ ಪ್ರವಾಸ ಮಾಡಿದರೆ ಯಾವ ಪರಿಣಾಮವೂ ಆಗುವುದಿಲ್ಲ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹುಬ್ಬಳ್ಳಿ– ಧಾರವಾಡದಲ್ಲಿ ಕಾಂಗ್ರೆಸ್ ವೀರೋಚಿತ ಹೋರಾಟ ನಡೆಸಿದೆ. ಬಿಜೆಪಿಯ ವಿರುದ್ಧ ಜನರು ಮುನಿಸಿಕೊಂಡಿರುವುದಕ್ಕೆ ಈ ಫಲಿತಾಂಶ ಸಾಕ್ಷಿ. ಜನರು ಪಕ್ಷಗಳಾಚೆ ಚಿಂತಿಸುತ್ತಾರೆ.

ಯಡಿಯೂರಪ್ಪ ಅವರಂತೆ ಬೊಮ್ಮಾಯಿ ಮುಖ್ಯಮಂತ್ರಿ ಆಗಿರಬಹುದು. ಆದರೆ, ಅವರಂತೆ ಜನನಾಯಕ ಆಗುವುದು ಕಷ್ಟದ ಕೆಲಸ. ಆ ಸವಾಲನ್ನು ಬೊಮ್ಮಾಯಿ ಮೀರಬೇಕಿದೆ. ನಿಶ್ಚಿತವಾಗಿ ಬೊಮ್ಮಾಯಿ ಅವರಿಗೇ ನಾಯಕತ್ವ ಸಿಗಲಿದೆ.

– **ರವೀಂದ್ರ ರೇಷ್ಮೆ,** ರಾಜಕೀಯ ವಿಶ್ಲೇಷಕ

ಬೊಮ್ಮಾಯಿ ನಾಯಕತ್ವಕ್ಕೆ ಅಪಸ್ವರವೇ ಇಲ್ಲ



ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸಲಾಗುವುದು ಎಂಬ ಹೇಳಿಕೆ ಕುರಿತು ಚರ್ಚೆ ಅನಗತ್ಯ. ಸರ್ಕಾರದ ನಾಯಕತ್ವ ವಹಿಸಿದ್ದವರೇ ಚುನಾವಣೆಯಲ್ಲೂ ನಾಯಕತ್ವ ವಹಿಸುವುದು ಸಹಜ ಬೆಳವಣಿಗೆ. ಕಾಂಗ್ರೆಸ್, ಜೆಡಿಎಸ್ ಅಭಿವೃದ್ಧಿ ವಿಚಾರ ಕುರಿತು ಚರ್ಚಿಸಬೇಕಿತ್ತು. ಬಿಜೆಪಿಯ ಆಂತರಿಕ ಬೆಳವಣಿಗೆಯನ್ನೇ ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿರುವುದು ದುರ್ದೈವ.

ಸ್ಥಳೀಯ ನಾಯಕತ್ವಕ್ಕೆ ಹೆಚ್ಚು ಆದ್ಯತೆ ನೀಡುವ ಪಕ್ಷ ಬಿಜೆಪಿ. ಬಿಜೆಪಿಯಲ್ಲಿ ಪಕ್ಷದ ಹೈಕಮಾಂಡ್ ರಾಜ್ಯದ ಮೇಲೆ ಯಾವುದೇ ಅಭಿಪ್ರಾಯ ಹೇರುವುದಿಲ್ಲ. ವಿರೋಧ ಪಕ್ಷಗಳು ಏನೇ ಟೀಕೆ ಮಾಡಿದರೂ ಜನರು ಬಿಜೆಪಿ ಪರ ಇದ್ದಾರೆ ಎಂಬುದಕ್ಕೆ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶ ಸಾಕ್ಷಿ. ಯಡಿಯೂರಪ್ಪ ಪಕ್ಷದ ಮೇಲಿನ ಬದ್ಧತೆಗಾಗಿ ಪ್ರವಾಸಕ್ಕೆ ಮುಂದಾಗಿದ್ದಾರೆ. ಬೊಮ್ಮಾಯಿ ರಾಜಕೀಯವಾಗಿ ಪಕ್ವಗೊಂಡಿರುವ ನಾಯಕ. ಮುಕ್ತವಾಗಿ ಕೆಲಸ ಮಾಡಲಿದ್ದಾರೆ. ಜನರ ಆಶಯಗಳನ್ನು ಸಾಕಾರಗೊಳಿಸಲಿದ್ದಾರೆ.

– **ಈರಣ್ಣ ಕಡಾಡಿ,** ರಾಜ್ಯಸಭೆಯ ಬಿಜೆಪಿ ಸದಸ್ಯ

ಬಿಜೆಪಿ ಕೈಗೊಂಬೆ ನಾಯಕನನ್ನೇ ಬಯಸುತ್ತಿದೆ

ಬಿಜೆಪಿಗೆ ಪ್ರಬಲವಾದ ಪ್ರಾದೇಶಿಕ ನಾಯಕತ್ವ ಬೇಕಿಲ್ಲ. ಕೈಗೊಂಬೆ ನಾಯಕತ್ವವನ್ನೇ ಅದು ಬಯಸುತ್ತದೆ. ಅದಕ್ಕಾಗಿ ಯಡಿಯೂರಪ್ಪ ಅವರನ್ನು ಕಿತ್ತುಹಾಕಿ, ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಎಲ್ಲವನ್ನೂ ದೆಹಲಿಯಿಂದಲೇ ನಿಯಂತ್ರಿಸಬೇಕು ಎಂಬುದು ಬಿಜೆಪಿ ನಾಯಕರ ಬಯಕೆ. ಅದಕ್ಕೆ ತಕ್ಕಂತೆ ಎಲ್ಲವೂ ನಡೆಯುತ್ತಿದೆ.



ಬೊಮ್ಮಾಯಿ ಅವರಿಗೆ ಸ್ವತಂತ್ರವಾಗಿ ಕೆಲಸ ಮಾಡುವ ಅಧಿಕಾರ ಇಲ್ಲ ಎಂಬುದು ಖಚಿತ. ಅದಕ್ಕಾಗಿಯೇ ಮಾತೆತ್ತಿದರೆ ಅವರು ದೆಹಲಿ ಹೈಕಮಾಂಡ್ ಕುರಿತು ಮಾತನಾಡುತ್ತಾರೆ. ರಾಜ್ಯದಲ್ಲಿ ಒಂದು ಬಿಜೆಪಿ ಇಲ್ಲ. ಇಲ್ಲಿ ಹೊಸ ಬಿಜೆಪಿ, ಹಳೆ ಬಿಜೆಪಿ, ಮೂಲ– ವಲಸಿಗ ಸೇರಿದಂತೆ ಹಲವು ಗುಂಪುಗಳಿವೆ. ಬೊಮ್ಮಾಯಿ ಸಂಪುಟದಲ್ಲೇ ಹಲವು ಗುಂಪುಗಳಿವೆ.

ಬೆಳಗಾವಿಯಲ್ಲಿ ಕೇವಲ ಶೇಕಡ 13ರಷ್ಟು ಮತ ಮಾತ್ರ ದೊರಕಿದೆ. ಆದರೂ, 38 ಸ್ಥಾನಗಳು ಹೆಚ್ಚಾಗಿವೆ. ಹುಬ್ಬಳ್ಳಿ ಧಾರವಾಡದಲ್ಲಿ ಆಡಳಿತ ವಿರೋಧಿ ಅಲೆ ಇದ್ದರೂ ಗೆದ್ದಿದ್ದಾರೆ. ಹೇಗೆ ಈ ಫಲಿತಾಂಶ ಬಂದಿದೆ ಎಂಬುದನ್ನು ಇತರ ಪಕ್ಷಗಳು ಅರಿಯಬೇಕಿದೆ.

– **ಪೃಥ್ವಿ ರೆಡ್ಡಿ,** ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಸಂಚಾಲಕ

ಪೂರ್ಣ ಸಂವಾದ ವೀಕ್ಷಿಸಲು: https://bit.ly/3l1EWbV

ಸುದ್ದಿ 2 ನಿಮಿಷ

ಸ್ವಾತಂತ್ರ್ಯ ಹೋರಾಟದ ಗ್ರಾಮಗಳ ಪರಿಚಯ: ಸಚಿವ ಸುನೀಲ್‌ಕುಮಾರ್

ಬೆಂಗಳೂರು: ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಧಾನ ಪಾತ್ರವಹಿಸಿದ್ದ ಗ್ರಾಮಗಳನ್ನು ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಾಡಿಗೆ ಪರಿಚಯಿಸಲು ಉದ್ದೇಶಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಕೊಡುಗೆ ಎಲ್ಲರಿಗೂ ತಿಳಿಯಬೇಕು. ನೂರಾರು ಜನರ ಬಲಿದಾನವಾಗಿದೆ. ನೂರಾರು ಗ್ರಾಮಗಳು ತಮ್ಮದೇ ಆದ ರೀತಿಯಲ್ಲಿ ಶೌರ್ಯವನ್ನು ಮೆರೆದಿವೆ. ಅಂತಹ ಗ್ರಾಮಗಳನ್ನು ಗುರುತಿಸಿ ಪರಿಚಯಿಸಲಾಗುವುದು ಎಂದು ಅವರು ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿಗಳನ್ನು ಪಡೆಯುವುದನ್ನು ಕಡಿಮೆ ಮಾಡಿ, ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಪರಂಪರೆ ನಿರ್ಮಾಣವಾಗಬೇಕು. ಎಲೆಯಮರೆಯ ಕಾಯಿಯಂತೆ ಸಾಕಷ್ಟು ಜನ ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಅಂತಹ ಸಾಧಕರನ್ನು ಗುರುತಿಸುವ ಯೋಜನೆ ಇದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಸಾವಿರಾರು ಕಲಾವಿದರಿದ್ದಾರೆ. ಕೆಲವು ಕಲಾವಿದರು ಮಂತ್ರಿಗಳವರೆಗೆ ಬಂದರೆ, ಇನ್ನೂ ಕೆಲವರು ಅಧಿಕಾರಿಗಳವರೆಗೆ ಬರುತ್ತಾರೆ. ಕೆಲವರು ಬೆಂಗಳೂರಿಗೆ ಬರುತ್ತಾರೆ. ಯಾವುದೇ ಶಕ್ತಿ ಇಲ್ಲದ ನೂರಾರು ಕಲಾವಿದರು ಗ್ರಾಮೀಣ ಪ್ರದೇಶದಲ್ಲೇ ಉಳಿದಿದ್ದಾರೆ. ಹೀಗಾಗಿ ಕಲಾವಿದರ ಡೇಟಾ ಬ್ಯಾಂಕ್ ಹೊಂದಬೇಕೆಂಬ ಯೋಜನೆ ಇದೆ. ಈ ವಿವರಗಳನ್ನು ‘100 ದಿನಗಳ ಕಾರ್ಯಕ್ರಮ’ದಡಿ ಸಂಗ್ರಹ ಮಾಡಲಿದ್ದೇವೆ ಎಂದು ಸುನಿಲ್ ತಿಳಿಸಿದರು.



ಮೂತ್ರ ನೆಕ್ಕಿಸಿದ ಪ್ರಕರಣ: ಆರೋಪಿ ಅರ್ಜುನ್‌ಗೆ ಜಾಮೀನು ನಿರಾಕರಣೆ

ಚಿಕ್ಕಮಗಳೂರು: ಪರಿಶಿಷ್ಟ ಜಾತಿಯ ಯುವಕನಿಗೆ ಠಾಣೆಯಲ್ಲಿ ಮೂತ್ರ ನೆಕ್ಕಿಸಿದ ಆರೋಪ ಎದುರಿಸುತ್ತಿರುವ ಪಿಎಸ್‌ಐ ಅರ್ಜುನ್ ಅವರಿಗೆ ಮಧ್ಯಂತರ ಜಾಮೀನು ನೀಡಲು ನಗರದ ಒಂದನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ ನಿರಾಕರಿಸಿದೆ.

ನ್ಯಾಯಾಧೀಶರಾದ ಬಿ. ಪುಷ್ಪಾಂಜಲಿ ಅವರು ಮಂಗಳವಾರ ಅರ್ಜಿ ವಿಚಾರಣೆ ನಡೆಸಿ, ಮಧ್ಯಂತರ ಜಾಮೀನು ನೀಡಲು ನಿರಾಕರಿಸಿದರು.

ಮೂಡಿಗೆರೆ ತಾಲ್ಲೂಕಿನ ಕಿರಗುಂದದ ಪುನೀತ್‌ಗೆ ಗೋಣಿಬೀಡು ಠಾಣೆಯಲ್ಲಿ ಮೂತ್ರ ನೆಕ್ಕಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಅರ್ಜುನ್ ಅವರನ್ನು ಬೆಂಗಳೂರಿನಲ್ಲಿ ಸಿಐಡಿ ಪೊಲೀಸರು ಸೆ.1ರಂದು ಬಂಧಿಸಿದ್ದರು. 2ರಂದು ಚಿಕ್ಕಮಗಳೂರಿನಲ್ಲಿ ಕೋರ್ಟ್‌ಗೆ ಹಾಜರುಪಡಿಸಿದ್ದರು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಕೋವಿಡ್: ಪರೀಕ್ಷೆ, ಪ್ರಕರಣ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ ಕೋವಿಡ್ ಪರೀಕ್ಷೆಗಳ ಸಂಖ್ಯೆ 1.18 ಲಕ್ಷಕ್ಕೆ ಹಾಗೂ ಹೊಸ ಪ್ರಕರಣಗಳ ಸಂಖ್ಯೆ 851ಕ್ಕೆ ಇಳಿಕೆ ಕಂಡಿದೆ.

ಆರು ತಿಂಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಇವಾಗಿವೆ. ಕಳೆದ ತಿಂಗಳ ಅಂತ್ಯಕ್ಕೆ 1.90 ಲಕ್ಷ ದಾಟಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಇಳಿಮುಖ ಮಾಡಿದೆ.

9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಧಾರವಾಡ, ಗದಗ, ಕೊಪ್ಪಳ ಹಾಗೂ ವಿಜಯಪುರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 227, ಮೈಸೂರಿನಲ್ಲಿ 53 ಹಾಗೂ ಕೊಡಗಿನಲ್ಲಿ 31 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 248 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ. ಸೋಂಕು ದೃಢ ಪ್ರಮಾಣ ಶೇ 0.71ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.56 ಲಕ್ಷಕ್ಕೆ ಏರಿಕೆ ಕಂಡಿದೆ.

ಕೋವಿಡ್ ಪೀಡಿತರಲ್ಲಿ 15 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ದಕ್ಷಿಣ ಕನ್ನಡದಲ್ಲಿ 4, ಬೆಂಗಳೂರಿನಲ್ಲಿ 3, ಕೊಡಗು, ಮೈಸೂರು ಹಾಗೂ ಶಿವಮೊಗ್ಗದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಕನ್ನಡ ಮತ್ತು ಹಾಸನದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.76 ರಷ್ಟು ವರದಿಯಾಗಿದೆ. ಮೃತಪಟ್ಟವರ ಒಟ್ಟು ಸಂಖ್ಯೆ 37,441ಕ್ಕೆ ತಲುಪಿದೆ.

ಕೊರೊನಾ ಸೋಂಕಿತರಲ್ಲಿ 790 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.02 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 17,432ಕ್ಕೆ ಏರಿಕೆಯಾಗಿದೆ.



‘ಗುರು ಗ್ರಂಥ ಸಾಹಿಬ್’ ಮೆರವಣಿಗೆ...

ಸಿಖ್ಖರು ‘ಗುರು ಗ್ರಂಥ ಸಾಹಿಬ್’ ಅನ್ನು ಧಾರ್ಮಿಕ ಗ್ರಂಥವಾಗಿ ಸ್ವೀಕರಿಸಿದ 417ನೇ ವಾರ್ಷಿಕೋತ್ಸವದ ನಿಮಿತ್ತ ಪಂಜಾಬ್‌ನ ಅಮೃತಸರದ ಸ್ವರ್ಣ ಮಂದಿರದಲ್ಲಿ ಮಂಗಳವಾರ ನಡೆದ ಧಾರ್ಮಿಕ ಗ್ರಂಥದ ಮೆರವಣಿಗೆಯಲ್ಲಿ ಅಸಂಖ್ಯ ಜನರು ಪಾಲ್ಗೊಂಡಿದ್ದರು

ಎಎಫ್‌ಪಿ ಚಿತ್ರ

ನೂರಕ್ಕೂ ಹೆಚ್ಚು ನಾಯಿಗಳ ಜೀವಂತ ಸಮಾಧಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭದ್ರಾವತಿ ತಾಲ್ಲೂಕು ಕಂದಾಳ್–ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೆರೆಹಿಡಿದ ನೂರಕ್ಕೂ ಹೆಚ್ಚು ನಾಯಿಗಳನ್ನು ಅರಣ್ಯದಲ್ಲಿ ಜೀವಂತ ಸಮಾಧಿ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಹೆಚ್ಚಳವಾಗಿದ್ದ ಬೀದಿ–ನಾಯಿಗಳನ್ನು ಹಿಡಿಯಲು ಈಚೆಗೆ ಮೈಸೂರಿನ ಕೆಲವರು ಗುತ್ತಿಗೆ ಪಡೆದಿದ್ದರು. ಗುತ್ತಿಗೆ ನಿಯಮದಂತೆ ನಾಯಿಗಳನ್ನು ಹಿಡಿದು, ಅವುಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿದ ನಂತರ ಊರಿನಿಂದ ಹೊರಗೆ ಬಿಡಬೇಕಿತ್ತು. ಆದರೆ, ನಾಯಿಗಳನ್ನು ಹಿಡಿದವರು ಶಸ್ತ್ರಚಿಕಿತ್ಸೆಯ ಹಣ ಉಳಿಸಲು ಜೀವಂತ ಸಮಾಧಿ ಮಾಡಿದ್ದಾರೆ ಎಂದು ಪ್ರಾಣಿ ದಯಾ ಸಂಘದ ಸದಸ್ಯರು ಭದ್ರಾವತಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ವಾಹನದಲ್ಲಿ ನಾಯಿಗಳನ್ನು ತುಂಬಿಕೊಂಡು ಬಂದು ತಮ್ಮಡಿಹಳ್ಳಿ ಎಂಪಿಎಂ ಅರಣ್ಯದಲ್ಲಿ ಜೀವಂತ ಸಮಾಧಿ ಮಾಡುತ್ತಿರುವುದನ್ನು ಗಮನಿಸಿದ ಮಹಿಳೆಯರು ಸ್ಥಳೀಯರಿಗೆ ಸುದ್ದಿ ಮುಟ್ಟಿಸಿದ್ದಾರೆ. ಪ್ರಾಣಿ ದಯಾ ಸಂಘಕ್ಕೆ ಮಾಹಿತಿ ನೀಡಿದ್ದಾರೆ. ನಂತರ ಸ್ಥಳ ಪರಿಶೀಲನೆ ಮಾಡಿದಾಗ ಹಲವು ಜಾಗಗಳಲ್ಲಿ ನಾಯಿಗಳನ್ನು ಹೂತಿರುವ ಸಂಗತಿ ಬೆಳಕಿಗೆ ಬಂದಿದೆ.

‘ಬೀದಿನಾಯಿಗಳನ್ನು ಸಾಮೂಹಿಕವಾಗಿ ಜೀವಂತ ಸಮಾಧಿ ಮಾಡಲಾಗಿದೆ ಎಂದು ಮಾಹಿತಿ ಬಂದಿದೆ. ವಿಷಯದ ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ. ನಾಯಿಗಳನ್ನು ಎಲ್ಲಿ ಹಿಡಿಯಲಾಗಿತ್ತು ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಭದ್ರಾವತಿ ತಾಲ್ಲೂಕು ಪಂಚಾಯಿತಿ ಇಒ ರಮೇಶ್ ಪ್ರತಿಕ್ರಿಯಿಸಿದರು.

ಕಪ್ಪು ಶಿಲೀಂಧ್ರ: 10 ದಿನಗಳಲ್ಲಿ 25 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಕಳೆದ 10 ದಿನಗಳಲ್ಲಿ 25 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು ತಗಲಿರುವುದು ದೃಢಪಟ್ಟಿದ್ದು, 7 ಮಂದಿ ಮೃತಪಟ್ಟಿದ್ದಾರೆ.

ಸೋಂಕಿತರ ಒಟ್ಟು ಸಂಖ್ಯೆ 3,904ಕ್ಕೆ ಏರಿಕೆಯಾಗಿದೆ. 12 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಮೂರಂಕಿ ಹಾಗೂ 11 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ವರದಿಯಾದ ಒಟ್ಟು ಪ್ರಕರಣಗಳಲ್ಲಿ ಶೇ 30ಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿವೆ. ಈವರೆಗೆ 1,236 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಅವರಲ್ಲಿ 154 ಮಂದಿ ಸಾವಿಗೀಡಾಗಿದ್ದಾರೆ.

ಧಾರವಾಡದಲ್ಲಿ 345, ವಿಜಯಪುರದಲ್ಲಿ 236, ಕಲಬುರ್ಗಿಯಲ್ಲಿ 216, ಬಳ್ಳಾರಿಯಲ್ಲಿ 176, ಚಿತ್ರದುರ್ಗದಲ್ಲಿ 167, ಬೆಳಗಾವಿಯಲ್ಲಿ 159, ರಾಯಚೂರಿನಲ್ಲಿ 142, ಮೈಸೂರಿನಲ್ಲಿ 137, ಬಾಗಲಕೋಟೆಯಲ್ಲಿ 131, ದಾವಣಗೆರೆಯಲ್ಲಿ 127, ಕೋಲಾರದಲ್ಲಿ 114 ಹಾಗೂ ದಕ್ಷಿಣ ಕನ್ನಡದಲ್ಲಿ 106 ಸೋಂಕು ದೃಢ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ.

ರಾಜ್ಯದ 27 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿದ್ದು, 13 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿಯಲ್ಲಿದೆ. ಧಾರವಾಡದಲ್ಲಿ 50, ಬಳ್ಳಾರಿಯಲ್ಲಿ 28, ದಕ್ಷಿಣ ಕನ್ನಡದಲ್ಲಿ 25, ಕಲಬುರ್ಗಿಯಲ್ಲಿ 24, ದಾವಣಗೆರೆ ಹಾಗೂ ಮೈಸೂರಿನಲ್ಲಿ ತಲಾ 20, ಶಿವಮೊಗ್ಗದಲ್ಲಿ 15, ಬಾಗಲಕೋಟೆಯಲ್ಲಿ 13, ರಾಯಚೂರಿನಲ್ಲಿ 12, ಕೋಲಾರ, ಹಾಸನ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 11 ಹಾಗೂ ಗದಗದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಮರಣ ಹೊಂದಿದವರ ಒಟ್ಟು ಸಂಖ್ಯೆ 458ಕ್ಕೆ ತಲುಪಿದೆ.

ಕೇರಳ ಪ್ರಯಾಣ ಮುಂದೂಡಿ: ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಲ್ಲಿ ಕೋವಿಡ್ ದೃಢ ಪ್ರಕರಣ ಹೆಚ್ಚಿರುವುದರಿಂದ, ಆ ರಾಜ್ಯಕ್ಕೆ ಹೋಗುವವರು ಮತ್ತು ಅಲ್ಲಿಂದ ವಾಪಸ್ ಆಗುವವರು ತಮ್ಮ ಪ್ರಯಾಣವನ್ನು ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಮುಂದೂಡಬೇಕು ಎಂದು ರಾಜ್ಯ ಸರ್ಕಾರ ಸಲಹೆ ನೀಡಿದೆ.

ಕೇರಳದಿಂದ ಇನ್ನೂ ವಾಪಸಾಗದ ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಿಗಳಿಗೆ ಸಂಬಂಧಿಸಿದ ಸಂಸ್ಥೆಗಳ ಆಡಳಿತ ವರ್ಗ ಈ ಬಗ್ಗೆ ಸೂಚನೆ ನೀಡಬೇಕು ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸಲಹೆ ನೀಡಿದ್ದಾರೆ.

ಸಾರ್ವಜನಿಕರು ಕೂಡಾ ತುರ್ತು ಅಗತ್ಯ ಇಲ್ಲದೇ ಇದ್ದರೆ, ತಮ್ಮ ಪ್ರಯಾಣವನ್ನು ಅಕ್ಟೋಬರ್ ಅಂತ್ಯದವರೆಗೆ ಮುಂದೂಡಬೇಕು. ಆ ಮೂಲಕ, ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದಲ್ಲಿ ಕೋವಿಡ್ ಸಂಭವನೀಯ ಮೂರನೇ ಅಲೆ ತಡೆಯಲು ಸಹಕರಿಸಬೇಕು ಎಂದೂ ಅವರು ಮನವಿ ಮಾಡಿದ್ದಾರೆ.

ಕೇರಳದಿಂದ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಸಹಿತ ರಾಜ್ಯಕ್ಕೆ ಬಂದವರನ್ನು ಮತ್ತೆ ತಪಾಸಣೆಗೆ ಒಳಪಡಿಸಿದಾಗ ಅನೇಕರಲ್ಲಿ ಕೋವಿಡ್ ದೃಢಪಟ್ಟಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅಂಥ ಹಲವು ಪ್ರಕರಣಗಳು ಪತ್ತೆ ಆಗಿವೆ. ಹೀಗಾಗಿ, ಕೇರಳಕ್ಕೆ ಹೋಗುವವರು ಮತ್ತು ಅಲ್ಲಿಂದ ರಾಜ್ಯಕ್ಕೆ ಬರುವವರು ಪ್ರಯಾಣವನ್ನು ಮುಂದೂಡಬೇಕು ಎಂದು ಅವರು ತಿಳಿಸಿದ್ದಾರೆ.

ನಿಫಾ: ಬಾಲಕನ ಸಂಪರ್ಕಕ್ಕೆ ಬಂದವರ ಪರೀಕ್ಷಾ ವರದಿ ನೆಗೆಟಿವ್

ಕೋಯಿಕ್ಕೋಡ್ (ಪಿಟಿಐ): ನಿಫಾ ವೈರಾಣು ಸೋಂಕಿನಿಂದ ಮೃತಪಟ್ಟ 12 ವರ್ಷದ ಬಾಲಕನ ನಿಕಟ ಸಂಪರ್ಕದಲ್ಲಿದ್ದವರ ಪರೀಕ್ಷಾ ವರದಿ ಮಂಗಳವಾರ ಬಂದಿದ್ದು ನೆಗೆಟಿವ್ ಇರುವುದರಿಂದ ಕೇರಳದ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್, ಬಾಲಕನ ಪೋಷಕರು, ಆರೋಗ್ಯ ಕಾರ್ಯಕರ್ತರು ಸೇರಿದಂತೆ ಬಾಲಕನ ನಿಕಟ ಸಂಪರ್ಕಕ್ಕೆ ಬಂದ 8 ಮಂದಿಯ ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ಇವರಲ್ಲಿ ಸೋಂಕಿನ ಲಕ್ಷಣಗಳೂ ಇದ್ದವು. ಆದರೆ, ಪರೀಕ್ಷೆ ವರದಿಯು ನೆಗೆಟಿವ್ ಬಂದಿದೆ. ಇದರಿಂದ ಸ್ವಲ್ಪ ಮಟ್ಟಿನ ಸಮಾಧಾನವಾಗಿದೆ’ ಎಂದರು.

‘ಪ್ರಸ್ತುತ 48 ಮಂದಿಗೆ ಸೋಂಕು ತಗುಲುವ ಸಾಧ್ಯತೆ ಅತಿ ಹೆಚ್ಚಿದ್ದು, ಅವರನ್ನು ವೈದ್ಯಕೀಯ ಕಾಲೇಜಿನ ಪ್ರತ್ಯೇಕ ವಾರ್ಡ್‌ನಲ್ಲಿ ಇರಿಸಲಾಗಿದೆ. ಸದ್ಯ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಇನ್ನೂ, ಐದು ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದರು.



ವೀಣಾ ಜಾರ್ಜ್

ಈ 48 ಮಂದಿಯಲ್ಲಿ ಕೋಯಿಕ್ಕೋಡ್ (31), ವಯನಾಡ್ (4), ಮಲಪ್ಪುರಂ(8), ಕಣ್ಣೂರು(3), ಪಾಲಕ್ಕಾಡ್ (1), ಎರ್ನಾಕುಲಂ(1) ಜಿಲ್ಲೆಗಳಿಗೆ ಸೇರಿದವರಾಗಿದ್ದಾರೆ.

‘ಮಂಗಳವಾರ ಇನ್ನಷ್ಟು ಮಾದರಿಗಳನ್ನು ಪರೀಕ್ಷಿಸಲಾಗುವುದು’ ಎಂದು ವೀಣಾ ಜಾರ್ಜ್ ತಿಳಿಸಿದರು.

ಸಾಮೂಹಿಕ ಅತ್ಯಾಚಾರ; 7ನೇ ಆರೋಪಿ ಬಂಧನ

ಮೈಸೂರು: ಇಲ್ಲಿನ ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರ ಗುಡ್ಡದಲ್ಲಿ ಈಚೆಗೆ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದ 7ನೇ ಆರೋಪಿಯನ್ನು ತಮಿಳುನಾಡಿನ ಸುಸೈಪುರಂನಲ್ಲಿ ಮಂಗಳವಾರ ಪೊಲೀಸರು ಬಂಧಿಸಿದ್ದು, ‘ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಲಾಗಿದೆ’ ಎಂದಿದ್ದಾರೆ.

ಆರೋಪಿಯು ಹಲವು ದಿನಗಳಿಂದ ಪದೇ ಪದೇ ಮನೆಗಳನ್ನು ಬದಲಿಸುವ ಮೂಲಕ ಪೊಲೀಸರನ್ನು ಬೇಸ್ತು ಬೀಳಿಸುತ್ತಿದ್ದ. ಮೊಬೈಲ್ ಫೋನ್ ಬಂದ್ ಮಾಡಿಕೊಂಡಿದ್ದ ಆತನ ಬಂಧನ ಸವಾಲಾಗಿ ಪರಿಣಮಿಸಿತ್ತು. ಬಂಧಿತ 6 ಆರೋಪಿಗಳಿಗೆ ಇಲ್ಲಿನ 3ನೇ ಜೆಎಂಎಫ್‌ಸಿ ನ್ಯಾಯಾಲಯವು 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದೆ.



ಮುಳಬಾಗಿಲು ಪಟ್ಟಣದ ಡಿವಿಜಿ ಪೂರ್ವಜರ ಮನೆಯ ಜಾಗದಲ್ಲಿದ್ದ ಸರ್ಕಾರಿ ಕನ್ನಡ ಬಾಲಕಿಯರ ಮಾದರಿ ಶಾಲೆ

ಡಿವಿಜಿ ಮನೆ ನೆಲಸಮ

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ಡಿವಿಜಿ ಎಂದು ಖ್ಯಾತರಾಗಿದ್ದ ಸಾಹಿತಿ ಡಿ.ವಿ. ಗುಂಡಪ್ಪನವರು ಹುಟ್ಟಿ ಬೆಳೆದ, 150 ವರ್ಷಗಳಷ್ಟು ಹಳೆಯದಾದ ಮನೆಯನ್ನು ನಗರಸಭೆ ಮಂಗಳವಾರ ನೆಲಸಮಗೊಳಿಸಿದೆ.

ಪಟ್ಟಣದ ಡಿವಿಜಿ ರಸ್ತೆಯಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಹಳೆಯ ಮನೆಯನ್ನು ಸರ್ಕಾರಿ ಮಾದರಿ ಬಾಲಕಿಯರ ಶಾಲೆಗೆ ಬಿಟ್ಟು ಕೊಡಲಾಗಿತ್ತು. ಡಿವಿಜಿ ಬೆಂಗಳೂರಿನಲ್ಲಿ ನಲೆನಿಂತ ಮೇಲೆ ಪೂರ್ವಜರ ಮನೆಯನ್ನು ಶಾಲೆಗೆ ದಾನ ಮಾಡಿದ್ದರು. ಸದ್ಯ ಅಲ್ಲಿ ಶಾಲೆ ನಡೆಯುತ್ತಿತ್ತು.

ಅಮೆರಿಕದ ಒಸಾಟ್ ಸರ್ಕಾರೇತರ ಸಂಸ್ಥೆಯು ₹7 ಕೋಟಿ ಅಂದಾಜು ವೆಚ್ಚದಲ್ಲಿ ಈ ಜಾಗದಲ್ಲಿ ಸುಸಜ್ಜಿತ ಶಾಲೆ ನಿರ್ಮಿಸಲು ಮುಂದಾಗಿದೆ. ಈಗಾಗಲೇ ನೆರೆಯ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಈ ಸಂಸ್ಥೆಯು ಸುಸಜ್ಜಿತ ಶಾಲೆಗಳನ್ನು ನಿರ್ಮಿಸಿದೆ.

‘ಮೂರ್ನಾಲ್ಕು ಬೃಹತ್ ಯಂತ್ರಗಳನ್ನು ಬಳಸಿ ಹಳೆಯ ಕಟ್ಟಡ ನೆಲಸಮ ಮಾಡುವ ಕೆಲಸ ಸೋಮವಾರದಿಂದಲೇ ಆರಂಭವಾಗಿತ್ತು. ಈ ಜಾಗದಲ್ಲಿ ಶೀಘ್ರ ಹೊಸ ಕಟ್ಟಡ ನಿರ್ಮಾಣ ಕೆಲಸ ಆರಂಭವಾಗಲಿದೆ. ಕ್ರೀಡಾಂಗಣ, ಗ್ರಂಥಾಲಯ ನಿರ್ಮಿಸುವ ಯೋಜನೆ ಇದೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಗಿರಿಜೇಶ್ವರಿ ತಿಳಿಸಿದ್ದಾರೆ.

ವಜಾ ನೌಕರರಿಗೆ ಮತ್ತೆ ಉದ್ಯೋಗ: ಶ್ರೀರಾಮುಲು

ಪ್ರಜಾವಾಣಿ ವಾರ್ತೆ

ತುಮಕೂರು: ಮುಷ್ಕರದ ಸಮಯದಲ್ಲಿ ವಜಾಗೊಂಡಿರುವ ವಿವಿಧ ಸಾರಿಗೆ ನಿಗಮಗಳ ನೌಕರರು, ಸಿಬ್ಬಂದಿಯನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಮಂಗಳವಾರ ಭರವಸೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸಾರಿಗೆ ನೌಕರರು ಮುಷ್ಕರ ನಡೆಸಿದ ಸಮಯದಲ್ಲಿ ಕೆಲವರನ್ನು ವಜಾ ಮಾಡಲಾಗಿದೆ. ಮತ್ತೆ ಕೆಲವರನ್ನು ಅಮಾನತು ಮಾಡಲಾಗಿದೆ. ಇನ್ನೂ ಕೆಲವರನ್ನು ಹೊರ ಜಿಲ್ಲೆಗಳಿಗೆ ವರ್ಗಾಯಿಸಲಾಗಿದೆ. ಈ ಎಲ್ಲರ ಪಟ್ಟಿ ನೀಡುವಂತೆ ಅಧಿಕಾರಿಗಳನ್ನು ಕೇಳಲಾಗಿದೆ. ಮಾಹಿತಿ ನನ್ನ ಕೈಸೇರಿದ ಬಳಿಕ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಹಿಂದೆ ಕೆಲಸ ನಿರ್ವಹಿಸುತ್ತಿದ್ದ ಸ್ಥಳದಿಂದ ಹೊರ ಜಿಲ್ಲೆಗಳಿಗೆ ವರ್ಗಾವಣೆಯಾಗಿದ್ದು, ಅಲ್ಲಿ ನೌಕರರು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಅಂತಹವರನ್ನು ಮತ್ತೆ ಅದೇ ಜಾಗಕ್ಕೆ ವರ್ಗಾವಣೆ ಮಾಡಿಕೊಡಲಾಗುವುದು. ಅಮಾನತುಗೊಂಡವರನ್ನು ಕೆಲಸಕ್ಕೆ ಸೇರಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಕೋವಿಡ್ ಪರಿಣಾಮ–‘ಸ್ಕೂಲ್’ ಸಂಘಟನೆ ನಡೆಸಿದ ಸಮೀಕ್ಷೆಯಿಂದ ಬಹಿರಂಗ

ಗ್ರಾಮೀಣದಲ್ಲಿ ಶೇ 37, ನಗರಗಳಲ್ಲಿ ಶೇ 42ರಷ್ಟು ಓದು ಕಷ್ಟ

ನವದೆಹಲಿ (ಪಿಟಿಐ): ನಗರ ಪ್ರದೇಶಗಳಲ್ಲಿ ಶೇ 19 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶೇ 37ರಷ್ಟು ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರತರಾಗಿಲ್ಲ. ಒಟ್ಟಾರೆ ಶೇ 48ರಷ್ಟು ವಿದ್ಯಾರ್ಥಿಗಳು ಕೆಲವು ಪದಗಳನ್ನು ಹೊರತುಪಡಿಸಿ ಸರಳವಾಗಿ ಓದಲೂ ಅಶಕ್ತರಾಗಿದ್ದಾರೆ.

–ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯವನ್ನು ಕುರಿತಂತೆ ಈಚೆಗೆ ನಡೆದ ಸಮೀಕ್ಷೆಯಲ್ಲಿ ವ್ಯಕ್ತವಾಗಿರುವ ಅಂಶವಿದು. ಕೋವಿಡ್ ಕಾರಣದಿಂದಾಗಿ ಸುದೀರ್ಘ ಕಾಲದಿಂದ ಶಾಲೆಗಳು ಮುಚ್ಚಿರುವುದರ ದುರಂತ ಪರಿಣಾಮವಿದು ಎಂದು ಸಮೀಕ್ಷೆಯ ವರದಿ ಹೇಳಿದೆ.

‘ಸ್ಕೂಲ್’ (ಸ್ಕೂಲ್ ಚಿಲ್ಡ್ರನ್ಸ್ ಆಫ್‌ಲೈನ್, ಆನ್‌ಲೈನ್ ಲರ್ನಿಂಗ್) ಸಂಸ್ಥೆಯು ‘ಬೀಗಮುದ್ರೆ: ಶಾಲಾ ಶಿಕ್ಷಣ ಕುರಿತ ತುರ್ತು ವರದಿ’ ಶೀರ್ಷಿಕೆಯಲ್ಲಿ ಈ ವರದಿ ಪ್ರಕಟಿಸಿದೆ. 15 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಗಸ್ಟ್ ತಿಂಗಳು ಸಮೀಕ್ಷೆ ನಡೆದಿದ್ದು, ಕಡುಬಡತನದ 1,400 ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಆಧರಿಸಿದೆ.

ವರದಿಯ ಪ್ರಕಾರ, ಸಮೀಕ್ಷೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ನಿರಾಶಾದಾಯಕವಾಗಿವೆ. ಗ್ರಾಮೀಣ ಭಾಗದಲ್ಲಿ ಶೇ 28ರಷ್ಟು ವಿದ್ಯಾರ್ಥಿಗಳು ನಿಯಮಿತವಾಗಿ ಕಲಿಯುತ್ತಿದ್ದಾರೆ. ಶೇ 37ರಷ್ಟು ವಿದ್ಯಾರ್ಥಿಗಳು ಕಲಿಕೆಯಿಂದ ವಿಮುಖರಾಗಿದ್ದಾರೆ. ಕೆಲ ಶಬ್ದ ಹೊರತುಪಡಿಸಿ ಸರಳ ಓದು ಕೂಡಾ ಈ ಮಕ್ಕಳಿಗೆ ಸಾಧ್ಯವಾಗಿಲ್ಲ ಎಂದೂ ತಿಳಿಸಿದೆ.



ನಿಯಮಿತವಾಗಿ ಕಲಿಯುತ್ತಿರುವ, ಕಲಿಕೆಯಿಂದ ವಿಮುಖರಾದವರ ಮತ್ತು ಕೆಲ ಪದ ಹೊರತುಪಡಿಸಿ ಓದಲೂ ಶಕ್ತರಲ್ಲದ ವಿದ್ಯಾರ್ಥಿಗಳ ಪ್ರಮಾಣ ನಗರಪ್ರದೇಶದಲ್ಲಿ ಕ್ರಮವಾಗಿ ಶೇ 47, ಶೇ 19 ಮತ್ತು ಶೇ 42ರಷ್ಟಿದೆ ಎಂದು ಸಮೀಕ್ಷೆಯು ವಿವರಿಸಿದೆ.

‘ಸ್ಕೂಲ್’ ಸಮೀಕ್ಷೆಯಲ್ಲಿ ವ್ಯಕ್ತವಾಗಿರುವ ಇನ್ನೊಂದು ಅಂಶವೆಂದರೆ, ಬಹುತೇಕ ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳಿರುವ ಹಾಡಿಗಳಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿರುವುದು.

ಕೋವಿಡ್ ಸೋಂಕು ಏರಿಕೆಯ ಹಿಂದೆಯೇ ಬಹುತೇಕ ಒಂದೂವರೆ ವರ್ಷದಿಂದ ಶಿಕ್ಷಣ ಸಂಸ್ಥೆಗಳು ಬಂದ್ ಆಗಿವೆ. ಸದ್ಯ, ಪರಿಸ್ಥಿತಿ ಸುಧಾರಿಸುತ್ತಿದ್ದು, ಹೆಚ್ಚಿನ ರಾಜ್ಯಗಳಲ್ಲಿ ಸೆಪ್ಟೆಂಬರ್ ತಿಂಗಳಿಂದ ಹಂತ ಹಂತವಾಗಿ ಶಾಲೆಗಳು ಪುನಾರಂಭವಾಗುತ್ತಿವೆ.

ಶಾಲೆಗಳನ್ನು ಆದಷ್ಟು ಶೀಘ್ರ ಪುನಾರಂಭಿಸಬೇಕು ಎಂಬುದು ಬಹುತೇಕ ವಿದ್ಯಾರ್ಥಿಗಳ ಅನಿಸಿಕೆ. ಎಷ್ಟು ಸಾಧ್ಯವೋ, ಅಷ್ಟು ಬೇಗ ಶಾಲೆಗಳನ್ನು ಪುನಾರಂಭ ಮಾಡಿ ಎಂಬುದು ಶೇ 98ರಷ್ಟು ಪರಿಶಿಷ್ಟ ಜಾತಿ, ಪಂಗಡ ವಿದ್ಯಾರ್ಥಿಗಳ ಅನಿಸಿಕೆ.

ಪರಿಸ್ಥಿತಿಯನ್ನು ಸುಧಾರಿಸುವ ಮಾರ್ಗದಲ್ಲಿ ಶಾಲೆಗಳನ್ನು ಪುನರಾರಂಭ ಮಾಡುವುದು ಮೊದಲ ಹೆಜ್ಜೆ ಮಾತ್ರ. ಕೋವಿಡ್‌ನಿಂದ ಆಗಿರುವ ಪರಿಣಾಮಗಳನ್ನು ಸರಿಪಡಿಸಲು ವರ್ಷಗಳೇ ಬೇಕಾಗಬಹುದು ಎಂಬ ಅಭಿಪ್ರಾಯವನ್ನು ಸಮೀಕ್ಷೆಯಲ್ಲಿ ವ್ಯಕ್ತಪಡಿಸಲಾಗಿದೆ.

ಅರ್ಥಿಕ ತಜ್ಞರಾದ ಜೀನ್ ಡ್ರೀಜ್, ನಿರಾಲಿ ಭಕ್ಲಾ ಒಳಗೊಂಡಂತೆ ಹಲವು ಪರಿಣಿತರ ನೇತೃತ್ವದಲ್ಲಿ ಸಮೀಕ್ಷೆ ನಡೆದಿದ್ದು, ಸುಮಾರು 100 ಮಂದಿ ಸ್ವಯಂಸೇವಕರು ಪಾಲ್ಗೊಂಡಿದ್ದರು.

ಆನ್‌ಲೈನ್ ತರಗತಿ: ತಲುಪಿದ್ದೆಷ್ಟು?

ಆನ್‌ಲೈನ್ ಮೂಲಕ ನಿಯಮಿತವಾಗಿ ತರಗತಿಗಳಿಗೆ ಹಾಜರಾಗುತ್ತಿರುವ ಮಕ್ಕಳ ಪ್ರಮಾಣ ನಗರ ಪ್ರದೇಶದಲ್ಲಿ ಶೇ 24 ಇದ್ದರೆ, ಗ್ರಾಮೀಣ ಭಾಗದಲ್ಲಿ ಶೇ 8ರಷ್ಟಿದೆ. ಆರ್ಥಿಕ ಸಮಸ್ಯೆ, ನೆಟ್‌ವರ್ಕ್ ಅಲಭ್ಯತೆ, ಸ್ಮಾರ್ಟ್‌ಫೋನ್ ಖರೀದಿಸಲು ಶಕ್ತರಲ್ಲದಿರುವುದು ಆನ್‌ಲೈನ್ ತರಗತಿ ಎಟುಕದಿರಲು ಕಾರಣಗಳು ಎಂದು ವರದಿ ಉಲ್ಲೇಖಿಸಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡ ಹೆಚ್ಚಿನ ಕುಟುಂಬಗಳು ಹೇಳಿದ ಕಾರಣ ಸ್ಮಾರ್ಟ್ ಫೋನ್ ಇಲ್ಲ ಎಂಬುದೇ ಆಗಿದೆ. ಆದರೆ, ಇದು ಮೊದಲ ತಡೆಗೋಡೆಯಷ್ಟೇ. ಸ್ಮಾರ್ಟ್ ಫೋನ್ ಇರುವ ಕುಟುಂಬಗಳಲ್ಲಿಯೂ ನಿಯಮಿತವಾಗಿ ತರಗತಿಗೆ ಬರುವ ಮಕ್ಕಳ ಸಂಖ್ಯೆ ನಗರ ಪ್ರದೇಶದಲ್ಲಿ ಶೇ 31, ಗ್ರಾಮೀಣ ಭಾಗದಲ್ಲಿ ಶೇ 15ರಷ್ಟು ಮಾತ್ರ. ಬಹುತೇಕ ಸಂದರ್ಭದಲ್ಲಿ ಪೋಷಕರ ಫೋನ್ ಅನ್ನು ಮನೆಯ ಹಿರಿಯ ಮಗ, ಮಗಳು ಬಳಸಿದರೆ, ಕಿರಿಯರು ಆಗ ಆ ಅವಕಾಶದಿಂದಲೂ ವಂಚಿತರಾಗುತ್ತಾರೆ.

ದಲಿತರು, ಆದಿವಾಸಿ ಕುಟುಂಬಗಳ ಮಕ್ಕಳನ್ನು ಗಮನಿಸಿದರೆ ಪರಿಸ್ಥಿತಿ ಇನ್ನೂ ದುಸ್ತರವಾಗಿದೆ. ಕಲಿಕೆಯ ಗುಣಮಟ್ಟ, ನಿಯಮಿತ ಹಾಜರಾತಿ, ಓದುವ ಸಾಮರ್ಥ್ಯ ಆತಂಕಕರ ಸ್ಥಿತಿಯಲ್ಲಿದೆ ಎನ್ನುತ್ತದೆ ಸಮೀಕ್ಷೆ.


ಉದಾಹರಣೆಗೆ, ಗ್ರಾಮೀಣ ಭಾಗದಲ್ಲಿ ಶೇ 4ರಷ್ಟು ಎಸ್‌ಸಿ., ಎಸ್‌ಟಿ ಮಕ್ಕಳು ಮಾತ್ರವೇ ನಿಯಮಿತವಾಗಿ ಆನ್‌ಲೈನ್ ತರಗತಿಗೆ ಹಾಜರಾಗುತ್ತಾರೆ. ಆನ್‌ಲೈನ್ ತರಗತಿಗೆ ಹಾಜರಾಗುವ ಗ್ರಾಮೀಣ ಭಾಗದ ಎಸ್‌ಸಿ., ಎಸ್‌ಟಿಯೇತರ ಮಕ್ಕಳ ಪ್ರಮಾಣ ಶೇ 15ರಷ್ಟಿದೆ.

ಬುಧವಾರ, ಸೆಪ್ಟೆಂಬರ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 251 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಶಿಕ್ಷಣ ಕ್ಷೇತ್ರದಲ್ಲಿ ಆ್ಯಪ್‌ಗಳ ಬಳಕೆ ಅನಿವಾರ್ಯ. ಇಂದು ಲಭ್ಯವಿರುವ ಆ್ಯಪ್‌ಗಳಲ್ಲಿ ಅತಿ ಹೆಚ್ಚು ಸಂಖ್ಯೆಯ ಆ್ಯಪ್‌ಗಳು ಬಳಕೆಯಲ್ಲಿರುವುದು ಶಿಕ್ಷಣ ಕ್ಷೇತ್ರದಲ್ಲಿ!



ತೆಂಗಿಗೆ ರಸಹೀರುವ ಕೀಟಬಾಧೆ 4

ಅನುಭವ ಮಂಟಪ
ಉದಾರೀಕರಣ ಸೃಷ್ಟಿಸಿದ ಉದ್ಯೋಗದ ಮರೀಚಿಕೆ

ಪಾಕ್ ವಿರುದ್ಧ ಅಫ್ಗನ್ನರ ಪ್ರತಿಭಟನೆ 9

ಸೆನ್ಸೆಕ್ಸ್	ನಿಫ್ಟಿ	₹/$
58,279 ▼	17,362 ▼	73.42 ▼



ರಾಜ್ಯ ಕೋವಿಡ್ ಅಂಕಿ–ಅಂಶ

29,56,988 ▲ ಒಟ್ಟು ಸೋಂಕಿತರು
(29,56,137 ನಿನ್ನೆಯ ವಿವರ)

17,432 ▲ ಸಕ್ರಿಯ ಪ್ರಕರಣಗಳು

29,02,089 ▲ ಗುಣಮುಖರಾದವರು

37,441 ▲ ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	851	▼
ಗುಣಮುಖ	790	▼
ಸಾವು	15	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗ್ರಾ.ಪಂ ಎನ್‌ಒಸಿ ಅನಗತ್ಯ– 100 ದಿನಗಳಲ್ಲಿ ವಿದ್ಯುತ್ ಸಂಪರ್ಕ: ಇಂಧನ ಸಚಿವ

ಹಳ್ಳಿ: 3 ಲಕ್ಷ ಮನೆಗಳಿಗೆ ಬೆಳಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನು, ಡೀಮ್ಡ್ ಅರಣ್ಯ ಸೇರಿ ಹಲವು ಕಡೆಗಳಲ್ಲಿ ಮನೆ ಕಟ್ಟಿಕೊಂಡಿರುವ ಕಡು ಬಡವರಿಗೆ ಮುಂದಿನ ನೂರು ದಿನಗಳಲ್ಲಿ ವಿದ್ಯುತ್ ಸಂಪರ್ಕ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

‘ಈ ರೀತಿ ವಿದ್ಯುತ್ ‘ಬೆಳಕು’ ಕಾಣದೇ ಕಳೆದ 10–15 ವರ್ಷಗಳಿಂದ ದಿನದೂಡುತ್ತಿರುವ ಸುಮಾರು 3 ಲಕ್ಷ ಕುಟುಂಬಗಳು ಇದ್ದು, ಎಲ್ಲರಿಗೂ ವಿದ್ಯುತ್ ಸಂಪರ್ಕ ನೀಡಲಾಗುವುದು’ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

‘ರಾಜ್ಯ ಸರ್ಕಾರದ ‘ಬೆಳಕು’ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲಾಗುವುದು. ಇದಕ್ಕಾಗಿ ಸಬ್ ಸ್ಟೇಷನ್‌ಗಳಲ್ಲಿ ಅರ್ಜಿ ನೀಡಲಾಗುತ್ತದೆ. ಅದನ್ನು ಪಡೆದುಕೊಂಡು ತಕ್ಷಣವೇ ಅರ್ಜಿ ಸಲ್ಲಿಸಬೇಕು. ಇದಕ್ಕಾಗಿ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದು ಬೇಕಿಲ್ಲ. ಬಿಪಿಎಲ್, ಎಪಿಎಲ್ ಪಡಿತರ ಚೀಟಿ ಆಧರಿಸಿ ವಿದ್ಯುತ್ ಸಂಪರ್ಕವನ್ನು ನೀಡಲು ತೀರ್ಮಾನಿಸಲಾಗಿದೆ’ ಎಂದು ಅವರು ತಿಳಿಸಿದರು.

ಕೋವಿಡ್‌ ಸಂದರ್ಭದಲ್ಲಿ ಈ ಭಾಗದಲ್ಲಿರುವ ಶಾಲಾ– ಕಾಲೇಜು ವಿದ್ಯಾರ್ಥಿಗಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಲು ವಿದ್ಯುತ್ ಸಂಪರ್ಕ



ಇಲ್ಲದಿರುವುದೂ ಒಂದು ಮುಖ್ಯ ಕಾರಣ. ಆದ್ದರಿಂದ, ವಿದ್ಯುತ್ ಸಂಪರ್ಕ ಪಡೆಯಲು ಗ್ರಾಮ ಪಂಚಾಯಿಯಿಂದ ಎನ್‌ಒಸಿ ಪಡೆಯಬೇಕು ಎಂಬ ನಿಯಮವನ್ನು ಹಿಂದಕ್ಕೆ ಪಡೆಯುವುದಾಗಿ ಹೇಳಿದರು.

‘ಒಂದು ವೇಳೆ ಅನಧಿಕೃತ ಕಟ್ಟಡಗಳು ಇದ್ದರೆ ಗ್ರಾಮ ಪಂಚಾಯಿತಿ ಕ್ರಮ ತೆಗೆದುಕೊಳ್ಳಬಹುದು. ಎಲ್ಲ ಮನೆಗಳಿಗೆ ವಿದ್ಯುತ್ ದೀಪ ನೀಡಬೇಕು ಎಂಬ ಮುಖ್ಯಮಂತ್ರಿಯವರ ನಿರ್ದೇಶನದ ಮೇರೆಗೆ ಎಲ್ಲರಿಗೂ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ಇದನ್ನು ಕಾರ್ಯಗತಗೊಳಿಸಲು ಸರ್ಕಾರಕ್ಕೆ ಹೊರೆ ಆಗುತ್ತದೆ. ಸುಮಾರು ₹80 ಕೋಟಿ ಬೇಕಾಗಬಹುದು. ಆದರೆ, ಬಡವರ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಆಗಬೇಕು. ಅವರು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ದೃಢ ನಿರ್ಧಾರ ತೆಗೆದು- ಕೊಂಡಿದ್ದೇವೆ’ ಎಂದರು.

ಇದಕ್ಕೆ ಮುನ್ನ ಬಿಜೆಪಿಯ ರಾಜ್ಯ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂಧನ ಇಲಾಖೆಯಲ್ಲಿ 100 ದಿನಗಳ ಕಾರ್ಯಕ್ರಮ ರೂಪಿಸಿದ್ದು, ಸೆಪ್ಟೆಂಬರ್ 1 ರಿಂದಲೇ ಜಾರಿಗೆ ಬಂದಿದೆ. ವಿದ್ಯುತ್ ವಂಚಿತ ಕುಟುಂಬಗಳ ಜಿಲ್ಲಾವಾರು ನಿಖರ ಅಂಕಿ– ಅಂಶಗಳನ್ನು ಸಂಗ್ರಹಿಸಿ ಜಾರಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಪ್ರೀಪೇಯ್ಡ್ ಮೀಟರ್: ಸಚಿವರ ಸರ್ಕಾರಿ ವಸತಿ ಗೃಹಗಳು ಸೇರಿ ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಿಗೆ ಪ್ರೀಪೇಯ್ಡ್ ವಿದ್ಯುತ್ ಮೀಟರ್ ಅಳವಡಿಸಲಾಗುವುದು ಎಂದು ಹೇಳಿದರು.

‘ಗಂಗಾ ಕಲ್ಯಾಣ’ ಯೋಜನೆಯನ್ನು ಅನುಷ್ಠಾನಗೊಳಿಸುವ ವಿವಿಧ ಅಭಿವೃದ್ಧಿ ನಿಗಮಗಳೇ ವಿದ್ಯುದ್ದೀ- ಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು. ಆದರೆ, ಫಲಾನುಭವಿ ರೈತರೇ ಕಚೇರಿಗಳಿಗೆ ಅಲೆಯುವಂತಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು 30 ದಿನಗಳ ಕಾಲಮಿತಿ ವಿಧಿಸಲಾಗಿದೆ. ಈ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲು ವಿವಿಧ ಎಸ್ಕಾಂಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಉತ್ತರ ಕರ್ನಾಟಕದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆ ವಿದ್ಯುತ್ ನೀಡಬೇಕು ಎಂಬ ಬೇಡಿಕೆ ಇತ್ತು. ಇದಕ್ಕಾಗಿ ವಿವಿಧೆಡೆ 60 ಕ್ಕೂ ಹೆಚ್ಚು ಸಬ್ ಸ್ಟೇಷನ್‌ಗಳನ್ನು ಇನ್ನು 100 ದಿನಗಳ ಒಳಗೆ ಕೆಪಿಟಿಸಿಎಲ್ ಮೂಲಕ ನಿರ್ಮಿಸಲಾಗುವುದು. ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಏಳು ಗಂಟೆ ವಿದ್ಯುತ್ ನೀಡಲು ಇದರಿಂದ ಸಾಧ್ಯವಾಗಲಿದೆ ಎಂದು ತಿಳಿಸಿದರು.

‘ರಾಜ್ಯದಾದ್ಯಂತ ಎಲೆಕ್ಟ್ರಿಕ್ ರೀಚಾರ್ಜ್ ಘಟಕಗಳ ಆರಂಭ’

ಮಾರುಕಟ್ಟೆಗೆ ಹೆಚ್ಚು ವಿದ್ಯುತ್ ಚಾಲಿತ ವಾಹನಗಳು ಬರುತ್ತಿರುವುದರಿಂದ ರಾಜ್ಯದಾದ್ಯಂತ ಎಲೆಕ್ಟ್ರಿಕ್ ರೀಚಾರ್ಜ್ ಘಟಕಗಳನ್ನು ಆರಂಭಿಸಲಾಗುವುದು ಎಂದು ಸಚಿವ ಸುನೀಲ್ ಕುಮಾರ್ ಹೇಳಿದರು.

ಎಲ್ಲ ಜಿಲ್ಲಾ ಕೇಂದ್ರಗಳು, ಪ್ರವಾಸೋದ್ಯಮ ಕೇಂದ್ರಗಳಲ್ಲಿ ರೀಚಾರ್ಜ್ ಘಟಕಗಳನ್ನು ತೆರೆಯಲು ಬೇರೆ ಬೇರೆ ಎಸ್ಕಾಂಗಳಿಗೆ ಗುರಿ ನೀಡಲಾಗುವುದು. ರಾಜ್ಯದಲ್ಲಿ 500 ಎಲೆಕ್ಟ್ರಿಕ್ ರೀಚಾರ್ಜ್ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ ಎಂದೂ ತಿಳಿಸಿದರು.


ಸುನೀಲ್ ಕುಮಾರ್

ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸುವ ಉದ್ಯಮಗಳ ಮುಖ್ಯಸ್ಥರ ಸಭೆಯನ್ನು ಇದೇ 18 ರಂದು ಕರೆಯಲಾಗುವುದು. ಅವರ ಜತೆ ಸಮಾಲೋಚನೆ ನಡೆಸಿ, ರಾಜ್ಯದಲ್ಲಿ ಎಲೆಕ್ಟ್ರಿಕ್ ರೀಚಾರ್ಜಿಂಗ್ ಘಟಕಗಳ ಬೇಡಿಕೆ ಪ್ರಮಾಣ ತಿಳಿದುಕೊಳ್ಳಲಾಗುವುದು ಎಂದರು.

ಕೃಷಿ ಕಾಯ್ದೆ: ಸಮಿತಿ ವರದಿ ಬಿಡುಗಡೆಗೆ ಮನವಿ


ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ಕುರಿತು ಸುಪ್ರೀಂ ಕೋರ್ಟ್ ನೇಮಿಸಿದ್ದ ಸಮಿತಿಯ ಸದಸ್ಯ- ರೊಬ್ಬರು ಸಮಿತಿಯ ವರದಿ ಬಿಡುಗಡೆ ಮಾಡುವಂತೆ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರನ್ನು ಕೇಳಿದ್ದಾರೆ.

ಶೇಟ್ಕಾರಿ ಸಂಘಟನೆಯ ಅಧ್ಯಕ್ಷರೂ ಆಗಿರುವ ಅನಿಲ್ ಘನ್ವತ್ ಅವರು ಸಿಜೆಐ ಅವರಿಗೆ ಬರೆದ ಪತ್ರದಲ್ಲಿ, ವರದಿಯನ್ನು ಸರ್ಕಾರದ ಜೊತೆ ಹಂಚಿಕೊಳ್ಳುವಂತೆ ಕೋರಿದ್ದಾರೆ. ‘ವರದಿಯು ರೈತರ ಎಲ್ಲಾ ಆತಂಕಗಳನ್ನು ಪ್ರಸ್ತಾಪಿಸಿದೆ. ಸಮಿತಿ ಮಾಡಿರುವ ಶಿಫಾರಸುಗಳು ರೈತರ ಸಮಸ್ಯೆಗಳನ್ನು ಪರಿಹರಿಸಲು ದಾರಿ ಮಾಡಿಕೊಡುತ್ತವೆ ಎಂಬುದು ಸಮಿತಿ ವಿಶ್ವಾಸ’ ಎಂದು ಅವರು ಉಲ್ಲೇಖಿಸಿ- ದ್ದಾರೆ.

ಕಾಯ್ದೆ ಜಾರಿ ಸ್ಥಗಿತಗೊಳಿಸಿದ್ದ ಕೋರ್ಟ್, ವರದಿ ನೀಡಲು ಕಳೆದ ಜನವರಿ 12ರಂದು ಸಮಿತಿಯೊಂದನ್ನು ರಚಿಸಿತ್ತು. ರೈತ ಸಮುದಾಯದ ಪ್ರತಿನಿಧಿಗಳಲ್ಲಿ ಒಬ್ಬರನ್ನಾಗಿ ಘನ್ವತ್ ಅವರನ್ನು ನಾಮನಿರ್ದೇಶನ ಮಾಡಲಾಗಿತ್ತು.

ಅಫ್ಗನ್: ಮುಲ್ಲಾ ಅಕುಂದ್ ಮುಖ್ಯಸ್ಥ



ಕಾಬೂಲ್ (ಎಎಫ್‌ಪಿ): ವಿಶ್ವ ಸಂಸ್ಥೆಯು ನಿಷೇಧ ಹೇರಿರುವ ಮುಲ್ಲಾ ಮೊಹಮ್ಮದ್ ಹಸನ್ ಅಕುಂದ್ ಅವರನ್ನು ಅಫ್ಘಾನಿಸ್ತಾನದ ಹೊಸ ಸರ್ಕಾರದ ಮುಖ್ಯಸ್ಥ ಎಂದು ತಾಲಿಬಾನ್ ಮಂಗಳವಾರ ಘೋಷಿಸಿದೆ.

9





ಸಾರ್ವಜನಿಕ ಸ್ಥಳದಲ್ಲಿ 4 ಅಡಿ, ಮನೆಯಲ್ಲಿ 2 ಅಡಿ ಮೂರ್ತಿಗೆ ಅವಕಾಶ

ವಾರ್ಡ್‌ಗೊಂದೇ ಗಣಪ, ಮೂರೇ ದಿನ ಉತ್ಸವ

ಪ್ರಜಾವಾಣಿ ವಾರ್ತೆ



ಗೌರವ ಗುಪ್ತ

ಬೆಂಗಳೂರು: ವಾರ್ಡ್‌ಗೆ ಒಂದೇ ಸಾರ್ವಜನಿಕ ಗಣೇಶ, ಮೂರೇ ದಿನ ಉತ್ಸವ, ನಾಲ್ಕು ಅಡಿ ಎತ್ತರದ ಮೂರ್ತಿ...

ಇವು ಗಣಪತಿ ಹಬ್ಬ ಆಚರಣೆ ಸಂಬಂಧ ಬಿಬಿಎಂಪಿ ಹೊರಡಿಸಿರುವ ಹೊಸ ಆದೇಶದಲ್ಲಿರುವ ನಿರ್ಬಂಧಗಳು.

ಗಣೇಶ ಉತ್ಸವ ಆಚರಣೆ ಸಂಬಂಧ ಪೊಲೀಸ್ ಅಧಿಕಾರಿಗಳು ಮತ್ತು ಬಿಬಿಎಂಪಿ ಅಧಿಕಾರಿಗಳ ಜತೆ ಮಂಗಳವಾರ ಜಂಟಿ ಸಭೆ ನಡೆಸಿದ ಪಾಲಿಕೆ ಮುಖ್ಯ ಆಯುಕ್ತ ಗೌರವ ಗುಪ್ತ ಈ ಆದೇಶ ಹೊರಡಿಸಿದ್ದಾರೆ.

'ಗಣೇಶ ಮೂರ್ತಿಯನ್ನು ನಗರದಲ್ಲಿ ಎಲ್ಲೆಂದರಲ್ಲಿ ಪ್ರತಿಷ್ಠಾಪನೆ ಮಾಡುವಂತಿಲ್ಲ. ಪ್ರತಿಷ್ಠಾಪನೆಗೆ ಅನುಮತಿ ಕೋರಿ ಬರುವ ಅರ್ಜಿ ಆಧರಿಸಿ ಪೊಲೀಸ್ 'ಇನ್‌ಸ್ಪೆಕ್ಟರ್', ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಒಳಗೊಂಡ ಸಮಿತಿಯು ಸ್ಥಳ ನಿಗದಿಪಡಿಸಲಿದೆ. ಬಳಿಕ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅನುಮತಿ ನೀಡಬೇಕು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಸಾರ್ವಜನಿಕ ಪ್ರದೇಶದಲ್ಲಿ 4 ಅಡಿ ಮತ್ತು ಮನೆಯಲ್ಲಿ 2 ಅಡಿ ಎತ್ತರ ಮೀರದಂತೆ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಬಹುದು. ಸಾರ್ವಜನಿಕ ಗಣೇಶ ಮೂರ್ತಿಯಿಂದ ವಾಹನ ಮತ್ತು ಜನ ಸಂಚಾರಕ್ಕೆ ತೊಂದರೆ ಆಗದಂತೆ ಸಂಚಾರ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆದೇಶದಲ್ಲಿ ಸೂಚಿಸಿದ್ದಾರೆ.

'3 ದಿನ ಮಾತ್ರ ಉತ್ಸವ ನಡೆಸಬಹುದು. ಈ ನಿಯಮ ಕಳೆದ ವರ್ಷವೂ ಜಾರಿಯಲ್ಲಿತ್ತು. ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ 20 ಜನರು ಮಾತ್ರ ಸೇರಲು ಅವಕಾಶವಿರುವಂತೆ ಸೀಮಿತ ಪೆಂಡಾಲ್ ಅಳವಡಿಸಬೇಕು. ಏಕಕಾಲದಲ್ಲಿ ಅದಕ್ಕಿಂತ ಹೆಚ್ಚು ಭಕ್ತರು ಸೇರದಂತೆ ನೋಡಿಕೊಳ್ಳಬೇಕು. ಅಲ್ಲಿ ಕೋವಿಡ್ ನಿಯಮ ಕಟ್ಟುನಿಟ್ಟಿನ ಪಾಲನೆಗೆ ಗೃಹ ರಕ್ಷಕ ಸಿಬ್ಬಂದಿ ಮತ್ತು ಮಾರ್ಷಲ್‌ಗಳನ್ನು ನಿಯೋಜಿಸಲಾಗುವುದು. ನಿಯಮ ಉಲ್ಲಂಘಿಸಿದರೆ ಅವರು ಸ್ಥಳದಲ್ಲೇ ದಂಡ ವಿಧಿಸಲಿದ್ದಾರೆ' ಎಂದು ವಿವರಿಸಿದ್ದಾರೆ.

'ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಸಿ ಗಣೇಶ ಮೂರ್ತಿ ತಯಾರಿಸುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಈ ವಸ್ತುಗಳಲ್ಲಿ ಮೂರ್ತಿ ತಯಾರಿಸಿದರೆ ದಂಡ ವಿಧಿಸಲಾಗುವುದು' ಎಂದು ಅವರು ಆದೇಶದಲ್ಲಿ ಎಚ್ಚರಿಸಿದ್ದಾರೆ.

ಮನೆಯಲ್ಲಿ ಪ್ರತಿಷ್ಠಾಪಿಸುವ ಮೂರ್ತಿಗಳನ್ನು ಕೆರೆಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಮನೆಯಲ್ಲಿಯೇ ಅಥವಾ ಪಾಲಿಕೆಯ ಸಂಚಾರ ಟ್ಯಾಂಕರ್‌ಗಳಲ್ಲಿ ವಿಸರ್ಜಿಸಬಹುದು ಎಂದು ವಿವರಿಸಿದ್ದಾರೆ.



ಬೆಂಗಳೂರಿನ ಪಾಟರಿ ಟೌನ್‌ನಲ್ಲಿ ಗಣಪನ ಪರಿಸರ ಸ್ನೇಹಿ ಮೂರ್ತಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ಕಲಾವಿದ ರಮೇಶ್ – ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮ ನಿಷೇಧ



ಕಮಲ್ ಪಂತ್

ಸಾರ್ವಜನಿಕ ಗಣಪತಿ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಸಂಗೀತ, ನೃತ್ಯ ಸೇರಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವಂತಿಲ್ಲ. ಡಿ.ಜೆ ಸೆಟ್ ಅಥವಾ ಧ್ವನಿವರ್ಧಕ ಬಳಕೆಗೂ ನಿರ್ಬಂಧ ಹೇರಲಾಗಿದೆ.

'ಬಿಬಿಎಂಪಿಯಿಂದ ಅನುಮತಿ ಪಡೆದಷ್ಟೇ ಸಾರ್ವಜನಿಕ ಸ್ಥಳದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಬಹುದು. ಅನಧಿಕೃತ ಪ್ರತಿಷ್ಠಾಪನೆಗೆ ಅವಕಾಶ ನೀಡುವುದಿಲ್ಲ. ಪೂಜೆ ನಡೆಸಲು ಯಾವುದೇ ಸಮಯ ನಿಗದಿ ಮಾಡುವುದಿಲ್ಲ. ಆದರೆ, ರಾತ್ರಿ 9 ಗಂಟೆ ಬಳಿಕ ಕರ್ಫ್ಯೂ ಇದ್ದೇ ಇರುತ್ತದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

'ಮೂರ್ತಿ ಪ್ರತಿಷ್ಠಾಪನೆ ಅಥವಾ ವಿಸರ್ಜನೆ ಸೇರಿ ಯಾವುದೇ ಸಂದರ್ಭದಲ್ಲೂ ಮೆರವಣಿಗೆ ನಡೆಸಲು ಅವಕಾಶ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಚರ್ಚೆಗೆ ಸಿದ್ಧ: ಉಗ್ರಪ್ಪ ಸವಾಲು

ಬೆಂಗಳೂರು: 'ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ಕಾಂಗ್ರೆಸ್ ಕಾರಣ ಎಂದು ಅಪಪ್ರಚಾರ ಮಾಡುತ್ತಿರುವ ಬಿಜೆಪಿ ನಾಯಕರ ಜೊತೆ ಈ ಬಗ್ಗೆ ಚರ್ಚೆಗೆ ಸಿದ್ಧ' ಎಂದು ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಎಂದು ಸವಾಲು ಹಾಕಿದರು.

ಪಕ್ಷದ ಮತ್ತೊಬ್ಬ ಮುಖಂಡ ಎಚ್.ಎಂ. ರೇವಣ್ಣ ಜೊತೆ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬೆಲೆ ಏರಿಕೆ ಬಗ್ಗೆ ನಳಿನ್ ಕುಮಾರ್ ಕಟೀಲ್, ಸಿ.ಟಿ. ರವಿ ಅವರು ಜನರನ್ನು ದಾರಿ ತಪ್ಪಿಸಲು ಸಂಚು ರೂಪಿಸಿದ್ದಾರೆ' ಎಂದು ದೂರಿದರು.

'ಯುಪಿಎ ಆಡಳಿತ ಅವಧಿಯಲ್ಲಿ ಕಚ್ಚಾ ತೈಲ ದರ ಹೆಚ್ಚಿದ್ದಾಗ, ಜನರ ಹಿತದೃಷ್ಟಿಯಿಂದ ತೈಲ ಬಾಂಡ್ ಬಿಡುಗಡೆ ಮಾಡಿದ್ದು ನಿಜ. ಈ ಬಾಂಡ್ ವಿಚಾರಕ್ಕೆ ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ಕಾರಣ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಚ್.ಎಂ. ರೇವಣ್ಣ ಮಾತನಾಡಿ, 'ಬಿಜೆಪಿ ಭಾವನಾತ್ಮಕವಾಗಿ ಪ್ರಚೋದನೆ ನೀಡುತ್ತಿದೆಯೇ ಹೊರತು ಜನಪರ ಕಾರ್ಯಕ್ರಮ ನೀಡುತ್ತಿಲ್ಲ. ಕೇಂದ್ರ ಹಾಗೂ ರಾಜ್ಯದಲ್ಲಿ ಒಂದೇ ಪಕ್ಷ ಇದ್ದರೆ ರಾಜ್ಯಕ್ಕೆ ಅನುಕೂಲವಾಗುತ್ತದೆ ಎಂದು ನಿರೀಕ್ಷೆ ಹುಸಿಯಾಗಿದೆ. ಯಡಿಯೂರಪ್ಪ ಅವರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಭಾವಿಸಿದ್ದೆ. ಬೊಮ್ಮಾಯಿ ಮುಖ್ಯಮಂತ್ರಿಯಾದ ನಂತರವೂ ಪರಿಸ್ಥಿತಿ ಬದಲಾಗಿಲ್ಲ. ಹೀಗಾದರೆ ರಾಜ್ಯದ ಗತಿ ಏನು' ಎಂಬ ಪ್ರಶ್ನಿಸಿದರು.



ಜಾತಿ ಗಣತಿ ವರದಿಗೆ ವೀರಶೈವ ಮಹಾಸಭಾ ವಿರೋಧ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವೈಜ್ಞಾನಿಕವಾಗಿಲ್ಲ ಎಂದು ಆಕ್ಷೇಪಿಸಿರುವ ಅಖಿಲ ಭಾರತ ವೀರಶೈವ ಮಹಾಸಭಾ, ವರದಿ ಬಿಡುಗಡೆಗೆ ವಿರೋಧ ವ್ಯಕ್ತಪಡಿಸಿದೆ.

'ಸಮೀಕ್ಷೆ ವೈಜ್ಞಾನಿಕವಾಗಿ ಮತ್ತು ಪಾರದರ್ಶಕವಾಗಿ ನಡೆದಿಲ್ಲ. ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ಗುಳೆ ಹೋದವರನ್ನು ಸಮೀಕ್ಷೆಯಲ್ಲಿ ಪರಿಗಣಿಸಿಲ್ಲ. ವೀರಶೈವ– ಲಿಂಗಾಯತರಲ್ಲೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಇದ್ದಾರೆ. ಈಗ ಮಾಡಿರುವ ಸಮೀಕ್ಷೆಯ ವರದಿಯನ್ನು ಒಪ್ಪಿಕೊಂಡರೆ ಸಮುದಾಯದ ಲಕ್ಷಾಂತರ ಮಂದಿಗೆ ಅನ್ಯಾಯವಾಗುತ್ತದೆ' ಎಂದು ಮಹಾಸಭಾದ ಉಪಾಧ್ಯಕ್ಷ ಬಿ.ಎಸ್. ಸಚ್ಚಿದಾನಂದಮೂರ್ತಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳನ್ನು ಗುರುತಿಸುವ ಗಣತಿಗೆ ಮಹಾಸಭಾದ ವಿರೋಧವಿಲ್ಲ. ಈ ಸಮೀಕ್ಷೆಯ ಅಂಕಿಅಂಶಗಳನ್ನು ವ್ಯವಸ್ಥಿತವಾಗಿ ಸೋರಿಕೆ ಮಾಡಲಾಗಿದೆ. ಕೇವಲ ಜಾತಿವಾರು ಜನಸಂಖ್ಯೆಯನ್ನು ಸೋರಿಕೆ ಮಾಡಿ ಗೊಂದಲ ಮೂಡಿಸಲಾಗಿದೆ. ಗಣತಿದಾರರು ವೀರಶೈವ– ಲಿಂಗಾಯತ ಸಮುದಾಯದ ಶೇಕಡ 50ರಷ್ಟು ಮನೆಗಳಿಗೆ ಭೇಟಿನೀಡಿಲ್ಲ. ವರದಿಯ ಹಲವು ಲೋಪಗಳಿಂದ ಕೂಡಿದೆ ಎಂಬ ಅನುಮಾನವಿದೆ ಎಂದು ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಸಲ್ಲಿಸಿರುವ ವರದಿಯನ್ನು ತಿರಸ್ಕರಿಸಬೇಕು. ರಾಷ್ಟ್ರೀಯ ಮಟ್ಟದಲ್ಲೂ ಜಾತಿ ಗಣತಿ ನಡೆಸುವ ಚರ್ಚೆ ನಡೆಯುತ್ತಿದೆ. ಅಲ್ಲಿನ ಬೆಳವಣಿಗೆಯನ್ನು ನೋಡಿಕೊಂಡು ರಾಜ್ಯ ಸರ್ಕಾರ ಮುನ್ನಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಕೋರ್ಟ್‌ಗೆ ತಪ್ಪು ಮಾಹಿತಿ: ಸಭಾಧ್ಯಕ್ಷರಿಗೆ ಮೂರ್ತಿ ಪತ್ರ



ಎಸ್.ಮೂರ್ತಿ

ಬೆಂಗಳೂರು: 'ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ (ಪ್ರಭಾರ) ಎಂ.ಕೆ. ವಿಶಾಲಾಕ್ಷಿ ಅವರು ಹೈಕೋರ್ಟ್‌ಗೆ ಆ. 27ರಂದು ಸಲ್ಲಿಸಿರುವ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ಅಮಾನತಿನಲ್ಲಿರುವ ವಿಧಾನಸಭೆ ಸಚಿವಾಲಯ ಕಾರ್ಯದರ್ಶಿ ಎಸ್. ಮೂರ್ತಿ ಅವರು ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

'ನನ್ನ ಮರು ನೇಮಕಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಏಕ ಸದಸ್ಯ ಪೀಠ ನೀಡಿದ್ದ ತೀರ್ಪಿನ ವಿರುದ್ಧ ವಿಧಾನಸಭೆ ಸಚಿವಾಲಯವು ಮೇಲ್ಮನವಿ ಸಲ್ಲಿಸಿತ್ತು. ಸಚಿವಾಲಯದ ಪರವಾಗಿ ಅಡ್ವೊಕೇಟ್ ಜನರಲ್ ಅವರು, 2021ರ ಮೇ ತಿಂಗಳ ಒಳಗೆ ಇಲಾಖಾ ವಿಚಾರಣೆ ನಡೆಸುತ್ತೇವೆಂದು ನೀಡಿದ್ದ ಹೇಳಿಕೆಯನ್ನು ದ್ವಿ ಸದಸ್ಯ ಪೀಠ ದಾಖಲಿಸಿಕೊಂಡಿತ್ತು. ಆದರೆ, ಸಚಿವಾಲಯ ನನ್ನ ಇಲಾಖಾ ವಿಚಾರಣೆ ಮುಗಿಸಿಲ್ಲ'.

'ದ್ವಿ ಸದಸ್ಯ ಪೀಠದ ಈ ತೀರ್ಪು ಮರೆ ಮಾಚಿ ವಿಶಾಲಾಕ್ಷಿ ಅವರು ಏಕ ಸದಸ್ಯ ಪೀಠದ ಮತ್ತೊಂದು ದಾವೆಯಲ್ಲಿ ಹೊಸ ಅರ್ಜಿ ಮತ್ತು ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಇದೇ ಸೆ. 27ರ ಒಳಗೆ ಇಲಾಖಾ ವಿಚಾರಣೆ ಮುಗಿಸುವುದಾಗಿ ಪೀಠದಿಂದ ಆದೇಶ ಪಡೆದುಕೊಂಡಿದ್ದಾರೆ. ಈ ಹೊಸ ಆದೇಶವನ್ನು ಸಭಾಧ್ಯಕ್ಷರ ಗಮನಕ್ಕೂ ತಂದು, ಸೆ. 27ರ ಒಳಗೆ ಇಲಾಖಾ ವಿಚಾರಣೆ ಮುಗಿಸಲು ಜುಲೈ 31ರಂದು ಆದೇಶ ಹೊರಡಿಸಿದ್ದಾರೆ. ವಿಶಾಲಕ್ಷಿ ಅವರು ತಪ್ಪು ಮಾಹಿತಿ ನೀಡಿದ್ದರಿಂದ ಏಕದಸ್ಯ ಪೀಠ ಮತ್ತು ದ್ವಿ ಸದಸ್ಯ ಪೀಠ ಬೇರೆ ಬೇರೆ ತೀರ್ಪು ನೀಡಿದೆ. ಎರಡನೇ ಬಾರಿ ಇಲಾಖಾ ವಿಚಾರಣೆಗೆ ಹೊರಡಿಸಿದ ಆದೇಶ ಕಾನೂನು ಬಾಹಿರ' ಎಂದು ಪತ್ರದಲ್ಲಿ ಮೂರ್ತಿ ತಿಳಿಸಿದ್ದಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ನೌಕರರ ಸಂಘ ಒತ್ತಾಯ

39 ಹೊಸ ಹುದ್ದೆ: ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನಗರ ಯೋಜನೆ ವಿಭಾಗದಲ್ಲಿ ಹೊಸದಾಗಿ 39 ಹುದ್ದೆಗಳನ್ನು ಸೃಜಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ರಾಕೇಶ್ ಸಿಂಗ್ ಅವರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ನೌಕರರ ಸಂಘ ಮನವಿ ಸಲ್ಲಿಸಿದೆ.

'ಪ್ರಜಾವಾಣಿ'ಯ ಸೆ. 6ರ ಸಂಚಿಕೆಯಲ್ಲಿ '39 ಹೊಸ ಹುದ್ದೆ ಸೃಷ್ಟಿಗೆ ವಿರೋಧ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಉಲ್ಲೇಖಿಸಿ ಎಸಿಎಸ್ ಅವರಿಗೆ ಪತ್ರ ಬರೆದಿರುವ ಸಂಘವು, 'ಬಿಬಿಎಂಪಿಯ ನಗರ ಯೋಜನಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ನಗರ ಯೋಜನೆಗೆ ಸಂಬಂಧವೇ ಇಲ್ಲದ ಕೆಳ ಹಂತದ ಅನ್ಯ ಹುದ್ದೆಗಳಿಗೆ ನೇಮಕಗೊಂಡು ಬಡ್ತಿ ಪಡೆದವರಾಗಿದ್ದಾರೆ.

ಬಿಬಿಎಂಪಿ ಮರುರಚನೆ ಸಂದರ್ಭದಲ್ಲಿ ಹೊಸ ಹುದ್ದೆ ಸೃಷ್ಟಿಸುವ ಪ್ರಸ್ತಾವನೆಯನ್ನು ಅವರು ವಿರೋಧಿಸುವುದಕ್ಕೆ ವೈಯಕ್ತಿಕ ಹಿತಾಸಕ್ತಿಯೇ ಕಾರಣ. ಈ ಹುದ್ದೆಗಳ ಸೃಷ್ಟಿಗೆ ಬಿಬಿಎಂಪಿ ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ವಿರೋಧ ವ್ಯಕ್ತಪಡಿಸಿರುವುದಕ್ಕೆ ಮಹತ್ವ ನೀಡಬಾರದು' ಎಂದು ಒತ್ತಾಯಿಸಿದೆ.

'ಹೊಸ ಹುದ್ದೆ ಸೃಷ್ಟಿಯನ್ನು ವಿರೋಧಿಸುತ್ತಿರುವವರಿಗೂ ನಗರ ಯೋಜನೆಗೂ ಸಂಬಂಧವೇ ಇಲ್ಲ. ವಿರೋಧ ವ್ಯಕ್ತಪಡಿಸುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಕ್ಕೆ ನಗರ ಯೋಜನೆ ವಿಷಯದ ಪರಿಜ್ಞಾನವಿಲ್ಲ. 1961ರ ಕೆಟಿಪಿಸಿ ಕಾಯ್ದೆಯ ಹಾಗೂ ಅದಕ್ಕೆ ಸಂಬಂಧಿಸಿ ಯೋಜನೆ ವಿಷಯಗಳಲ್ಲಿ ಕೈಗೊಳ್ಳುವ ನಿರ್ಧಾರಗಳಿಂದ ಉಂಟಾಗಬಹುದಾದ ಪರಿಣಾಮಗಳ ಕುರಿತು ಪರಿಣಿತಿಯೂ ಇಲ್ಲ. ಅದಕ್ಕೆ ಅಗತ್ಯವಿರುವ ವಿದ್ಯಾರ್ಹತೆಯನ್ನೂ ಅವರು ಹೊಂದಿಲ್ಲ. ಆದರೂ, ಸರ್ಕಾರದ ಆಡಳಿತಾತ್ಮಕ ಕ್ರಮ ಹಾಗೂ ಪರಮಾಧಿಕಾರವನ್ನು ಪ್ರಶ್ನಿಸಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಇದನ್ನು ಪರಿಶೀಲನೆಗೆ ಒಳಪಡಿಸಬೇಕು' ಎಂದು ಸಂಘವು ಕೇಳಿಕೊಂಡಿದೆ.

'ಈಗಾಗಲೇ ಆರ್ಥಿಕ ಇಲಾಖೆಯಿಂದ ಅನುಮೋದನೆಗೊಂಡ ಪ್ರಸ್ತಾವನೆಯನ್ನು ಕೈಬಿಡದಿದ್ದರೆ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳುವುದಾಗಿ ಬಿಬಿಎಂಪಿ ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಬೆದರಿಕೆ ತಂತ್ರ ಅನುಸರಿಸುತ್ತಿದೆ. ಹಾಗಾಗಿ, ನಗರಾಭಿವೃದ್ಧಿ ಸಚಿವಾಲಯದವರೂ ಈ ಕುರಿತು ಆದೇಶ ಹೊರಡಿಸಲು ಹಿಂಜರಿಯುತ್ತಿದ್ದಾರೆ. ಇದರಿಂದ ಬಿಬಿಎಂಪಿಯ ನಗರ ಯೋಜನಾ ವಿಭಾಗವನ್ನು ಉನ್ನತೀಕರಿಸಿ ಸುಧಾರಣೆ ತರುವ ಸರ್ಕಾರದ ಕ್ರಮಕ್ಕೆ ಹಿನ್ನಡೆ ಆಗಲಿದೆ. ನಗರದ ಯೋಜಿತ ಬೆಳವಣಿಗೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದಲೂ ಇದು ಮಾರಕ' ಎಂದು ಸಂಘವು ಗಮನ ಸೆಳೆದಿದೆ.

'ಬಿಬಿಎಂಪಿಯ ನಗರ ಯೋಜನೆ ವಿಭಾಗದ ಸುಗಮ ಆಡಳಿತದ ದೃಷ್ಟಿಯಿಂದ ತ್ವರಿತವಾಗಿ ಸೂಕ್ತ ಆದೇಶ ಹೊರಡಿಸಬೇಕು. ಇಲ್ಲದಿದ್ದರೆ ಇದೇ 13ರಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಿದ್ದೇವೆ' ಎಂದು ಸಂಘದ ಅಧ್ಯಕ್ಷ ಆರ್.ಶೇಷ ಮನವಿಯಲ್ಲಿ ತಿಳಿಸಿದ್ದಾರೆ.

'ಶಶಿಕಲಾ ಲಂಚ ಪ್ರಕರಣ: 30 ದಿನದಲ್ಲಿ ನಿರ್ಧರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಎಐಎಡಿಎಂಕೆ ನಾಯಕಿ ವಿ.ಕೆ. ಶಶಿಕಲಾ ಅವರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಲಂಚ ನೀಡಿ ವಿಶೇಷ ಸವಲತ್ತು ಪಡೆಯುತ್ತಿದ್ದರು ಎಂಬ ಆರೋಪ ಪ್ರಕರಣದಲ್ಲಿ ನಾಲ್ವರು ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕೇಳಿರುವ ಅನುಮತಿ ಬಗ್ಗೆ 30 ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಆಪ್ತರಾಗಿದ್ದ ಶಶಿಕಲಾ ಅಕ್ರಮ ಆಸ್ತಿ ಪ್ರಕರಣದಲ್ಲಿ ದೋಷಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ 4 ವರ್ಷಗಳ ಜೈಲು ಶಿಕ್ಷೆ ಅನುಭವಿಸಿದ್ದಾರೆ. 2021 ಜನವರಿಯಲ್ಲಿ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

'ಜೈಲಿನಲ್ಲಿದ್ದಾಗ ಅವರಿಗೆ ವಿಶೇಷ ಸವಲತ್ತು ನೀಡಲಾಗಿದೆ ಎಂಬ ಆರೋಪದಲ್ಲಿ ನಾಲ್ಕು ಅಧಿಕಾರಿಗಳ ವಿರುದ್ಧ ತನಿಖೆ ಮುಂದುವರಿಸಲು ಎಸಿಬಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಜುಲೈನಲ್ಲೇ ಕೋರಿದೆ. ಈವರೆಗೆ ಸರ್ಕಾರ ನಿರ್ಧಾರ ಕೈಗೊಂಡಿಲ್ಲ' ಎಂದು ಎಸಿಬಿ ಪರ ವಕೀಲರು ತಿಳಿಸಿದರು.

ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವ ಸರ್ಕಾರದ ವಿರುದ್ಧ ಗರಂ ಆದ ಪೀಠ, 'ಅನುಮತಿ ನೀಡದಿದ್ದರೆ ಗೃಹ ಇಲಾಖೆಯ ಕಾರ್ಯದರ್ಶಿ ಅ. 8 ರಂದು ನ್ಯಾಯಾಲಯದಲ್ಲಿ ಹಾಜರಾಗಬೇಕು' ಎಂದು ತಿಳಿಸಿತು.

ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಚೆನ್ನೈನ ಕೆ.ಎಸ್.ಗೀತಾ, 'ಪ್ರಕರಣದ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಎಸಿಬಿ ತನಿಖೆ ಪೂರ್ಣಗೊಳಿಸಿಲ್ಲ' ಎಂದು ಆರೋಪಿಸಿದ್ದರು.

ಅಪೋಲೊ: 100 ರೊಬೊಟಿಕ್ ಹೃದಯ ಶಸ್ತ್ರಚಿಕಿತ್ಸೆ

ಬೆಂಗಳೂರು: ನಗರದ ಅಪೋಲೊ ಆಸ್ಪತ್ರೆಯು ಯಶಸ್ವಿಯಾಗಿ ನೂರು ರೊಬೊಟಿಕ್ ಹೃದಯ ಶಸ್ತ್ರಚಿಕಿತ್ಸೆಗಳನ್ನು ನಡೆಸಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಇದು ಮೈಲುಗಲ್ಲು ಎಂದು ಆಸ್ಪತ್ರೆ ತಿಳಿಸಿದೆ. ಆಸ್ಪತ್ರೆಯ ಶಸ್ತ್ರಚಿಕಿತ್ಸಾ ತಂಡವು 'ಡ ವಿಂಚಿ ರೊಬೊಟ್' ನೆರವಿನಿಂದ ಸಂಕೀರ್ಣವಾದ ಮಿಟ್ರಲ್ ವಾಲ್ವ್‌ನ ಹೃದಯ ಶಸ್ತ್ರಚಿಕಿತ್ಸೆಯನ್ನು 70 ನಿಮಿಷಗಳಲ್ಲಿ ಪೂರ್ಣಗೊಳಿದೆ. ಸಾಂಪ್ರದಾಯಿಕ ವಿಧಾನದಲ್ಲಿ ಈ ಶಸ್ತ್ರಚಿಕಿತ್ಸೆಗೆ 3ರಿಂದ 4 ಗಂಟೆಗಳು ಬೇಕಾಗುತ್ತವೆ ಎಂದು ಆಸ್ಪತ್ರೆ ತಿಳಿಸಿದೆ.

ಆಸ್ಪತ್ರೆಯು 2019ರ ಅಂತ್ಯಕ್ಕೆ ರೊಬೊಟಿಕ್ ಯಂತ್ರವನ್ನು ಅಳವಡಿಸಿಕೊಂಡಿತ್ತು. ಹೃದ್ರೋಗ ತಜ್ಞ ಹಾಗೂ ಆಸ್ಪತ್ರೆಯ ರೊಬೊಟಿಕ್ ಹೃದಯ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಸತ್ಯಕಿ ಪಿ. ನಂಬಾಳ ನೇತೃತ್ವದಲ್ಲಿ ಆಸ್ಪತ್ರೆ ಈ ಸಾಧನೆ ಮಾಡಿದೆ.

'ರೊಬೊಟ್‌ಗಳ ನೆರವಿನಿಂದ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನೂ ಅಲ್ಪಾವಧಿಯಲ್ಲಿ ನಡೆಸಬಹುದು. ರೋಗಿಯೂ ಬೇಗ ಚೇತರಿಸಿಕೊಂಡು, 48 ಗಂಟೆಯೊಳಗೆ ಮನೆಗೆ ಮರಳಬಹುದು. ತೆರೆದ ಹೃದಯದ ಶಸ್ತ್ರಚಿಕಿತ್ಸೆಯನ್ನು ಕೆಲ ರಂಧ್ರಗಳ ಮೂಲಕ ನಡೆಸಲಾಗುತ್ತದೆ. ಹೃದಯದಲ್ಲಿನ ರಂಧ್ರಗಳನ್ನು ಸುಲಭವಾಗಿ ಮುಚ್ಚಬಹುದು. ಇದರಿಂದ ಬೈಪಾಸ್ ಸರ್ಜರಿ ಸುಲಭವಾಗಿದೆ' ಎಂದು ಡಾ. ಸತ್ಯಕಿ ಪಿ. ನಂಬಾಳ ತಿಳಿಸಿದರು.

ಅಪೋಲೊ ಸಮೂಹ ಆಸ್ಪತ್ರೆಗಳ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಸಂಗೀತಾ ರೆಡ್ಡಿ, 'ರೋಗಿಗಳ ಅನುಕೂಲಕ್ಕಾಗಿ ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನಗಳ ಅಳವಡಿಕೆಗೆ ಆಸ್ಪತ್ರೆ ಆದ್ಯತೆ ನೀಡುತ್ತಿದೆ. ಇಲ್ಲಿನ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಪಡೆದುಕೊಳ್ಳಬೇಕು. 'ಡ ವಿಂಚಿ' ಶಸಚಿಕಿತ್ಸಾ ವ್ಯವಸ್ಥೆಯು ಅತ್ಯುತ್ತಮ ಫಲಿತಾಂಶ ಒದಗಿಸುವಲ್ಲಿ ಸಹಕಾರಿ' ಎಂದು ಹೇಳಿದರು.

ಆಡಳಿತಾಧಿಕಾರಿ ನೇಮಕ

ಬೆಂಗಳೂರು: ಬೆಂಗಳೂರು ವಕೀಲರ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿರುವ ಸಹಕಾರ ಇಲಾಖೆ, ಸಂಘದ ಆಡಳಿತ ಮಂಡಳಿಗೆ ಆದಷ್ಟು ಬೇಗ ಚುನಾವಣೆ ನಡೆಸಬೇಕು ಎಂದು ತಿಳಿಸಿದೆ.

ಸಂಘದ ಅವಧಿ 2021ರ ಜನವರಿಯಲ್ಲೇ ಮುಕ್ತಾಯವಾಗಿದ್ದರೂ, ಚುನಾವಣೆ ನಡೆಸಿಲ್ಲ ಎಂದು ಸಲ್ಲಿಕೆಯಾಗಿದ್ದ ಮನವಿಗಳನ್ನು ಆಧರಿಸಿ ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಸಂಘಗಳ ಉಪನಿಬಂಧಕರು ಶಿಫಾರಸು ಸಲ್ಲಿಸಿದ್ದರು.

ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ಹರ್ಷಿತಾ ಮನದಾಳದ ಮಾತು

'ಇಷ್ಟ ಪಟ್ಟು ಓದಿದರೆ ಯಶಸ್ಸು ನಿಶ್ಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದನ್ನೂ ಕಷ್ಟ ಅಂದುಕೊಳ್ಳಬಾರದು. ಅಸಾಧ್ಯವಾದುದು ಏನೂ ಇಲ್ಲ. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಬೇಕು. ಇಷ್ಟಪಟ್ಟು, ಖುಷಿಯಿಂದ ಓದಿದರೆ ಯಶಸ್ಸು ನಿಶ್ಚಿತ'...

ಬೆಂಗಳೂರಿನ 'ಚಿನ್ನದ ಹುಡುಗಿ' ಎನ್.ಹರ್ಷಿತಾ ಅವರ ಮನದಾಳದ ಮಾತುಗಳಿವು.

ನಗರದ ನಂದಿನಿ ಬಡಾವಣೆ ನಿವಾಸಿಯಾಗಿರುವ ಹರ್ಷಿತಾ, ಅರ್ಬನ್ ಆ್ಯಂಡ್ ರೀಜನಲ್ ಪ್ಲಾನಿಂಗ್ ವಿಷಯದಲ್ಲಿ (ಎಂ.ಟೆಕ್) 9 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಪ್ಲ್ಯಾನಿಂಗ್ ಆ್ಯಂಡ್ ಆರ್ಕಿಟೆಕ್ಚರ್‌ನಲ್ಲಿ ವ್ಯಾಸಂಗ ಮಾಡಿರುವ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಪದಕಗಳನ್ನು ಸ್ವೀಕರಿಸಿದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಹರ್ಷಿತಾಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಇದ್ದಾರೆ.

'9 ಚಿನ್ನದ ಪದಕಗಳನ್ನು ಗೆದ್ದಿದ್ದು ಖುಷಿ ನೀಡಿದೆ. ಪೋಷಕರು ಹಾಗೂ ಶಿಕ್ಷಕರ ಸಹಕಾರದಿಂದ ಈ ಸಾಧನೆ ಸಾಧ್ಯವಾಗಿದೆ. ಎರಡು ವರ್ಷಗಳ ಪರಿಶ್ರಮಕ್ಕೆ ತಕ್ಕ ಫಲ ಸಿಕ್ಕಿದೆ. ಹೀಗಾಗಿ ಮನದಲ್ಲಿ ಸಾರ್ಥಕತೆಯ ಭಾವವೂ ಮೂಡಿದೆ' ಎಂದರು.

'ಕೋವಿಡ್ ಕಾಣಿಸಿಕೊಂಡಾಗ ಅಂತಿಮ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಲಾಕ್‌ಡೌನ್ ಅವಧಿಯಲ್ಲಿ ಪಠ್ಯ ಕಲಿಕೆ ಅಷ್ಟೊಂದು ಕಷ್ಟವಾಗಲಿಲ್ಲ. ಪ್ರಬಂಧ ರಚನೆಯತ್ತ ಹೆಚ್ಚು ಗಮನ ಹರಿಸಬೇಕಾಗಿತ್ತು. ಅದರ ವಿಷಯ ಮೊದಲೇ ನಿರ್ಧರಿತವಾಗಿತ್ತಾದರೂ ಅದಕ್ಕೆ ಬೇಕಿರುವ ಮಾಹಿತಿಗಳನ್ನು ಕಲೆಹಾಕುವುದು ಸ್ವಲ್ಪ ಸವಾಲೆನಿಸಿತ್ತು. ಪೋಷಕರು ಹಾಗೂ ಮಾರ್ಗದರ್ಶಕರ ಸಹಕಾರದಿಂದ ಈ ಕೆಲಸವು ಸುಲಭವಾಯಿತು. ಪ್ರಬಂಧಕ್ಕೆ ರಾಷ್ಟ್ರೀಯ ಮಟ್ಟದಲ್ಲೂ ಮನ್ನಣೆ ಲಭಿಸಿತು. ಮೂರನೇ ಅತ್ಯುತ್ತಮ ಪ್ರಶಸ್ತಿಯೂ ಸಿಕ್ಕಿತ್ತು' ಎಂದು ಸಂತಸ ವ್ಯಕ್ತಪಡಿಸಿದರು.

'ಬೆಂಗಳೂರಿನ ಬಿಜಿಎಸ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಆ್ಯಂಡ್ ಪ್ಲಾನಿಂಗ್‌ನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಸರ್ಕಾರಿ ಸೇವೆಗೆ ಸೇರುವ ಬಯಕೆ ಇದೆ. ಹೀಗಾಗಿ ಈಗ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಯತ್ತ ಚಿತ್ತ ಹರಿಸಿದ್ದೇನೆ' ಎಂದರು.

'ಮಗಳ ಸಾಧನೆ ಹೆಮ್ಮೆಯಿಂದ ಬೀಗುವಂತೆ ಮಾಡಿದೆ. ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಎಂಜಿನಿಯರಿಂಗ್ (ಬಿ.ಇ) ವ್ಯಾಸಂಗ ಮಾಡಿದ್ದ ಅವಳು 2018ರಲ್ಲಿ ಎಂ.ಟೆಕ್ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದಳು. ಅದರಲ್ಲಿ ಅಗ್ರಸ್ಥಾನ ಪಡೆದಿದ್ದಳು. ಅದೇ ಉತ್ಸಾಹವನ್ನು ಮುಂದುವರಿಸಿಕೊಂಡು 9 ಚಿನ್ನದ ಪದಕಗಳನ್ನು ಜಯಿಸಿದ್ದಾಳೆ. ಆಕೆಯ ಮೇಲೆ ನಾವು ಯಾವುದೇ ಒತ್ತಡ ಹೇರಿರಲಿಲ್ಲ. ಓದಿನ ವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೆವು' ಎಂದು ಹರ್ಷಿತಾ ಅವರ ತಂದೆ ಕೆ.ಎನ್. ನಾರಾಯಣಗೌಡ ತಿಳಿಸಿದರು.


'ಜಾತಿ ಗಣತಿ ವರದಿಗೆ ಸದಸ್ಯ ಕಾರ್ಯದರ್ಶಿ ಸಹಿಯೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಆರ್ಥಿಕ ಶೈಕ್ಷಣಿಕ ಸಮೀಕ್ಷೆಯ (ಜಾತಿಗಣತಿ) ವರದಿಗೆ ಸದಸ್ಯ ಕಾರ್ಯದರ್ಶಿಯ ಸಹಿಯೇ ಇಲ್ಲ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ತಿಳಿಸಿದ್ದಾರೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಈ ವರದಿಯ ಅಧಿಕೃತತೆ ಬಗ್ಗೆ ಪರಿಶೀಲಿಸಲು ಸಮಯ ಬೇಕು ಎಂದು ಹೆಗ್ಡೆ ಹೇಳಿದ್ದಾರೆ ಎಂದೂ ಅವರು ತಿಳಿಸಿದರು.

'ಈ ವರದಿಗೆ ಸಂಬಂಧಿಸಿದಂತೆ ನಮ್ಮಲ್ಲಿ ಯಾವುದೇ ಗೊಂದಲಗಳಿಲ್ಲ, ಹಿಂದೆ ಆಗಿರುವ ಗೊಂದಲಗಳಿಗೆ ನಾವು ಕಾರಣರಲ್ಲ. ಸಿದ್ದರಾಮಯ್ಯ ಅವಧಿಯಲ್ಲಿ ₹162 ಕೋಟಿ ಖರ್ಚು ಮಾಡಿ ಜಾತಿಗಣತಿ ನಡೆಸಲಾಗಿತ್ತು. ಅವರ ಅವಧಿಯಲ್ಲಿ ವರದಿ ಏಕೆ ಬಿಡುಗಡೆ ಮಾಡಿಲ್ಲ ಎಂಬುದನ್ನು ಅವರೇ ಹೇಳಬೇಕು' ಎಂದು ಪೂಜಾರಿ ಹೇಳಿದರು.



ಕೋಟ ಶ್ರೀನಿವಾಸ ಪೂಜಾರಿ

'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಜಾತಿ ಗಣತಿ ವರದಿಯನ್ನು ಪರಿಶೀಲಿಸಿ ಮಂಡಿಸಲಿದ್ದಾರೆ. ಬಳಿಕ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮುಂದಿನ ಕ್ರಮದ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

ಬಿಬಿಎಂಪಿ ನೌಕರರ ಧರಣಿ: ಕಚೇರಿ ಕಾರ್ಯಗಳಿಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ಬಿಬಿಎಂಪಿ ಸಿಬ್ಬಂದಿಯ ಕುಟುಂಬಗಳಿಗೆ ₹ 30 ಲಕ್ಷ ಪರಿಹಾರದ ಮೊತ್ತ ಬಿಡುಗಡೆಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಿಬಿಎಂಪಿ ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಪಾಲಿಕೆ ಸಿಬ್ಬಂದಿ ಮಂಗಳವಾರ ಧರಣಿ ನಡೆಸಿದರು.

ಕೋವಿಡ್ ಲಸಿಕೆ ಹಾಗೂ ಕೋವಿಡ್ ಪರೀಕ್ಷೆ ಕಾರ್ಯಗಳಲ್ಲಿ ತೊಡಗಿದ್ದ ಸಿಬ್ಬಂದಿ ಪ್ರತಿಭಟನೆಯಲ್ಲಿ ಭಾಗವಹಿಸಲಿಲ್ಲ. ವಾರ್ಡ್ ಮಟ್ಟದ ಕೆಲವು ಕಚೇರಿಗಳಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿದ ಸಿಬ್ಬಂದಿ, ಬಳಿಕ ಕೆಲಸ ಮುಂದುವರಿಸಿದರು. ಆದರೆ, ಕೇಂದ್ರ ಕಚೇರಿಯ ಹೆಚ್ಚಿನ ಸಿಬ್ಬಂದಿ ಕೆಲಸ ನಿಲ್ಲಿಸಿ, ಧರಣಿಯಲ್ಲಿ ಪಾಲ್ಗೊಂಡರು. ಇದರಿಂದಾಗಿ ಕಚೇರಿಗಳ ಕಾರ್ಯನಿರ್ವಹಣೆಗೆ ಅಡ್ಡಿ ಉಂಟಾಯಿತು.

ಮಧ್ಯಾಹ್ನ ಪ್ರತಿಭಟನಾಕಾರರನ್ನು ಭೇಟಿ ಮಾಡಿದ ಮುಖ್ಯ ಆಯುಕ್ತ ಗೌರವ ಗುಪ್ತ, 'ನೌಕರರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುತ್ತೇವೆ' ಎಂದು ಭರವಸೆ ನೀಡಿದರು. ಬಳಿಕ ನೌಕರರು ಪ್ರತಿಭಟನೆಯನ್ನು ಸ್ಥಗಿತಗೊಳಿಸಿದರು.

'ಕೋವಿಡ್‌ನಿಂದ ಮೃತಪಟ್ಟ ಪಾಲಿಕೆ ಸಿಬ್ಬಂದಿಗೆ ₹30 ಲಕ್ಷ ಪರಿಹಾರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ. ಕೋವಿಡ್ ರೋಗಿಗಳ ಆರೈಕೆಯಲ್ಲಿ ನೇರವಾಗಿ ತೊಡಗಿಸಿಕೊಂಡ ಸಿಬ್ಬಂದಿಗೆ ಕೇಂದ್ರ ಸರ್ಕಾರವೇ ಪರಿಹಾರ ನೀಡುವುದಾಗಿ ಹೇಳಿತ್ತು. ಬಳಿಕ ಈ ಯೋಜನೆ ಹಿಂಪಡೆಯಿತು. ಆ ಬಳಿಕ ರಾಜ್ಯ ಸರ್ಕಾರದಿಂದ ₹ 30 ಲಕ್ಷ ಪರಿಹಾರ ನೀಡಲಾಗುತ್ತಿದೆ. ಹಾಗಾಗಿ ಈ ಪ್ರಕ್ರಿಯೆ ಸ್ವಲ್ಪ ವಿಳಂಬವಾಗಿದೆ' ಎಂದು ಗೌರವ ಗುಪ್ತ ತಿಳಿಸಿದರು.

ಸಂಘದ ಅಧ್ಯಕ್ಷ ಎ.ಅಮೃತ ರಾಜ್, 'ನಮ್ಮ ಬೇಡಿಕೆಗಳನ್ನು ಈಡೇರಿಸುವುದಾಗಿ ಮುಖ್ಯ ಆಯುಕ್ತರು ಭರವಸೆ ನೀಡಿದ್ದಾರೆ. ಅದಕ್ಕೆ ಒಪ್ಪಿಕೊಂಡು ಪ್ರತಿಭಟನೆ ನಿಲ್ಲಿಸಿದ್ದೇವೆ. ಬೇಡಿಕೆ ಈಡೇರಿಸದಿದ್ದರೆ ಮತ್ತೆ ಪ್ರತಿಭಟನೆ ಅನಿವಾರ್ಯ' ಎಂದರು.

'ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ವಿರುದ್ಧವಾಗಿ ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೇರೆ ಇಲಾಖೆ ಅಧಿಕಾರಿಗಳನ್ನು ಮಾತೃ ಇಲಾಖೆಗೆ ಹಿಂದಿರುಗಿಸಬೇಕು' ಎಂದು ಅವರು ಒತ್ತಾಯಿಸಿದರು.

ಪ್ರಮುಖ ಬೇಡಿಕೆಗಳು...

- ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ನಿಯೋಜನೆ ಆಧಾರದಲ್ಲಿ ಬಿಬಿಎಂಪಿಯಲ್ಲಿ 39 ಹೊಸ ಹುದ್ದೆ ಸೃಷ್ಟಿ ಕೈಬಿಡಬೇಕು.
- ಬಿಬಿಎಂಪಿಯ ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಕಲ್ಪಿಸಬೇಕು
- ಬಿಬಿಎಂಪಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ರಚಿಸಬೇಕಾದ ವಿವಿಧ ವೃಂದಗಳ 5,219 ಹೆಚ್ಚುವರಿ ಹುದ್ದೆಗಳಿಗೆ ಮಂಜೂರಾತಿ ನೀಡಬೇಕು

ಗೌರಿ– ಗಣೇಶ ಹಬ್ಬಕ್ಕೆ ಸಾವಿರ ವಿಶೇಷ ಬಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ) ಹೆಚ್ಚುವರಿಯಾಗಿ 1 ಸಾವಿರ ವಿಶೇಷ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ.

ಇದೇ 8 ಮತ್ತು 9ರಂದು ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳು ಹೊರಡಲಿವೆ. 12ರಂದು ಬೆಂಗಳೂರಿಗೆ ವಾಪಸ್ ಬರಲಿವೆ.

ಮೆಜೆಸ್ಟಿಕ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರ್ಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿಗೆ ಬಸ್‌ಗಳು ಸಂಚಾರ ಮಾಡಲಿವೆ.

ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿಗೆ ತೆರಳಲಿವೆ. ತಮಿಳುನಾಡು ಮತ್ತು ಆಂಧ್ರಪ್ರದೇಶಕ್ಕೆ ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಸಂಚರಿಸಲಿವೆ.

ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ 5 ರಷ್ಟು ರಿಯಾಯಿತಿ ನೀಡಲಾಗುವುದು. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇ 10 ರಷ್ಟು ರಿಯಾಯಿತಿ ಕೊಡಲಾಗುವುದು.

ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿನ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದಲೂ ವಿಶೇಷ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಪ್ರಕಟಣೆ ತಿಳಿಸಿದೆ.

ವಿಮಾನಕ್ಕಿಂತ ಖಾಸಗಿ ಬಸ್ ಪ್ರಯಾಣ ದುಬಾರಿ

ಬೆಂಗಳೂರು; ಗಣಪತಿ ಹಬ್ಬ ಹತ್ತಿರವಾಗುತ್ತಿದ್ದು, ಬೆಂಗಳೂರಿನಿಂದ ಹೊರ ಜಿಲ್ಲೆಗಳಿಗೆ ಹೋಗುವ ಖಾಸಗಿ ಬಸ್‌ಗಳ ಪ್ರಯಾಣ ದರವನ್ನು ಏಕಾಏಕಿ ಏರಿಕೆ ಮಾಡಲಾಗಿದೆ. ವಿಮಾನಕ್ಕಿಂತಲೂ ಖಾಸಗಿ ಬಸ್ ಪ್ರಯಾಣ ದರವೇ ಹೆಚ್ಚಿದೆ.

ನಗರದಲ್ಲಿ ಕೆಲಸ ಮಾಡುತ್ತಿರುವ ಬಹುತೇಕರು, ಗಣಪತಿ ಹಬ್ಬದಂದು ತಮ್ಮೂರಿಗೆ ಹೋಗಲು ತಯಾರಿ ಮಾಡಿಕೊಂಡಿದ್ದಾರೆ. ಹಬ್ಬದ ರಜೆಯೂ ಸೇರಿ ಶುಕ್ರವಾರದಿಂದ ಸರಣಿ ರಜೆಗಳಿವೆ. ಹೀಗಾಗಿ, ಗುರುವಾರ ರಾತ್ರಿಯಿಂದಲೇ ಹೆಚ್ಚಿನವರು ಊರಿಗೆ ಪ್ರಯಾಣಿಸುವ ಸಾಧ್ಯತೆ ಇದೆ.

ಬೆಂಗಳೂರಿನಿಂದ ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರ್ಗಿ, ವಿಜಯಪುರ, ಮಂಗಳೂರು, ಶಿವಮೊಗ್ಗ ಸೇರಿದಂತೆ ಹಲವು ನಗರಗಳಿಗೆ ಹೋಗುವ ಖಾಸಗಿ ಬಸ್‌ಗಳ ದರವನ್ನು ಏರಿಕೆ ಮಾಡಲಾಗಿದೆ.

ಸಾಮಾನ್ಯ ದಿನಗಳಲ್ಲಿ ಹವಾನಿಯಂತ್ರಿತ ಹಾಗೂ ಹವಾನಿಯಂತ್ರಣ ರಹಿತ ಬಸ್‌ಗಳಿಗೆ ಅನುಗುಣವಾಗಿ ₹ 450ರಿಂದ ₹1,200 ಪ್ರಯಾಣ ದರವಿರುತ್ತಿತ್ತು. ಆದರೆ, ಗುರುವಾರ (ಸೆ. 9) ಹಾಗೂ ಶುಕ್ರವಾರದಂದು (ಸೆ. 10) ಕನಿಷ್ಠ ₹850ರಿಂದ ಗರಿಷ್ಠ ₹7,000ದವರೆಗೂ ಏರಿಕೆ ಆಗಿದೆ. ಅದೇ ದಿನದಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೋಗುವ ವಿಮಾನಗಳ ಪ್ರಯಾಣ ದರ ಕನಿಷ್ಠ ₹2,700 ಹಾಗೂ ಗರಿಷ್ಠ ₹ 4,033 ಇದೆ.

‘ಪ್ರತಿ ಬಾರಿಯಂತೆ ಖಾಸಗಿ ಬಸ್ಸಿನವರು ಈ ಬಾರಿಯೂ ಪ್ರಯಾಣ ದರ ದುಬಾರಿ ಮಾಡಿದ್ದಾರೆ’ ಎಂದು ಖಾಸಗಿ ಕಂಪನಿ ನೌಕರ ಮೋಹನ್ ಹೇಳಿದರು.

ಖಾಸಗಿ ಬಸ್ ಕಂಪನಿಯೊಂದರ ಪ್ರತಿನಿಧಿ, ‘ಲಾಕ್‌ಡೌನ್‌ನಿಂದಾಗಿ ಬಸ್‌ಗಳು ನಿಂತಲ್ಲೇ ನಿಂತಿದ್ದವು. ಆರ್ಥಿಕವಾಗಿ ಸಾಕಷ್ಟು ನಷ್ಟ ಅನುಭವಿಸಿದ್ದೇವೆ. ಇದೀಗ ಬೇಡಿಕೆ ಇರುವುದರಿಂದ ಪ್ರಯಾಣ ದರ ಏರಿಕೆ ಮಾಡಿದ್ದೇವೆ’ ಎಂದರು.

ಹೆಚ್ಚಾದ ಪ್ರಯಾಣ ದರ (₹ಗಳಲ್ಲಿ) (ಸೆ. 9, ಬೆಂಗಳೂರಿನಿಂದ)

ನಗರಕ್ಕೆ	ಕನಿಷ್ಠ	ಗರಿಷ್ಠ
ಹುಬ್ಬಳ್ಳಿ	850	7,000
ಬೆಳಗಾವಿ	850	7,000
ಮಂಗಳೂರು	925	1799
ಕಲಬುರ್ಗಿ	960	1,499
ವಿಜಯಪುರ	910	2,000
ಶಿವಮೊಗ್ಗ	399	1,650

ಲಂಚ ಪಡೆದ ಆರೋಪ: ಕೃಷಿ ಸಚಿವ ಬಿ.ಸಿ. ಪಾಟೀಲ ವಿರುದ್ಧ ಎಸಿಬಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆಯಿಂದ ರೈತರಿಗೆ ರಿಯಾಯ್ತಿ ದರದಲ್ಲಿ ವಿತರಿಸುವ ಯಂತ್ರೋಪಕರಣಗಳ ಖರೀದಿಯಲ್ಲಿ ಬೃಹತ್ ಪ್ರಮಾಣದ ಭ್ರಷ್ಟಾಚಾರ ನಡೆದಿದ್ದು, ಕೃಷಿ ಸಚಿವ ಬಿ.ಸಿ. ಪಾಟೀಲ ₹ 210 ಕೋಟಿ ಮೊತ್ತದ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಆ್ಯಂಟಿ ಕರಪ್ಷನ್ ಫೋರ್ಸ್ (ಎಸಿಎಫ್) ಕರ್ನಾಟಕ ಸಂಘಟನೆಯ ಅಧ್ಯಕ್ಷ ಎನ್. ಕೃಷ್ಣಮೂರ್ತಿ, ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದಾರೆ.

‘ತುಂತುರು ನೀರಾವರಿಗೆ ಬಳಸುವ ಸ್ಪ್ರಿಂಕ್ಲರ್, ಡೀಸೆಲ್ ಪಂಪ್‌ಸೆಟ್, ಪವರ್ ಸ್ಪ್ರೇಯರ್, ಬ್ಯಾಟರಿ ಚಾಲಿತ ಬ್ಯಾಕ್ ಸ್ಪ್ರೇಯರ್ ಸೇರಿದಂತೆ ಸಹಾಯಧನ ಯೋಜನೆಗಳ ಅಡಿಯಲ್ಲಿ ವಿತರಿಸಲು ಯಂತ್ರೋಪಕರಣ ಖರೀದಿಯಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ ನಡೆದಿದೆ. ಯಂತ್ರೋಪಕರಣಗಳನ್ನು ಖರೀದಿ ಮಾಡದೆ ನಕಲಿ ಬಿಲ್ ಸೃಷ್ಟಿಸಿ ಹಣ ಲೂಟಿ ಮಾಡಲಾಗಿದೆ. ಪ್ರಭಾವಿ ನಾಯಕರು ಬೇನಾಮಿ ಹೆಸರಿನಲ್ಲಿ ಹೊಂದಿರುವ ಕಂಪನಿಗಳಿಂದ ಯಂತ್ರೋಪಕರಣ ಖರೀದಿಸಿ, ಅಕ್ರಮ ಎಸಗಲಾಗಿದೆ’ ಎಂದು ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿಗೆ ಮಂಗಳವಾರ ಸಲ್ಲಿಸಿರುವ ದೂರಿನಲ್ಲಿ ಆರೋಪಿಸಿದ್ದಾರೆ.

‘ಕೃಷಿ ಇಲಾಖೆಯ ಹೆಚ್ಚುವರಿ ನಿರ್ದೇಶಕ ದಿವಾಕರ್ ಮತ್ತು ಸಚಿವರು ಸೇರಿಕೊಂಡು ಅಕ್ರಮ ಎಸಗಿದ್ದಾರೆ. ದಿವಾಕರ್ ಕೂಡ ಬೇನಾಮಿ ಕಂಪನಿ ಹೊಂದಿರುವ ಆರೋಪವಿದೆ. ಟೆಂಡರ್‌ನಲ್ಲಿ ಭಾಗವಹಿಸಿದ್ದ ಕಂಪನಿ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದ ಈ ಅಧಿಕಾರಿ, ಬೃಹತ್ ಮೊತ್ತದ ಭ್ರಷ್ಟಾಚಾರ ನಡೆಸಿದ್ದಾರೆ. ಶೇಕಡ 50ರಷ್ಟು ಯಂತ್ರೋಪಕರಣಗಳು ಪೂರೈಕೆ ಆಗಿಲ್ಲ. ಆದರೂ, ಬಿಲ್ ಪಾವತಿಸಿ ಬೃಹತ್ ಪ್ರಮಾಣದ ಲಂಚ ಪಡೆಯಲಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ದೂರಿನಲ್ಲಿ ಆರೋಪಗಳ ಕುರಿತು ಸಚಿವ ಬಿ.ಸಿ. ಪಾಟೀಲ ಮತ್ತು ಕೃಷಿ ಇಲಾಖೆ ಹೆಚ್ಚುವರಿ ನಿರ್ದೇಶಕ ದಿವಾಕರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಪಾಟೀಲ ಅವರು ಕೃಷಿ ಸಚಿವರಾದ ಬಳಿಕ ನಡೆದಿರುವ ಯಂತ್ರೋಪಕರಣ ಖರೀದಿ ಕುರಿತು ಸಮಗ್ರವಾಗಿ ತನಿಖೆ ನಡೆಸಬೇಕು. ಈ ಅವಧಿಯಲ್ಲಿ ಯಂತ್ರೋಪಕರಣ ಪೂರೈಕೆಗೆ ಗುತ್ತಿಗೆ ಪಡೆದಿರುವ ಕಂಪನಿಗಳ ಬಗ್ಗೆ ಸಂಪೂರ್ಣ ಪರಿಶೀಲನೆ ನಡೆಸಬೇಕು. ಈ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲ ಕಡತಗಳನ್ನೂ ವಶಕ್ಕೆ ಪಡೆಯಬೇಕು ಎಂದು ಕೃಷ್ಣಮೂರ್ತಿ ಒತ್ತಾಯಿಸಿದ್ದಾರೆ.

ಭ್ರಷ್ಟಾಚಾರದ ಆರೋಪ ಮತ್ತು ಎಸಿಬಿಗೆ ನೀಡಿರುವ ದೂರಿನ ಕುರಿತು ಬಿ.ಸಿ. ಪಾಟೀಲ ಅವರ ಪ್ರತಿಕ್ರಿಯೆ ಪಡೆಯಲು ಹಲವು ಬಾರಿ ಪ್ರಯತ್ನಿಸಲಾಯಿತು. ಆದರೆ, ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

‘ಕಾವೇರಿ ಕೂಗು’ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ಕಾವೇರಿ ನದಿ ತೀರದಲ್ಲಿ ಸಸಿಗಳನ್ನು ನೆಡುವ ‘ಕಾವೇರಿ ಕೂಗು’ ಯೋಜನೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

‘ಬಂಜರು ಭೂಮಿಯಲ್ಲಿ ಸಸಿಗಳನ್ನು ನೆಡುವುದು ಅಪರಾಧವಲ್ಲ. ಸರ್ಕಾರದ ಜಾಗದಲ್ಲಿ ಸಸಿ ನಡೆವುದನ್ನು ನಿರ್ಬಂಧಿಸಲು ಯಾವುದೇ ಶಾಸನಬದ್ಧ ನಿಬಂಧನೆಗಳಿಲ್ಲ’ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಹೇಳಿದೆ.

‘ಸಸಿ ನೆಡಲು ಸದ್ಗುರು ಜಗ್ಗಿ ವಾಸುದೇವ ನೇತೃತ್ವದ ಈಶಾ ಔಟ್‌ರೀಚ್ ಸಂಸ್ಥೆ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದೆ. ಸರ್ಕಾರಿ ಭೂಮಿಯಲ್ಲಿ ಸಸಿ ನೆಡಲು ಯಾವುದೇ ಅನುಮತಿ ಪಡೆದುಕೊಂಡಿಲ್ಲ’ ಎಂದು 2019ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ಅದನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ, ಸ್ವಯಂ ಪ್ರೇರಿತ ಅರ್ಜಿಯಾಗಿ ಪರಿವರ್ತಿಸಿಕೊಂಡಿತ್ತು. ‘ಇದು ಸರ್ಕಾರಿ ಯೋಜನೆಯಲ್ಲ ಮತ್ತು ಸರ್ಕಾರದ ಜಾಗದಲ್ಲಿ ಸಸಿಗಳನ್ನು ನೆಡುತ್ತಿಲ್ಲ’ ಎಂದು ಸರ್ಕಾರ ನೀಡಿದ್ದ ಹೇಳಿಕೆ ಗಮನಿಸಿದ ಪೀಠ, ‘ಒಂದು ವೇಳೆ ಸರ್ಕಾರಿ ಜಾಗದಲ್ಲೇ ಮರಗಳನ್ನು ಬೆಳಸಿದ್ದರೂ ಅದನ್ನು ನಿಷೇಧಿಸುವುದು ವಿನಾಶಕ್ಕೆ ಹಾದಿ ಮಾಡಿಕೊಟ್ಟಂತೆ’ ಎಂದು ಅಭಿಪ್ರಾಯಪಟ್ಟಿತು.

ಸುಪ್ರೀಂ ಕೋರ್ಟ್‌ನ ತೀರ್ಪು ಉಲ್ಲೇಖಿಸಿದ ಪೀಠ, ‘ಮಾನವಕುಲ ಮತ್ತು ಭೂಮಿ ಉಳಿಸಲು ಇರುವ ಏಕೈಕ ಮಾರ್ಗವೆಂದರೆ ಅರಣ್ಯೀಕರಣ. ಇದನ್ನು ಈಶಾ ಔಟ್‌ರಿಚ್ ಮಾಡುತ್ತಿದೆ. ಅದನ್ನು ಮೆಚ್ಚಬೇಕು’ ಎಂದು ಹೇಳಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಬೆಳ್ಳಿಹಬ್ಬದ ಸಂಭ್ರಮ; ಡಿಜಿಟಲೀಕರಣಕ್ಕೆ ಒತ್ತು; ಹೈಟೆಕ್ ಸ್ಪರ್ಶ

ಹೊಸತನದ ತುಡಿತ: ಗುಣಮಟ್ಟದ ಶಿಕ್ಷಣಕ್ಕೆ ಬದ್ಧ



ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪ್ರವೇಶಾತಿ ಹೆಚ್ಚಳವಷ್ಟೇ ಕೆಎಸ್‌ಒಯು ಗುರಿ ಅಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಶಿಕ್ಷಣ ನೀಡಲು ಬದ್ಧವಾಗಿದೆ

‘ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್‌ಒಯು) ಇಂದಿನ ಸ್ಪರ್ಧಾತ್ಮಕ ಯುಗದ ಬೇಡಿಕೆಗಳಿಗೆ ತಕ್ಕಂತೆ ಹೊಸ ಕಾರ್ಯಕ್ರಮಗಳನ್ನು (ಪದವಿ, ಸ್ನಾತಕೋತ್ತರ ಪದವಿ, ಇತರ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್) ಆರಂಭಿಸಿದ್ದು, ವಿದ್ಯಾರ್ಥಿಗಳ ಪ್ರವೇಶಾತಿ ಗಣನೀಯವಾಗಿ ಹೆಚ್ಚಳವಾಗಿದೆ. ಕೋವಿಡ್ ಆತಂಕ ದೂರವಾದ ಬಳಿಕ ಇನ್ನಷ್ಟು ಹೊಸ ಯೋಜನೆಗಳನ್ನು ಜಾರಿಗೊಳಿಸಲಿದೆ’ ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ತಿಳಿಸಿದ್ದಾರೆ.

ವಿಶ್ವವಿದ್ಯಾಲಯದ ಕುರಿತು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿರುವ ಆರೋಪಗಳ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿರುವ ಅವರು, ‘ಕೆಎಸ್‌ಒಯು ಬದಲಾವಣೆಯ ಹಾದಿಯಲ್ಲಿ ಮುಂದಡಿಯಿಟ್ಟಿದ್ದು, ಹಲವು ನೂತನ ವಿಷಯಗಳನ್ನು ಆರಂಭಿಸಿದೆ. ಪ್ರವೇಶಾತಿ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್‌ನಲ್ಲೇ ನಡೆಸುತ್ತಿದೆ. 25 ವರ್ಷಗಳನ್ನು ಪೂರೈಸಿದ್ದು, ಬೆಳ್ಳಿಹಬ್ಬದ ಸಂಭ್ರಮದಲ್ಲಿದೆ. ಇಂತಹ ಸಮಯದಲ್ಲಿ ವಿಶ್ವವಿದ್ಯಾಲಯದ ಏಳಿಗೆಗೆ ಎಲ್ಲರೂ ಕೈಜೋಡಿಸಬೇಕು’ ಎಂದು ಮನವಿ ಮಾಡಿದರು.

‘ರಾಜ್ಯ ಸರ್ಕಾರವು, ಕರ್ನಾಟಕದಲ್ಲಿ ಮುಕ್ತ ಹಾಗೂ ದೂರ ಶಿಕ್ಷಣ ಕೋರ್ಸ್ ನೀಡುವ ಅಧಿಕಾರವನ್ನು ಕೆಎಸ್‌ಒಯುಗೆ ಮಾತ್ರ ನೀಡಿದೆ. ಈ ಸಂಬಂಧ 2020ರ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಈ ವಿ.ವಿ ಸ್ಥಾಪನೆಯ ಉದ್ದೇಶ 25ನೇ ವರ್ಷದಲ್ಲಿ ಈಡೇರಿದೆ. ಇದು ನಮಗೆ ದೊರೆತ ಬೆಳ್ಳಿಹಬ್ಬದ ಉಡುಗೊರೆ’ ಎಂದು ಸಂತಸ ವ್ಯಕ್ತಪಡಿಸಿದರು.

‘ಬೆಳ್ಳಿಹಬ್ಬದ ಆಚರಣೆ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರಕ್ಕೆ ಪೂರಕವಾದ ಎಲ್ಲ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರುವ, 24X7 ಕಾರ್ಯನಿರ್ವಹಿಸುವ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ವಿ.ವಿ ಕ್ಯಾಂಪಸ್‌ನಲ್ಲಿ ವೈಫೈ ಸೌಲಭ್ಯ ಒದಗಿಸಲು ಕ್ರಮವಹಿಸಲಾಗಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸದಾ ಹೊಸತನಕ್ಕೆ ತುಡಿಯುತ್ತಿರುವ ವಿ.ವಿ. ದೇಶದ ವಿವಿಧ ಭಾಗಗಳ ವಿದ್ಯಾರ್ಥಿಗಳು ಮತ್ತು ಪೋಷಕರ ವಿಶ್ವಾಸ ಗಳಿಸಿದೆ’ ಎಂದರು.

‘ಕೆಎಸ್‌ಒಯುನಲ್ಲಿ ಶಿಕ್ಷಣ ಪಡೆದ ಹಲವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತರಬೇತಿ ಶಿಬಿರ ಕೂಡಾ ಆಯೋಜಿಸುತ್ತಿದೆ. ವಿವಿಧ ಕಾರಣಗಳಿಂದ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದವರಿಗೆ, ಉದ್ಯೋಗದ ಜೊತೆಯಲ್ಲೇ ಉನ್ನತ ಶಿಕ್ಷಣ ಪಡೆಯಲು ಬಯಸುವವರಿಗೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮತ್ತು ಆರ್ಥಿಕವಾಗಿ ಸಂಕಷ್ಟದಲ್ಲಿರುವವರಿಗೆ ಕೆಎಸ್‌ಒಯು ಆಶಾಕಿರಣವಾಗಿದೆ’ ಎಂದು ತಿಳಿಸಿದರು.

‘ತನ್ನ 25 ವರ್ಷಗಳ ಹಾದಿಯಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದೆ. ಮಾನ್ಯತೆಯ ಬಿಕ್ಕಟ್ಟಿನಿಂದಾಗಿ ಕೆಲವು ವರ್ಷ ಸಮಸ್ಯೆಗೆ ಸಿಲುಕಿತ್ತು. ಈ ಹಿಂದೆ ಇದ್ದವರು ಯುಜಿಸಿ ಮಾನ್ಯತೆ ಪಡೆಯಲು ಸಕಾಲಕ್ಕೆ ಕ್ರಮವಹಿಸದೇ ಇದ್ದುದು ಇದಕ್ಕೆಲ್ಲ ಕಾರಣವಾಗಿತ್ತು. ಇದೀಗ ಎಲ್ಲ ಸಮಸ್ಯೆ, ಗೊಂದಲಗಳನ್ನು ಬಗೆಹರಿಸಿಕೊಂಡು ಯಶಸ್ಸಿನ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟಿದೆ. ಮಾನ್ಯತೆ ಕಳೆದುಕೊಂಡ ಎಲ್ಲ ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆದುಕೊಂಡಿದೆ’ ಎಂದರು.

ಪ್ರಜಾವಾಣಿ ಸಂದರ್ಶನ

ಪ್ರೊ.ಎಸ್.ವಿದ್ಯಾಶಂಕರ್, ಕುಲಪತಿ

‘ಇದೀಗ ವಿಜ್ಞಾನ ವಿಭಾಗದಲ್ಲಿ 11 ಕಾರ್ಯಕ್ರಮಗಳು ಒಳಗೊಂಡಂತೆ ಒಟ್ಟಾರೆಯಾಗಿ 31 ಕಾರ್ಯಕ್ರಮಗಳನ್ನು ನೀಡುತ್ತಿದೆ. ವಿದ್ಯಾರ್ಥಿಗಳಿಗೆ ತಾವು ಇರುವ ಸ್ಥಳದಿಂದಲೇ ಆನ್‌ಲೈನ್ ಮೂಲಕ ಪ್ರವೇಶಾತಿ ಪಡೆದುಕೊಳ್ಳುವ ಅವಕಾಶ ಕಲ್ಪಿಸಿದೆ. ಪ್ರವೇಶಾತಿಯಿಂದ ಹಿಡಿದು, ಅಂಕಪಟ್ಟಿ ಮತ್ತು ಸರ್ಟಿಫಿಕೇಟ್ ಪಡೆಯುವ ತನಕದ ಎಲ್ಲ ಪ್ರಕ್ರಿಯೆ ಆನ್‌ಲೈನ್‌ನಲ್ಲೇ ನಡೆಯುತ್ತದೆ. ತಂತ್ರಜ್ಞಾನದ ಬಳಕೆಯಲ್ಲಿ ಸಾಂಪ್ರದಾಯಿಕ ವಿ.ವಿಗಳನ್ನು ಮೀರಿಸಿದೆ. ಅಲ್ಪ ಕಾಲಾವಧಿಯಲ್ಲೇ ಹೈಟೆಕ್ ವಿ.ವಿ ಆಗಿ ಬೆಳೆದುನಿಂತಿದೆ’ ಎಂದು ವಿವರಿಸಿದರು.

● ವಿ.ವಿಯನ್ನು ಹೈಟೆಕ್ ಆಗಿಸಲು ನಿಮ್ಮ ಅವಧಿಯಲ್ಲಿ ಕೈಗೊಂಡಿರುವ ಕ್ರಮಗಳೇನು?

ಪ್ರೊ.ವಿದ್ಯಾಶಂಕರ್: ಆಡಳಿತದಲ್ಲಿ ಡಿಜಿಟಲೀಕರಣಕ್ಕೆ ಒತ್ತು ನೀಡಿದ್ದೇವೆ. ಯುಜಿಸಿಯ ಆದೇಶದಂತೆ ಕೆಎಸ್‌ಒಯು ಕೂಡಾ ಪದವಿ ಹಾಗೂ ಸ್ನಾತಕೋತ್ತರ ಹಂತಗಳಲ್ಲಿ ಸಿಬಿಸಿಎಸ್ (ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್) ಅಳವಡಿಸಿಕೊಂಡಿದ್ದು, ಈ ಶೈಕ್ಷಣಿಕ ವರ್ಷದಿಂದಲೇ ಜಾರಿಯಾಗಲಿದೆ. ವಿದ್ಯಾರ್ಥಿಗಳ ಕಲಿಕೆಗೆ ಪಠ್ಯಗಳು ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ಮಾಡಿದ್ದೇವೆ. ಡಿಜಿಟಲ್ ಅಂಕಪಟ್ಟಿಯನ್ನು ವಿದ್ಯಾರ್ಥಿಗಳ ಇ–ಮೇಲ್‌ಗೆ ಕಳುಹಿಸುವ ವ್ಯವಸ್ಥೆ ಜಾರಿಗೆ ಬಂದಿದೆ. ಈ ಹಿಂದಿನಂತೆ ಪ್ರಿಂಟ್ ತೆಗೆದು ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲ ಬೋಧಕರಿಗೆ ಲ್ಯಾಪ್‌ಟಾಪ್, ಡೆಸ್ಕ್ ಟಾಪ್ ಮತ್ತು ನೋಟ್ ಪ್ಯಾಡ್‌ಗಳನ್ನು ನೀಡಲಾಗಿದೆ. ವಿ.ವಿಯಲ್ಲಿ ಈಗಾಗಲೇ 9 ಪೀಠಗಳು ಕಾರ್ಯಾರಂಭ ಮಾಡುತ್ತಿದ್ದು, ಹೊಸದಾಗಿ 4 ಪೀಠಗಳ ಸ್ಥಾಪನೆಗೆ ಕ್ರಮಕೈಗೊಳ್ಳಲಾಗಿದೆ.

ಎಂಬಿಎ ಕಾರ್ಯಕ್ರಮಕ್ಕೆ ಎಐಸಿಟಿಇ ಅನುಮೋದನೆ ನೀಡಿದ್ದು, 10 ಸಾವಿರ ಮಂದಿಗೆ ಪ್ರವೇಶಾತಿ ಅವಕಾಶ ಕಲ್ಪಿಸಲಾಗುತ್ತದೆ. ವಿ.ವಿಗೆ ನ್ಯಾಕ್ ಮಾನ್ಯತೆ ದೊರಕಿಸಲು ಅವಿರತ ಪ್ರಯತ್ನ ಸಾಗಿದೆ. ಯುಜಿಸಿಯಿಂದ 12 (ಬಿ) ಮಾನ್ಯತೆ ದೊರೆತಿದೆ. ಆನ್‌ಲೈನ್ ಕಾರ್ಯಕ್ರಮಗಳನ್ನು ಶೀಘ್ರದಲ್ಲೇ ಆರಂಭಿಸಲಾಗುವುದು.



ವಿವಿ ಬಗ್ಗೆ ವಿದ್ಯಾರ್ಥಿಗಳ ಮನಸ್ಸಿನಲ್ಲಿದ್ದ ಗೊಂದಲಗಳನ್ನು ನಿವಾರಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ

ಪ್ರೊ.ಎಸ್.ವಿದ್ಯಾಶಂಕರ್, ಕುಲಪತಿ

● ಹೊಸದಾಗಿ ಆರಂಭಿಸುವ ಕಾರ್ಯಕ್ರಮಗಳು (ಪ್ರೋಗ್ರಾಂ) ಯಾವುವು?

ಸಸ್ಯವಿಜ್ಞಾನ, ಪ್ರಾಣಿ ವಿಜ್ಞಾನ, ಆಹಾರ ವಿಜ್ಞಾನ, ಮಾಹಿತಿ ತಂತ್ರಜ್ಞಾನ ವಿಷಯಗಳಲ್ಲಿ ಎಂ.ಎಸ್ಸಿ ಪದವಿ, ಬಿ.ಎಸ್ಸಿ (ಜನರಲ್), ಮಾಹಿತಿ ತಂತ್ರಜ್ಞಾನ ಮತ್ತು ಗೃಹ ವಿಜ್ಞಾನ ವಿಷಯಗಳಲ್ಲಿ ಬಿ.ಎಸ್ಸಿ ಪದವಿ, ಬಿಬಿಎ, ಬಿಸಿಎ, ತೆಲುಗು ಹಾಗೂ ಶಿಕ್ಷಣ ವಿಷಯಗಳಲ್ಲಿ ಎಂ.ಎ ಕೋರ್ಸ್ ಆರಂಭಿಸಲಾಗುತ್ತದೆ. ಈ ಕುರಿತು ವಿ.ವಿ ಸಲ್ಲಿಸಿದ್ದ ಮನವಿಗೆ ಯುಜಿಸಿ ತಜ್ಞರ ಸಮಿತಿ ಒಪ್ಪಿಗೆ ನೀಡಿದೆ. ಇದರೊಂದಿಗೆ ವಿಶ್ವವಿದ್ಯಾಲಯದ ಕಾರ್ಯಕ್ರಮಗಳ ಸಂಖ್ಯೆ 42ಕ್ಕೆ ಏರಲಿದೆ.

● ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್. ರಾಮೇಗೌಡ, ಕೆಎಸ್‌ಒಯು ಉಳಿಸಿ ಎಂದು ರಾಜ್ಯಪಾಲರಿಗೆ ಪತ್ರ ಬರೆಯಲು ಮುಂದಾಗಿದ್ದಾರೆ. ಅವರ ಆರೋಪಗಳ ಬಗ್ಗೆ ಏನನ್ನುವಿರಿ?

ಪ್ರೊ.ವಿದ್ಯಾಶಂಕರ್: ಸಲಹಾ ಮಂಡಳಿಯ ಸದಸ್ಯರಾಗಿರುವ ಅವರು ಕೆಎಸ್‌ಒಯುನ ಎಲ್ಲ ಆಗುಹೋಗುಗಳ ಬಗ್ಗೆ ಸರಿಯಾದ ವಿವರಗಳನ್ನು ಪಡೆದುಕೊಳ್ಳಬೇಕಿತ್ತು. ಆದರೆ ಕೆಲ ವರ್ಷಗಳ ಹಿಂದಿನ ಮಾಹಿತಿಯನ್ನು ಪಡೆದು ಅಥವಾ ಸಮರ್ಪಕ ಮಾಹಿತಿ ಇಲ್ಲದೆಯೇ ಆರೋಪಗಳನ್ನು ಮಾಡುತ್ತಿದ್ದಾರೆ. ವಿ.ವಿ ಕಾರ್ಯವೈಖರಿ ಬಗ್ಗೆ ಯಾವುದೇ ಗೊಂದಲಗಳಿದ್ದರೆ, ನೇರವಾಗಿ ನನ್ನನ್ನು ಭೇಟಿಯಾಗಿ ನೈಜ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಿತ್ತು. ದಾಖಲೆಗಳನ್ನು ಪರಿಶೀಲಿಸದೆಯೇ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ.

● ವಿಜ್ಞಾನ ವಿಭಾಗದ ಕೋರ್ಸ್‌ಗಳ ಗುಣಮಟ್ಟ ಕುಸಿಯುತ್ತಿದೆ ಎಂಬ ಟೀಕೆಯ ಬಗ್ಗೆ...

ಪ್ರೊ.ವಿದ್ಯಾಶಂಕರ್: ಅಂತಹ ಆರೋಪ ಮಾಡುತ್ತಿರುವವರು ಇಲ್ಲಿ ಪದವಿ ಪಡೆದ ಯಾವುದಾದರೂ ವಿದ್ಯಾರ್ಥಿಯ ಸಾಮರ್ಥ್ಯವನ್ನು ಅಳೆದಿದ್ದಾರಾ? ವಿಜ್ಞಾನ ಕೋರ್ಸ್‌ಗಳು 2010 ರಲ್ಲೇ ಆರಂಭವಾಗಿದ್ದವು. ನಾನು ಕುಲಪತಿಯಾಗಿ ಇಲ್ಲಿಗೆ ಬಂದಾಗ ಲ್ಯಾಬ್‌ಗಳು ಬೀಗ ಜಡಿದ ಸ್ಥಿತಿಯಲ್ಲಿದ್ದವು. ಚಾಪೆ, ದಿಂಬುಗಳು ಇದ್ದು, ವಿಶ್ರಾಂತಿ ಕೊಠಡಿಯಾಗಿ ಬಳಕೆಯಾಗುತ್ತಿದ್ದವು. ಅವುಗಳನ್ನು ಸರಿಪಡಿಸುವ ಕೆಲಸ ಮಾಡಿದ್ದೇನೆ. ಪದವಿ ಪಡೆದವರ ಸಾಮರ್ಥ್ಯ ಪರೀಕ್ಷಿಸಲು ‘ಎಕ್ಸಿಟ್ ಎಕ್ಸಾಂ’ ಮಾಡಬೇಕು. ಆರೋಪ ಮಾಡುವವರು ಅಂತಹ ಪರೀಕ್ಷೆ ಮಾಡಿಸಿದ್ದಾರಾ? ಅಥವಾ ಬೇರೆ ಏನಾದರೂ ಮಾನದಂಡದ ದಾಖಲೆಗಳು ಅವರ ಬಳಿ ಇವೆಯೇ? ಇಲ್ಲಿ ಓದಿದ 23 ಮಂದಿ ಕೆಎಎಸ್ ಮಾಡಿದ್ದಾರೆ. ಐಐಎಸ್, ಐಆರ್‌ಎಸ್ ಮಾಡಿದವರೂ ಇದ್ದಾರೆ. ಶಿಕ್ಷಣದ ಗುಣಮಟ್ಟ ಕುಸಿದಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ.

● ನಿಯಮ ಉಲ್ಲಂಘಿಸಿ ಸಹಾಯಕ ಪ್ರಾಧ್ಯಾಪಕರ ನೇಮಕ ನಡೆಸುತ್ತಿದೆ ಎಂಬ ಆರೋಪ ಇದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದ್ದರೂ ನೇಮಕ ಏಕೆ ಎಂಬ ಪ್ರಶ್ನೆ ಎತ್ತಿದ್ದಾರೆ...

ಪ್ರೊ.ವಿದ್ಯಾಶಂಕರ್: ನೇಮಕಾತಿ ಪ್ರಕ್ರಿಯೆ ಬಗ್ಗೆ ಸರಿಯಾದ ಮಾಹಿತಿ ಇಲ್ಲದವರು ಮಾಡುತ್ತಿರುವ ಆರೋಪ ಇದು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಹೊಸ ಕೋರ್ಸ್‌ಗಳನ್ನು ಆರಂಭಿಸಿರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆಯಲಿದ್ದಾರೆ. ಈಗ 35 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಇದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೋಧಕ ವರ್ಗದವರು ಇರುವುದಿಲ್ಲ ಎಂಬ ಅಂಶವನ್ನೂ ತಿಳಿದುಕೊಳ್ಳಬೇಕು.

ವಿ.ವಿ ನಿಯಮದ ಪ್ರಕಾರ ಒಂದು ವಿಭಾಗಕ್ಕೆ ಗರಿಷ್ಠ ಐವರು ಪ್ರಾಧ್ಯಾಪಕರು ಇರಬೇಕು. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಿಜ್ಞಾನ ವಿಷಯದಲ್ಲಿ 11 ಹೊಸ ಕೋರ್ಸ್‌ಗಳನ್ನು ಆರಂಭವಾಗಲಿವೆ. ವಿಜ್ಞಾನ ವಿಷಯವನ್ನು ಬೇರೆ ವಿಭಾಗದ ಪ್ರಾಧ್ಯಾಪಕರು ಬೋಧನೆ ಮಾಡಲು ಸಾಧ್ಯವೇ? ವಿಜ್ಞಾನ ವಿಷಯಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಗುರಿ. ಈಗ ಆರೋಪ ಮಾಡುತ್ತಿರುವವರ ಕಾಲದಲ್ಲಿಯೇ ಕೆಲವು ವಿಭಾಗಗಳಲ್ಲಿ ಏಳು ಅಧ್ಯಾಪಕರನ್ನು ನೇಮಿಸಿಕೊಳ್ಳಲಾಗಿತ್ತು. ಆಗ ಇಲ್ಲದ ಕಾನೂನಿನ ಅರಿವು ಈಗ ಮೂಡಿದೆಯೇ?

● ಐದು ವರ್ಷದ ಅವಧಿಗೆ ನಿಯಮ ಮೀರಿ ನೇಮಕ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ. ಇದು ನಿಜವೇ?

ಪ್ರೊ.ವಿದ್ಯಾಶಂಕರ್: ಗರಿಷ್ಠ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ವಿ.ವಿ ಅಧಿನಿಯಮದಲ್ಲಿ ಅವಕಾಶ ಇದೆ. ಆದರೆ, ಕೇವಲ ಆರು ತಿಂಗಳಿಗೆ ಮಾತ್ರ ನೇಮಕ ಮಾಡಿಕೊಳ್ಳಬಹುದು ಎಂದು ತಪ್ಪು ಮಾಹಿತಿಯನ್ನು ಕೆಲವರು ನೀಡುತ್ತಿದ್ದಾರೆ. ನೇಮಕಾತಿ ಪ್ರಕ್ರಿಯೆ ಯುಜಿಸಿ ನಿಯಮದ ಪ್ರಕಾರವೇ ನಡೆಯುತ್ತಿದೆ. ಉರ್ದು, ತೆಲುಗು ಭಾಷೆಗಳಿಗೆ ಯಾವುದೇ ಬೋಧಕರನ್ನು ನಾನು ನೇಮಕ ಮಾಡಿಲ್ಲ. ಈ ಹಿಂದಿನ ವರ್ಷ ಕಾಯಂ ಆಗಿದ್ದವರು ಈಗ ನಿವೃತ್ತಿಯಾಗಿದ್ದಾರೆ. ಹಿಂದಿನ ವರ್ಷಗಳಲ್ಲಿ ಕಾನೂನು/ ನಿಯಮಗಳನ್ನು ಉಲ್ಲಂಘಿಸಿದ್ದವರೇ ಇದೀಗ ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ.

● ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳನ್ನು ಸೆಳೆಯಲು ಹೊಸದಾಗಿ ಏನು ಕ್ರಮಕೈಗೊಂಡಿದ್ದೀರಿ?

ಪ್ರೊ.ವಿದ್ಯಾಶಂಕರ್: ಉತ್ತರ ಕರ್ನಾಟಕದ ಪ್ರಮುಖ ಸ್ಥಳ ಹುಬ್ಬಳ್ಳಿ– ಧಾರವಾಡ ನಡುವೆ ವಿಶ್ವವಿದ್ಯಾಲಯದ ಸ್ವಂತ ಜಾಗವಿದ್ದು, ಆಡಳಿತ ಮಂಡಳಿ ನಿರ್ಧಾರದಂತೆ ಕಟ್ಟಡವನ್ನು ನಿರ್ಮಿಸಲಾಗುತ್ತದೆ. ಆ ಭಾಗದಲ್ಲಿ 2020–21ನೇ ಸಾಲಿನಲ್ಲಿ 7 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಮಂಗಳೂರಿನಲ್ಲೂ ನಮ್ಮ ಸ್ವಂತ ಕಟ್ಟಡ ನಿರ್ಮಾಣ ಆಗಲಿದೆ. ಅದರೆ ಈ ಎರಡು ಕಟ್ಟಡಗಳನ್ನು ನಿರ್ಮಿಸುವ ನಿರ್ಧಾರ ನನ್ನ ಅವಧಿಯಲ್ಲಿ ಆಗಿದ್ದಲ್ಲ. ಬಹಳ ಹಿಂದೆಯೇ ಕಟ್ಟಡ ನಿರ್ಮಾಣಕ್ಕೆ ವ್ಯವಸ್ಥಾಪನಾ ಮಂಡಳಿಯಲ್ಲಿ ತೀರ್ಮಾನವಾಗಿದೆ. ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ಸಂಸ್ಕೃತಿ ವಿ.ವಿಗೆ ಸೇರಿದ ಜಾಗದಲ್ಲಿ ಕಟ್ಟಡ ನಿರ್ಮಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ಈ ಹಿಂದೆ ಇದ್ದವರು ಚಾಮರಾಜನಗರ, ಮಂಡ್ಯ, ಚಿಕ್ಕಮಗಳೂರು, ಹಾಸನ ಸೇರಿದಂತೆ ರಾಜ್ಯದ ದಕ್ಷಿಣ ಭಾಗದಲ್ಲಿ ಮಾತ್ರ ಪ್ರಾದೇಶಿಕ ಕೇಂದ್ರಗಳನ್ನು ಕಟ್ಟಿದರು. ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರು.

● 2012–13 ನೇ ಸಾಲಿನ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ನಿರ್ಧಾರ ಹಿಂದಕ್ಕೆ ಪಡೆಯಲು ಕಾರಣ?

ಪ್ರೊ.ವಿದ್ಯಾಶಂಕರ್: ಕೆಎಸ್‌ಒಯುಗೆ 2008 ರಿಂದ 2012ರವರೆಗೆ ಯುಜಿಸಿ ಮಾನ್ಯತೆ ಇತ್ತು. ಈ ಅವಧಿಯಲ್ಲಿ ತಾಂತ್ರಿಕೇತರ ಕೋರ್ಸ್‌ಗಳಲ್ಲಿ ಪದವಿ ಪೂರೈಸಿದವರಿಗೆ ಅಂಕಪಟ್ಟಿ ನೀಡಲು ಯುಜಿಸಿ ಅನುಮತಿ ನೀಡಿದೆ. ಆದ್ದರಿಂದ 2012–13ನೇ ಸಾಲಿನಲ್ಲಿ ಪ್ರವೇಶ ಪಡೆದವರಿಗೂ ಪ್ರಮಾಣಪತ್ರ ನೀಡಲು ಮುಂದಾಗಿದ್ದೆವು. ಆದರೆ ಯುಜಿಸಿ ಹೊಸ ಆದೇಶದಲ್ಲಿ ಪ್ರಮಾಣಪತ್ರ ನೀಡದಂತೆ ಸೂಚಿಸಿದ್ದರಿಂದ ತಡೆಹಿಡಿದಿದ್ದೇವೆ. ಈ ಸಂಬಂಧ ಯುಜಿಸಿಗೆ ಮತ್ತೆ ಪತ್ರ ಬರೆಯಲಿದ್ದೇವೆ. ವಿದ್ಯಾರ್ಥಿಗಳಿಗೆ ಯಾವುದೇ ಅನ್ಯಾಯ ಆಗಬಾರದು ಎಂಬುದೇ ನನ್ನ ಉದ್ದೇಶ.

● ವಿಶ್ವವಿದ್ಯಾಲಯ ದಿವಾಳಿಯಾಗಲಿದೆ ಎನ್ನುವ ವರಿಗೆ ನಿಮ್ಮ ಉತ್ತರ?

ಪ್ರೊ.ವಿದ್ಯಾಶಂಕರ್: ನಾನು ಕುಲಪತಿಯಾಗಿ ಅಧಿಕಾರ ವಹಿಸಿಕೊಂಡಾಗ ಇದ್ದ ಸ್ಥಿತಿಗೆ ಹೋಲಿಸಿದರೆ, ವಿ.ವಿಯ ಆರ್ಥಿಕ ಸ್ಥಿತಿ ಈಗ ಉತ್ತಮವಾಗಿದೆ. ಕಾಯ್ದಿಟ್ಟ ನಿಧಿಯನ್ನು ಪೋಲು ಮಾಡುತ್ತಿಲ್ಲ. ಈಗ ಬಡ್ಡಿ ದರ ಕಡಿಮೆಯಾಗಿದ್ದರಿಂದ ಅದು ಬೆಳೆಯುತ್ತಿಲ್ಲ. ವಿ.ವಿ ಮೇಲೆ ಯಾವುದೇ ಆರ್ಥಿಕ ಹೊರೆ ಇಲ್ಲ. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಬಡ್ತಿ ನೀಡಿ, ಬೋಧಕ ವರ್ಗದವರಿಗೆ ಪರಿಷ್ಕೃತ ಯುಜಿಸಿ ವೇತನದನ್ವಯ 2016ರ ಜನವರಿಯಿಂದಲೇ ಹಿಂಬಾಕಿ ಪಾವತಿಸಲಾಗಿದೆ. ದಿವಾಳಿಯಾಗಲಿದೆ ಎಂಬ ಮಾತಿನಲ್ಲಿ ಯಾವುದೇ ಅರ್ಥವಿಲ್ಲ. ಕಳೆದ ಆರ್ಥಿಕ ಸಾಲಿನಲ್ಲಿ ವಿಶ್ವವಿದ್ಯಾಲಯ ನೀಡಬೇಕಿದ್ದ ₹ 19 ಕೋಟಿ ಜಿಎಸ್‌ಟಿ ತೆರಿಗೆ ಪಾವತಿಸಿದೆ.

ವಿಚಾರವಾದಿ ದಾಭೋಲ್ಕರ್ ಹತ್ಯೆ: ಆರೋಪಪಟ್ಟಿ ಶೀಘ್ರ ಅಂತಿಮ

ಪುಣೆ (ಪಿಟಿಐ): ಮೂಢನಂಬಿಕೆ ವಿರೋಧಿ ಹೋರಾಟಗಾರ ಡಾ.ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿರುವ ಐವರು ಆರೋಪಿಗಳ ವಿರುದ್ಧದ ಆರೋಪಗಳನ್ನು ಸೆ.15ರಂದು ಅಂತಿಮಗೊಳಿಸಲಾಗುತ್ತದೆ ಎಂದು ಇಲ್ಲಿನ ವಿಶೇಷ ನ್ಯಾಯಾಲಯ ತಿಳಿಸಿದೆ.

ಮಹಾರಾಷ್ಟ್ರದ ಅಂಧ ಶ್ರದ್ಧಾ ನಿರ್ಮೂಲನ ಸಮಿತಿಯ ಅಧ್ಯಕ್ಷರಾಗಿದ್ದ ದಾಭೋಲ್ಕರ್ ಅವರನ್ನು 2013ರ ಆಗಸ್ಟ್ 20ರಂದು ಗುಂಡು ಹಾರಿಸಿ ಹತ್ಯೆ ಮಾಡಲಾಗಿತ್ತು. ಬಲಪಂಥೀಯ ಗುಂಪಿನ ಕಾರ್ಯಕರ್ತರು ಈ ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿತ್ತು.



ನರೇಂದ್ರ ದಾಭೋಲ್ಕರ್

ಬಂಧಿತರಲ್ಲಿ ವೀರೇಂದ್ರ ಸಿನ್ಹಾ ತಾವ್ಡೆ, ಸಚಿನ್ ಅಂಧೂರೆ, ಶರದ್ ಕಲಸ್ಕರ್ ಮತ್ತು ವಿಕ್ರಂ ಭಾವೆ ವಿರುದ್ಧ ಐಪಿಸಿ ಅನ್ವಯ ಕೊಲೆ ಮೊಕದ್ದಮೆ, ಕ್ರಿಮಿನಲ್ ಸಂಚು ಹಾಗೂ ಶಸ್ತ್ರಾಸ್ತ್ರ ಕಾಯ್ದೆ, ಕಾನೂನು ಬಾಹಿರ ಕೃತ್ಯಗಳ ನಿಯಂತ್ರಣ ಕಾಯ್ದೆಯನ್ವಯ ಆರೋಪಗಳನ್ನು ಅಂತಿಮಗೊಳಿಸಲಾಗುವುದು. ವಕೀಲ ಸಂಜೀವ್ ಪುನಾಲೇಕರ್ ವಿರುದ್ಧ ಸಾಕ್ಷ್ಯ ನಾಪತ್ತೆಗೆ ಯತ್ನ, ತಪ್ಪು ಮಾಹಿತಿ ನೀಡಿದ ಆರೋಪಗಳನ್ನು ಅಂತಿಮಗೊಳಿಸಲಾಗುವುದು ಎಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್.ನವಂದರ್ ತಿಳಿಸಿದ್ದಾರೆ.

ಸಚಿವ ಮುರುಗೇಶ್ ನಿರಾಣಿ ಹೆಸರಿನಲ್ಲಿ ನಕಲಿ ಖಾತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರ ಹೆಸರಿನಲ್ಲಿ 'ಫೇಸ್‌ಬುಕ್' ಸಾಮಾಜಿಕ ಜಾಲತಾಣದಲ್ಲಿ ನಕಲಿ ಖಾತೆ ಸೃಷ್ಟಿಸಿರುವ ಕಿಡಿಗೇಡಿಗಳು, ಹಣದ ಸಹಾಯ ಕೋರಿ ಸಚಿವರ ಸ್ನೇಹಿತರಿಗೆ ಸಂದೇಶ ಕಳುಹಿಸುತ್ತಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಸಚಿವ ನಿರಾಣಿ, 'ನಕಲಿ ಖಾತೆ ಸೃಷ್ಟಿಸಿರುವ ಕಿಡಿಗೇಡಿಗಳ ವಿರುದ್ಧ ಸೈಬರ್ ಕ್ರೈಂ ಠಾಣೆಗೆ ದೂರು ನೀಡಲು ಚಿಂತನೆ ನಡೆಸಿದ್ದೇನೆ' ಎಂದಿದ್ದಾರೆ.



ಮುರುಗೇಶ್ ನಿರಾಣಿ

'ನನ್ನ ಹೆಸರು ದುರ್ಬಳಕೆ ಮಾಡಿಕೊಂಡು ಕಿಡಿಗೇಡಿಗಳು ನಕಲಿ ಖಾತೆ ಸೃಷ್ಟಿಸಿದ್ದಾರೆ. ನನ್ನ ಹೆಸರಿನಲ್ಲೇ ಹಣ ಸಹಾಯ ಕೇಳಿದ ರೀತಿಯಲ್ಲಿ ಸಂದೇಶಗಳನ್ನು ಹರಿಬಿಡುತ್ತಿದ್ದಾರೆ. ಇಂಥ ಸಂದೇಶಗಳನ್ನು ಯಾರೂ ನಂಬಬಾರದು. ಕಿಡಿಗೇಡಿಗಳ ವಂಚನೆ ಜಾಲಕ್ಕೆ ಸಿಲುಕಬಾರದು' ಎಂದೂ ಅವರು ಹೇಳಿದ್ದಾರೆ.

ಹಿಂದಿ ದಿವಸ ಆಚರಣೆ ವಿರೋಧಿಸಿ ಸೆ. 14 ರಂದು ಪ್ರತಿಭಟನೆ

ಬೆಂಗಳೂರು: ಸೆಪ್ಟೆಂಬರ್ 14ರಂದು ಹಿಂದಿ ದಿವಸ ಆಚರಣೆ ವಿರೋಧಿಸಿ ಎಲ್ಲ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್‌ಗಳ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ ತಿಳಿಸಿದೆ.

'ಕನ್ನಡಿಗರ ತೆರಿಗೆ ಹಣದಲ್ಲಿ ಹಿಂದಿ ದಿವಸ ಆಚರಣೆ ನಡೆಸುವುದು ಸರಿಯಲ್ಲ. ಭಾಷಾ ವೈವಿಧ್ಯತೆಯ ಭಾರತದಲ್ಲಿ ಒಂದು ಭಾಷೆಯನ್ನು ಹೊತ್ತು ಮೆರೆಸುವ ಅಗತ್ಯವಿಲ್ಲ. ಭಾರತೀಯ ಭಾಷೆಗಳಲ್ಲಿ ಹಿಂದಿಯೂ ಒಂದು. ಅದಕ್ಕೆ ವಿಶೇಷ ಮಹತ್ವ ಮತ್ತು ಪ್ರೋತ್ಸಾಹ ನೀಡುವುದು ಅನ್ಯಾಯ' ಎಂದು ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಹಿಂದಿ ಭಾಷಿಕರಿಗೆ ಎಲ್ಲ ರಾಜ್ಯಗಳಲ್ಲೂ ಅಗತ್ಯ ಸೇವೆಗಳನ್ನು ಕಲ್ಪಿಸುವುದೇ ಇದರ ಹಿಂದಿನ ಉದ್ದೇಶ. ಆ ಮೂಲಕ ಇತರ ಭಾಷಿಕರಿಗೆ ಇಲ್ಲದ ಸೌಲಭ್ಯ ಹಿಂದಿ ಭಾಷಿಕರಿಗೆ ಒದಗಿಸಲಾಗುತ್ತಿದೆ. ಇದು ಸಂವಿಧಾನದ ಸಮಾನತೆಯ ಆಶಯಗಳಿಗೆ ವಿರುದ್ಧ' ಎಂದಿದ್ದಾರೆ.

ಹಿಂದಿ ಹೇರಿಕೆಯ ಪರಿಣಾಮವಾಗಿ ಕೇಂದ್ರ ಸರ್ಕಾರದ ಉದ್ಯೋಗಗಳು ಹಿಂದಿ ಭಾಷಿಕರ ಪಾಲಾಗುತ್ತಿವೆ. ಕನ್ನಡದ ಮಕ್ಕಳು ನಿರುದ್ಯೋಗದ ಸಮಸ್ಯೆ ಎದುರಿಸುವಂತಾಗಿದೆ. ಕರ್ನಾಟಕಕ್ಕೆ ಉತ್ತರದ ರಾಜ್ಯಗಳಿಂದ ವಲಸೆ ವಿಪರೀತವಾಗಿದ್ದು, ಕನ್ನಡಿಗರ ಅಸ್ಮಿತೆ, ಸಂಸ್ಕೃತಿ, ಪರಂಪರೆ ಮತ್ತು ಬದುಕು ಅಪಾಯಕ್ಕೆ ಸಿಲುಕಿದೆ ಎಂದು ಹೇಳಿದ್ದಾರೆ.

ಈ ಎಲ್ಲ ಕಾರಣಗಳಿಂದ ಹಿಂದಿ ದಿವಸ ವಿರೋಧಿಸಿ 14ರಂದು ಬ್ಯಾಂಕ್‌ಗಳ ಎದುರು ಸಾವಿರಾರು ಸಂಖ್ಯೆಯಲ್ಲಿ ಕನ್ನಡಿಗರು ಪ್ರತಿರೋಧ ವ್ಯಕ್ತಪಡಿಸಲಿದ್ದಾರೆ ಎಂದು ತಿಳಿಸಿದ್ದಾರೆ.

CONNECT

ಮ್ಯಾಕ್ಸ್ ಮುಲ್ಲರ್ ಪಬ್ಲಿಕ್ ಸ್ಕೂಲ್

8ನೇ ಮುಖ್ಯ ರಸ್ತೆ, BEML ಬಡಾವಣೆ, ಬಸವೇಶ್ವರ ನಗರ, ಬೆಂಗಳೂರು.



ಶ್ರೀ ಕಂಚಿ ಕಾಮಾಕ್ಷಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಶಾಲಾ ಶಿಕ್ಷಕರುಗಳಿಗೆ ಶಾಲಾ ಸಂಸ್ಥಾಪಕರಾದ ಶ್ರೀಮತಿ ಹೇಮಲತಾ ಜನಾರ್ಧನ್ ರವರು ಈ ಸಂದರ್ಭದಲ್ಲಿ ದಿನಸಿ ಕಿಟ್ಟುಗಳನ್ನು ವಿತರಣೆ ಮಾಡಿದರು.

ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅವಘಡ • ಜಲಮಂಡಳಿ ಗುತ್ತಿಗೆದಾರನ ವಿರುದ್ಧ ಎಫ್‌ಐಆರ್

ರಸ್ತೆ ಗುಂಡಿ: ವಾಹನದಿಂದ ಬಿದ್ದು ಅಂಗವಿಕಲ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದಾರೆ.

‘ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ನಿವಾಸಿ ಖುರ್ಷಿದ್ ಅಹ್ಮದ್, ಅಂಗವಿಕಲರಾಗಿದ್ದರು. ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಎರಡು ಪ್ರತ್ಯೇಕ ಚಕ್ರಗಳನ್ನು ಅಳವಡಿಸಿಕೊಂಡು ಬಳಸುತ್ತಿದ್ದರು. ಅದೇ ವಾಹನದಲ್ಲಿ ಸೋಮವಾರ ರಾತ್ರಿ ವಿಶ್ವೇಶ್ವರಯ್ಯ ಬಡಾವಣೆಯ 4ನೇ ಹಂತದಲ್ಲಿರುವ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ರಸ್ತೆ ಗುಂಡಿಯಿಂದಾಗಿ ವಾಹನ ಉರುಳಿಬಿದ್ದು ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಜಲಮಂಡಳಿ ಗುತ್ತಿಗೆದಾರ



ಖುರ್ಷಿದ್ ಅಹ್ಮದ್ ಅವರು ಬಳಸುತ್ತಿದ್ದ ವಾಹನ

ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ಅವರು ತಿಳಿಸಿದರು.



ಖುರ್ಷಿದ್ ಅಹ್ಮದ್

ಮಳೆಯಿಂದ ಕಿತ್ತುಹೋದ ಮಣ್ಣು: ‘ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಸುತ್ತಮುತ್ತ ಒಳಚರಂಡಿ ಕೊಳವೆ ಅಳವಡಿಸುವ ಕೆಲಸ ನಡೆಯುತ್ತಿದೆ. ಜಲಮಂಡಳಿಯ ಕಾಮಗಾರಿಯ ಗುತ್ತಿಗೆ ಪಡೆದವರು, ಈ ಕೆಲಸ ಮಾಡಿಸುತ್ತಿದ್ದಾರೆ. ಮಂಗನಹಳ್ಳಿ ಮುಖ್ಯರಸ್ತೆಯಲ್ಲೂ ಇತ್ತೀಚೆಗೆ ಡಾಂಬರ್ ರಸ್ತೆ ಅಗೆದು ಪೈಪ್ ಅಳವಡಿಸಲಾಗಿತ್ತು.’



ಖುರ್ಷಿದ್ ಅಹ್ಮದ್ ಅವರ ದ್ವಿಚಕ್ರ ವಾಹನ ಉರುಳಿ ಬೀಳಲು ಕಾರಣವಾದ ವಿಶ್ವೇಶ್ವರಯ್ಯ ಬಡಾವಣೆಯ 4ನೇ ಹಂತದಲ್ಲಿರುವ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿರುವ ಗುಂಡಿ – ಪ್ರಜಾವಾಣಿ ಚಿತ್ರ

‘ರಸ್ತೆಯ ಒಂದು ಬದಿಯಿಂದ ಇನ್ನೊಂದು ಬದಿಯವರೆಗೆ ಮಣ್ಣು ಅಗೆದು ಗುಂಡಿ ತೊಡಲಾಗಿತ್ತು. ಅದರೊಳಗೆ ಕೊಳವೆ ಅಳವಡಿಸಿ, ನಂತರ ಮಣ್ಣಿನಿಂದ ಮುಚ್ಚಲಾಗಿತ್ತು. ಇತ್ತೀಚೆಗೆ ಸುರಿದ ಮಳೆಯಿಂದಾಗಿ ಮಣ್ಣು ಕಿತ್ತು ಹೋಗಿ, ದೊಡ್ಡ ಗುಂಡಿ ಸೃಷ್ಟಿಯಾಗಿತ್ತು. ಅದರೊಳಗೆ ನೀರು ನಿಂತುಕೊಂಡಿತ್ತು’ ಎಂದೂ ಪೊಲೀಸರು ವಿವರಿಸಿದರು.

‘ರಸ್ತೆ ಮೇಲೆ ನೀರು ನಿಂತಿರಬಹುದೆಂದು ಕೆಲ ಸವಾರರು, ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೋಗುತ್ತಿದ್ದರು. ಆದರೆ, ಗುಂಡಿಯಲ್ಲಿ ವಾಹನಗಳು ಇಳಿದು ಉರುಳಿ ಬೀಳುತ್ತಿದ್ದವು. ಇದರಿಂದಾಗಿ ಅನೇಕ ಸವಾರರು ಗಾಯಗೊಂಡಿದ್ದರು ಎಂಬ ಮಾಹಿತಿಯೂ ಇದೆ.’

‘ಖುರ್ಷಿದ್ ಅಹ್ಮದ್ ಅವರು ಕೆಲಸ ನಿಮಿತ್ತ ಇದೇ ರಸ್ತೆಯಲ್ಲಿ ಹೊರಟಿದ್ದರು. ಗುಂಡಿಯಲ್ಲಿ ಚಕ್ರಗಳು ಇಳಿದಾಗ ವಾಹನ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡು ನರಳುತ್ತಿದ್ದ ಖುರ್ಷಿದ್ ಅವರನ್ನು ಸ್ಥಳೀಯರೇ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಅಸುನೀಗಿದ್ದಾರೆ. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ’ ಎಂದೂ ಪೊಲೀಸರು ವಿವರಿಸಿದರು.

‘ಅವೈಜ್ಞಾನಿಕ ಕೆಲಸ’

‘ಕೊಳವೆ ಅಳವಡಿಸಿದ ನಂತರ ವೈಜ್ಞಾನಿಕವಾಗಿ ಗುಂಡಿ ಮುಚ್ಚಬೇಕೆಂದು ಜಲಮಂಡಳಿಯು ಗುತ್ತಿಗೆದಾರನಿಗೆ ಸೂಚಿಸಿತ್ತು. ತರಾತುರಿಯಲ್ಲಿ ಪೈಪ್ ಅಳವಡಿಸಿದ್ದ ಗುತ್ತಿಗೆದಾರ, ಗುಂಡಿ ಮುಚ್ಚುವಾಗಲೂ ನಿರ್ಲಕ್ಷ್ಯ ವಹಿಸಿದ್ದ. ಹೀಗಾಗಿಯೇ ಮಣ್ಣು ಕೊಚ್ಚಿಕೊಂಡು ಹೋಗಿ ರಸ್ತೆಯಲ್ಲಿ ಗುಂಡಿ ಬಿದ್ದಿತ್ತು. ಇದುವೇ ಇದೀಗ ಅಂಗವಿಕಲರೊಬ್ಬರ ಸಾವಿಗೆ ಕಾರಣವಾಗಿದೆ’ ಎಂದು ಪೊಲೀಸರು ಹೇಳಿದರು.

‘ಅಪಘಾತ ಸಂಬಂಧ ಜಲಮಂಡಳಿ ಅಧಿಕಾರಿಗಳಿಂದ ಕೆಲ ಮಾಹಿತಿ ಕೋರಲಾಗಿದೆ. ಗುತ್ತಿಗೆದಾರ ತಲೆಮರೆಸಿಕೊಂಡಿದ್ದು, ಆತನನ್ನು ಪತ್ತೆ ಮಾಡಲಾಗುತ್ತಿದೆ’ ಎಂದೂ ತಿಳಿಸಿದರು.

ರಸ್ತೆ ಗುಂಡಿಯಿಂದ ಮುಕ್ತಿ ಯಾವಾಗ?

‘ಕಾಮಗಾರಿಗಳ ಹೆಸರಿನಲ್ಲಿ ನಗರದ ಹಲವು ರಸ್ತೆಗಳನ್ನು ಬೇಕಾಬಿಟ್ಟಿಯಾಗಿ ಅಗೆಯಲಾಗಿದೆ. ಈ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಸಾರ್ವಜನಿಕರು ಭಯದಲ್ಲೇ ವಾಹನ ಚಲಾಯಿಸುವಂತಾಗಿದೆ. ಕೆಲವೆಡೆ ಅಪಘಾತಗಳು ಸಂಭವಿಸಿ, ಗಾಯಾಗಳು ಆಸ್ಪತ್ರೆಗೆ ಸೇರುತ್ತಿದ್ದಾರೆ’ ಎಂದು ಸ್ಥಳೀಯ ನಿವಾಸಿಗಳು ದೂರಿದರು.

‘ವಿಶ್ವೇಶ್ವರಯ್ಯ ಬಡಾವಣೆ ಹಾಗೂ ಸುತ್ತಮುತ್ತ ಪ್ರದೇಶಗಳ ರಸ್ತೆಗಳಲ್ಲಿ ಗುಂಡಿ ಹೆಚ್ಚಿವೆ’ ಎಂದರು.

‘ಗುಂಡಿ ಮುಚ್ಚಲು ಕ್ರಮ ಕೈಗೊಳ್ಳದ ಬಿಡಿಎ’

ಅಪಘಾತ ಸಂಭವಿಸಿದ್ದ ರಸ್ತೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧೀನದಲ್ಲಿದೆ. ಈ ರಸ್ತೆ ಹದಗೆಟ್ಟಿದ್ದನ್ನು ಬಿಡಿಎ ಗಮನಕ್ಕೆ ತಂದಿದ್ದ ಬಿಬಿಎಂಪಿ ಅಧಿಕಾರಿಗಳು ಗುಂಡಿಗಳನ್ನು ದುರಸ್ತಿಪಡಿಸುವಂತೆ ಪತ್ರ ಬರೆದಿದ್ದರು. ಆದರೂ ಗುಂಡಿ ಮುಚ್ಚಲು ಬಿಡಿಎ ಕ್ರಮ ಕೈಗೊಂಡಿರಲಿಲ್ಲ ಎಂಬ ಆರೋಪ ಕೇಳಿಬಂದಿದೆ.

ಉಲ್ಲಾಳು ವಾರ್ಡ್‌ನಲ್ಲಿ ಪ್ರಮುಖ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚುವಂತೆ ಬಿಬಿಎಂಪಿಯ ಕೆಂಗೇರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ಬಿಡಿಎ ಅಧಿಕಾರಿಗಳಿಗೆ ಆ.23ರಂದು ಬರೆದಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಲು ಬಿಡಿಎ ಅಧಿಕಾರಿಗಳು ಲಭ್ಯವಾಗಲಿಲ್ಲ.

ದೌರ್ಜನ್ಯ: ಬೆಂಗಳೂರಿನಿಂದಲೇ ಹೆಚ್ಚು ದೂರು

ಜುಲೈನಲ್ಲಿ ಗರಿಷ್ಠ ಸಂಖ್ಯೆಯ ದೂರು: ರಾಷ್ಟ್ರೀಯ ಮಹಿಳಾ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ ಕರ್ನಾಟಕದಿಂದ 350 ದೂರುಗಳು ಈ ವರ್ಷ ದಾಖಲಾಗಿವೆ. ಇವುಗಳ ಪೈಕಿ, ಬೆಂಗಳೂರು ಜಿಲ್ಲೆಯಿಂದ ದಾಖಲಾದ ದೂರುಗಳ ಸಂಖ್ಯೆಯೇ (ಶೇ 62.28) ಹೆಚ್ಚು.

ನಂತರದ ಸ್ಥಾನದಲ್ಲಿ, ಬೆಂಗಳೂರು ಗ್ರಾಮಾಂತರ (26), ಮೈಸೂರು (16) ಹಾಗೂ ದಕ್ಷಿಣ ಕನ್ನಡ (14) ಜಿಲ್ಲೆಗಳು ಇವೆ. ರಾಜ್ಯದಲ್ಲಿನ ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಸಂಬಂಧಿಸಿದ ದೂರುಗಳ ಸಂಖ್ಯೆ ಪ್ರತಿ ತಿಂಗಳೂ ಹೆಚ್ಚುತ್ತಲೇ ಹೋಗಿದೆ; ಮೇ ಮತ್ತು ಜೂನ್ ತಿಂಗಳಲ್ಲಿ ಮಾತ್ರ ಹೆಚ್ಚಳ ಆಗಿಲ್ಲ.

ಜನವರಿಯಲ್ಲಿ ನೀಡಲಾದ



ದೂರುಗಳ ಸಂಖ್ಯೆ 37 ಇದ್ದರೆ, ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ಆ ಸಂಖ್ಯೆ ತಲಾ 44 ಆಗಿತ್ತು. ಮೇ ಮತ್ತು ಜೂನ್‌ನಲ್ಲಿ ಮಾತ್ರ ಕ್ರಮವಾಗಿ 40 ಹಾಗೂ 35 ದೂರುಗಳು ದಾಖಲಾಗಿದ್ದವು.

ಜುಲೈನಲ್ಲಿ 49ಕ್ಕೆ ಏರಿತ್ತು. ಆಗಸ್ಟ್‌ನಲ್ಲಿ 50 ದೂರು ದಾಖಲಾಗಿವೆ. ಇದು ಈ ವರ್ಷ ಇದುವರೆಗೆ, ಮಹಿಳಾ ಆಯೋಗದಲ್ಲಿ ಕರ್ನಾಟಕದಿಂದ ದಾಖಲಾದ ದೂರುಗಳ ಪೈಕಿ ಅತಿ ಹೆಚ್ಚಿನ ಸಂಖ್ಯೆಯಾಗಿದೆ. ಈ ತಿಂಗಳ 6ನೇ ತಾರೀಖಿನವರೆಗೆ 12 ದೂರುಗಳು ರಾಷ್ಟ್ರೀಯ ಮಹಿಳಾ ಆಯೋಗವನ್ನು ತಲುಪಿವೆ.

2020ರಲ್ಲಿ, ಕರ್ನಾಟಕದಿಂದ 467 ದೂರುಗಳು ದಾಖಲಾಗಿದ್ದವು. ಈ ವರ್ಷದ ಮೊದಲ ಎಂಟು ತಿಂಗಳಲ್ಲೇ 338 ದೂರು ದಾಖಲಾಗಿವೆ. ಕಳೆದ ವರ್ಷ ಈ ಅವಧಿಯಲ್ಲಿ ಈ ಸಂಖ್ಯೆ 305 ಇತ್ತು.

ರಾಷ್ಟ್ರೀಯ ಮಹಿಳಾ ಆಯೋಗದ ಅಂಕಿ–ಅಂಶಗಳ ಪ್ರಕಾರ, ಈ ವರ್ಷದ ಆರಂಭದ ಎಂಟು ತಿಂಗಳಲ್ಲಿ ಮಹಿಳೆಯರ ವಿರುದ್ಧದ ಅಪರಾಧಕ್ಕೆ ಸಂಬಂಧಿಸಿ ದೇಶದ ವಿವಿಧ ಭಾಗಗಳಿಂದ ಬಂದಿರುವ ದೂರುಗಳಲ್ಲಿ ಶೇ 46ರಷ್ಟು ಹೆಚ್ಚಳವಾಗಿದೆ.

2020ರಲ್ಲಿಮೊದಲ ಎಂಟು ತಿಂಗಳವರೆಗೆ 13,618 ದೂರುಗಳು ಬಂದಿದ್ದವು. ಈ ವರ್ಷ ಇದೇ ಅವಧಿಯಲ್ಲಿ 19,953 ದೂರು ಸ್ವೀಕರಿಸಲಾಗಿದೆ. ಸೆ.6ರವರೆಗೆ 20,740 ದೂರುಗಳು ಬಂದಿವೆ. ಈ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಉತ್ತರಪ್ರದೇಶದವಾಗಿದ್ದು (10,484), ಮೊದಲ ಸ್ಥಾನದಲ್ಲಿದೆ. ನಂತರದಲ್ಲಿ ದೆಹಲಿ (2,240), ಮಹಾರಾಷ್ಟ್ರ (1,007) ರಾಜ್ಯಗಳಿವೆ.

ತಮಿಳುನಾಡು (375) ಏಳನೇ ಸ್ಥಾನದಲ್ಲಿದ್ದರೆ, ಕರ್ನಾಟಕವು ಎಂಟನೇ ಸ್ಥಾನದಲ್ಲಿದೆ. 2021ರ ಜುಲೈನಲ್ಲಿ 3,248 ದೂರುಗಳು ಬಂದಿವೆ. ಇವು, 2015ರಿಂದ ತಿಂಗಳೊಂದರಲ್ಲೇ ಸ್ವೀಕರಿಸಿದ ಅತಿ ಹೆಚ್ಚು ದೂರುಗಳು ಎಂದು ಆಯೋಗ ಹೇಳಿದೆ.

‘ಎಕ್ಸಾಂ ಮಾಸ್ಟರ್ ಮೈಂಡ್’ ಭಿತ್ತಿ ಪತ್ರ ಬಿಡುಗಡೆ

ಸ್ಪರ್ಧಾತ್ಮಕ ಪರೀಕ್ಷೆಗೆ ‘ಮಾಸ್ಟರ್ ಮೈಂಡ್’ ಕೈಪಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಹೊರ ತರುತ್ತಿರುವ ಇ-ಪೇಪರ್ ‘ಎಕ್ಸಾಂ ಮಾಸ್ಟರ್ ಮೈಂಡ್’ ಸಹಕಾರಿಯಾಗಲಿದೆ’ ಎಂದು ಜಯಕಿರಣ ಫೌಂಡೇಶನ್‌ನ ಸಂಸ್ಥಾಪಕ ಡಾ.ಕೆ. ಕಿರಣ್‌ಕುಮಾರ್ ತಿಳಿಸಿದರು.

ಜಯಕಿರಣ ಫೌಂಡೇಶನ್ ಮಹಿಳಾ ಸ್ವಸಹಾಯ ಸಂಘಗಳ ಸಹಕಾರದಲ್ಲಿ ರಾಜರಾಜೇಶ್ವರಿ ನಗರದ ಎಲ್‌ಐಸಿ ಬಡಾವಣೆಯ ಸಂಘದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಎಕ್ಸಾಂ ಮಾಸ್ಟರ್ ಮೈಂಡ್’ ಭಿತ್ತಿಪತ್ರವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಸ್ಪರ್ಧಾತ್ಮಕ ಯುಗದಲ್ಲಿ ಪರೀಕ್ಷೆಗಳನ್ನು ಎದುರಿಸಲು ಸೂಕ್ತ ಮಾರ್ಗದರ್ಶನ ಅತ್ಯಗತ್ಯ. ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸುವ ಗುರಿಯನ್ನು ಹೊಂದಿರುವವರು ಪ್ರಚಲಿತ ವಿದ್ಯಮಾನ, ಕ್ರೀಡೆ, ಶಿಕ್ಷಣ ಸೇರಿದಂತೆ ಹಲವು ವಿಷಯಗಳ ಬಗ್ಗೆ ತಿಳಿದಿರಬೇಕಾಗುತ್ತದೆ. ಅಂತಹವರಿಗಾಗಿಯೇ ಹೊರತರುತ್ತಿರುವ ‘ಎಕ್ಸಾಂ ಮಾಸ್ಟರ್ ಮೈಂಡ್’ ಯಶಸ್ಸು ಸಾಧಿಸಲು ಸಹಕಾರಿಯಾಗುವ ವಿಶ್ವಾಸವಿದೆ. ಸಮಾಜದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಬೇಕು’ ಎಂದರು.



ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ‘ಎಕ್ಸಾಂ ಮಾಸ್ಟರ್ ಮೈಂಡ್’ ಭಿತ್ತಿಪತ್ರವನ್ನು ಬಿಡುಗಡೆ ಮಾಡಲಾಯಿತು. ವೀಣಾ ಪಿ., ಡಾ.ಕೆ. ಕಿರಣ್‌ಕುಮಾರ್, ಜಯಕಿರಣ ಫೌಂಡೇಶನ್‌ನ ಸದಸ್ಯರಾದ ಚೈತ್ರಾ, ಲಾವಣ್ಯ, ಓಂಕಾರ್ ಕೋ–ಆಪರೇಟಿವ್‌ನ ವ್ಯವಸ್ಥಾಪಕ ನಿರ್ದೇಶಕಿ ವನಿತಾ, ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ವೆಸ್ಲಿ ಹಾಗೂ ರಾಜೇಶ್ ಇದ್ದರು.

ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ವೀಣಾ ಪಿ., ‘ವಿವಾಹದ ಬಳಿಕವೂ ಅನೇಕ ಮಹಿಳೆಯರು ವ್ಯಾಸಂಗ ಮಾಡುತ್ತಿದ್ದಾರೆ. ‘ಎಕ್ಸಾಂ ಮಾಸ್ಟರ್ ಮೈಂಡ್’ ಮಕ್ಕಳ ಜೊತೆಗೆ ದೊಡ್ಡವರಿಗೂ ಜ್ಞಾನ ವೃದ್ಧಿಗೆ ಸಹಕಾರಿ’ ಎಂದರು.

ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಸಂಸ್ಥಾಪಕ ರಾಜೇಶ್, ‘ಸ್ಪರ್ಧಾತ್ಮಕ ಪರೀಕ್ಷೆಗೆ ‘ಎಕ್ಸಾಂ ಮಾಸ್ಟರ್ ಮೈಂಡ್’ ನೆರವಾಗಲಿದೆ. ಯಾವರೀತಿ ತಯಾರಿ ಮಾಡಿಕೊಳ್ಳಬಹುದು ಎಂಬ ಸ್ಪಷ್ಟತೆ ದೊರೆಯಲಿದೆ’ ಎಂದು ತಿಳಿಸಿದರು.

ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ವೆಸ್ಲಿ, ‘ಯುವ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ‘ಎಕ್ಸಾಂ ಮಾಸ್ಟರ್ ಮೈಂಡ್’ ಇ-ಪೇಪರ್ ಹೊರತರಲಾಗುತ್ತಿದೆ. ವಿದ್ಯಾರ್ಥಿಗಳ ಮುಂದಿನ ಭವಿಷ್ಯ, ಸ್ಪರ್ಧಾತ್ಮಕ ಜಗತ್ತಿಗೆ ಯುವ ಪೀಳಿಗೆಯನ್ನು ಸಜ್ಜುಗೊಳಿಸುವ ಉದ್ದೇಶದಿಂದ ರೂಪಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಇರಲಿದೆ’ ಎಂದರು.

ಪ್ರಸರಣ ವಿಭಾಗದ ಎಜಿಎಂ ಸರವಣನ್ ಕೆ., ವ್ಯವಸ್ಥಾಪಕ ರವಿ ಎಂ. ಹಾಗೂ ಎಕ್ಸಿಕ್ಯೂಟಿವ್ ಯಶವಂತ್ ಮತ್ತಿತರರು ಇದ್ದರು.

ದೇಗುಲದ ಆಸ್ತಿಗೆ ದೇವರೇ ಮಾಲೀಕ: ‘ಸುಪ್ರೀಂ’

ನವದೆಹಲಿ (ಪಿಟಿಐ): ದೇವಸ್ಥಾನದ ಆಸ್ತಿ ಮತ್ತು ಜಾಗವು ದೇವರಿಗೇ ಸೇರಿದ್ದರಿಂದ, ದೇವಾಲಯಕ್ಕೆ ಸಂಬಂಧಪಟ್ಟ ದಾಖಲೆಗಳು ದೇವರ ಹೆಸರಿನಲ್ಲಿ ಇರಬೇಕೇ ವಿನಾ ಪೂಜಾರಿಯ ಹೆಸರಿನಲ್ಲಿ ಅಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಹೇಮಂತ ಗುಪ್ತಾ ಹಾಗೂ ಎ.ಎಸ್.ಬೋಪಣ್ಣ ಅವರ ನ್ಯಾಯಪೀಠವು, ‘ದೇವಸ್ಥಾನದ ಆಸ್ತಿಗೆ ಸಂಬಂಧಪಟ್ಟಂತೆ ಪೂಜಾರಿ ಅಥವಾ ಅರ್ಚಕರ ಕೆಲಸವೇನಾದರೂ ಇದ್ದರೆ, ಅದು ಆ ಆಸ್ತಿಯ ನಿರ್ವಹಣೆ ಮಾತ್ರ’ ಎಂದು ಹೇಳಿದೆ.

‘ಭೂಮಾಲೀಕತ್ವದ ದಾಖಲೆಗಳಿಗೆ ಸಂಬಂಧಿಸಿದ ಕಾಲಂಗಳಲ್ಲಿ, ದೇವಸ್ಥಾನದ ದೇವರ ಹೆಸರನ್ನೇ ಬರೆಯಬೇಕು. ದೇವರೇ ಮಾಲೀಕನಾಗಿರುವುದರಿಂದ, ಸೇವಕರು ಅಥವಾ ವ್ಯವಸ್ಥಾಪಕರು ದೇವಸ್ಥಾನದಲ್ಲಿ ಕೆಲಸ ಮಾಡುವವರಷ್ಟೆ. ಅಲ್ಲಿ ನೆಲೆಸಿದ್ದಾರೆಂದ ಮಾತ್ರಕ್ಕೆ, ಅವರ ಹೆಸರನ್ನು ನಿವಾಸಿ/ಬಾಡಿಗೆದಾರರ ಕಾಲಂನಲ್ಲಿಯೂ ಸೇರಿಸಲಾಗದು’ ಎಂದೂ ಹೇಳಿದೆ.

‘ಪೂಜಾರಿಯು ಅಲ್ಲಿ ಬಾಡಿಗೆದಾರರೂ ಅಲ್ಲ: ಸರ್ಕಾರದಿಂದ ಜಾಗವನ್ನು ಗುತ್ತಿಗೆ/ಬಾಡಿಗೆ ಪಡೆದವರೂ ಅಲ್ಲ. ದೇವಸ್ಥಾನದ ಮಂಡಳಿ/ಟ್ರಸ್ಟ್ ಪರವಾಗಿ ಅಲ್ಲಿರುತ್ತಾರಷ್ಟೆ. ದೇವರ ಆಸ್ತಿ ನೋಡಿಕೊಳ್ಳಲು ಹಾಗೂ ಪೂಜಾ ವಿಧಿ-ವಿಧಾನ ನಿರ್ವಹಣೆಯ ಕೆಲಸಕ್ಕೆ ಅನುಮತಿ ನೀಡಿ, ನಿಯೋಜಿಸಲಾಗಿರುತ್ತದೆ. ಒಂದು ವೇಳೆ ಆ ಕೆಲಸ ನಿರ್ವಹಿಸುವಲ್ಲಿ ವಿಫಲರಾದರೆ, ಆಗ ಹೊಣೆಯನ್ನೂ ವಾಪಸ್ ಪಡೆಯಲಾಗುತ್ತದೆ’ ಎಂದು ಪೀಠ ಸ್ಪಷ್ಟಪಡಿಸಿದೆ.

‘ದೇವಾಲಯಗಳಿಗೆ ಸಂಬಂಧಿಸಿ, ಪೂಜಾರಿ ಅಥವಾ ವ್ಯವಸ್ಥಾಪಕನ ಹೆಸರನ್ನು ನಮೂದಿಸುವುದು ಕಡ್ಡಾಯ ಎಂದು ಹೇಳಿರುವ ಕಂದಾಯ ಇಲಾಖೆಯ ಯಾವ ದಾಖಲಾತಿಯನ್ನೂ ನಾವು ನೋಡಿಲ್ಲ. ರಾಜ್ಯದ ಅಧಿಕಾರ ವ್ಯಾಪ್ತಿಗೆ ಬರುವ ದೇವಸ್ಥಾನಗಳನ್ನು ಬಿಟ್ಟರೆ, ಜಿಲ್ಲಾಧಿಕಾರಿ ಕೂಡ ಎಲ್ಲ ದೇವಸ್ಥಾನಗಳ ವ್ಯವಸ್ಥಾಪಕ ಅಲ್ಲ’ ಎಂದು ಹೇಳಿದೆ.

ಮಧ್ಯಪ್ರದೇಶ ಕಂದಾಯ ಕಾನೂನು, 1959ರ ಅಡಿಯಲ್ಲಿ ಸರ್ಕಾರವು ಹೊರಡಿಸಿದ್ದ ಎರಡು ಸುತ್ತೋಲೆಗಳನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಈ ತೀರ್ಪು ಪ್ರಶ್ನಿಸಿ, ಮಧ್ಯಪ್ರದೇಶ ಸರ್ಕಾರ ಸಲ್ಲಿಸಿದ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ನಡೆಸಿತು.

ದೇವಸ್ಥಾನದ ಆಸ್ತಿಯು ಅಕ್ರಮವಾಗಿ ಮಾರಾಟವಾಗುವುದನ್ನು ತಡೆಯಲು, ಕಂದಾಯ ಇಲಾಖೆಯ ದಾಖಲಾತಿಗಳಲ್ಲಿನ ಪೂಜಾರಿಗಳ ಹೆಸರನ್ನು ತೆಗೆದುಹಾಕಬೇಕು ಎಂದು ಮಧ್ಯಪ್ರದೇಶ ಸರ್ಕಾರ ಸುತ್ತೋಲೆ ಹೊರಡಿಸಿತ್ತು.

ಕೃಷಿ ವಿ.ವಿ ಘಟಿಕೋತ್ಸವ 21ರಂದು

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವ ಇದೇ 21ರಂದು ನಡೆಯಲಿದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದು, ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಿದ್ದಾರೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಮಹಾ ನಿರ್ದೇಶಕರು ತ್ರಿಲೋಚನ್ ಮಹಾಪಾತ್ರ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕೃಷಿ ಸಚಿವ ಬಿ.ಸಿ. ಪಾಟೀಲ ಭಾಗವಹಿಸಲಿದ್ದಾರೆ.

ಸಂಜಯನಗರ ಪೊಲೀಸರಿಂದ ಬಂಧನ: ಚಿನ್ನಾಭರಣ ಜಪ್ತಿ

ಚಿನ್ನದ ಸರ ಕದಿಯಲು ತಂಡ ಕಟ್ಟಿದ್ದ ವ್ಯಾಪಾರಿ

ಬೆಂಗಳೂರು: ತನ್ನದೇ ತಂಡ ಕಟ್ಟಿಕೊಂಡು ಚಿನ್ನದ ಸರ ಕಳವು ಮಾಡುತ್ತಿದ್ದ ತರಕಾರಿ ವ್ಯಾಪಾರಿಯೂ ಸೇರಿ ಮೂವರನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ಮುಂಬೈನ ಮ್ಯಾಕ್ಸನ್ ಪಸನ್, ಜಮಾಲ್ ಹಾಗೂ ಉತ್ತರ ಪ್ರದೇಶದ ಮೊಹಮ್ಮದ್ ತಾರಿಕ್ ಬಂಧಿತರು. ಅವರಿಂದ ₹ 6.20 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳಾದ ಮ್ಯಾಕ್ಸನ್, ಜಮಾಲ್ ಅಪರಾಧ ನಂಟು ಉಳ್ಳವರು. ಮುಂಬೈನಲ್ಲಿ ಇವರ ವಿರುದ್ಧ 20ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು.’

‘ಪೊಲೀಸರಿಂದ ತಪ್ಪಿಸಿಕೊಳ್ಳಲು ಮುಂಬೈ ತೊರೆದಿದ್ದ ಮ್ಯಾಕ್ಸನ್, ಬೆಂಗಳೂರಿಗೆ ಬಂದು ಬಿಟಿಎಂ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ. ತಳ್ಳುಗಾಡಿಯಲ್ಲಿ ತರಕಾರಿ ಮಾರಾಟ ಮಾಡುತ್ತಿದ್ದರು.’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ. ‘ಸರ ಕಳವು ಮುಂದುವರಿಸಲು ತೀರ್ಮಾನಿಸಿದ್ದ ಆರೋಪಿ ಮ್ಯಾಕ್ಸನ್, ಸಹಚರರಾದ ಜಮಾಲ್ ಹಾಗೂ ತಾರಿಕ್‌ನನ್ನು ನಗರಕ್ಕೆ ಕರೆಸಿದ್ದ. ಸರದಿ ಪ್ರಕಾರವಾಗಿ ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದ.’

‘ಹಬ್ಬದಂದು ಕದಿಯಲು ಸಂಚು’

‘ಗಣೇಶ ಹಬ್ಬದ ಸಂದರ್ಭದಲ್ಲಿ ಮಹಿಳೆಯರ ಓಡಾಟ ಹೆಚ್ಚಿರುತ್ತದೆ. ಇಂಥ ಸಂದರ್ಭದಲ್ಲಿ ಚಿನ್ನದ ಸರ ಕಳವು ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು’ ಎಂದೂ ಪೊಲೀಸರು ತಿಳಿಸಿದರು.

ಕದ್ದ ಬೈಕ್‌ನಿಂದ ಸಿಕ್ಕಿಬಿದ್ದರು: ‘ಬಂಡೆ ಕಾಲೊನಿ ನಿವಾಸಿಯಾದ 43 ವರ್ಷದ ಮಹಿಳೆ, ಆಗಸ್ಟ್ 17ರಂದು ಕೆಲಸಕ್ಕೆಂದು ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಹೆಲ್ಮೆಟ್ ಧರಿಸಿಕೊಂಡು ಕೆಟಿಎಂ ಡ್ಯೂಕ್ ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಮಹಿಳೆಯ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳು, ಕದ್ದಿದ್ದ ಬೈಕ್‌ನ್ನೇ ಕೃತ್ಯಕ್ಕೆ ಬಳಸಿದ್ದರು. ಅದರಿಂದಲೇ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ಮೂಲಗಳು ತಿಳಿಸಿವೆ.

ಎಸಿಬಿ ದಾಳಿ: ₹ 1.54 ಲಕ್ಷ ನಗದು ವಶ

ಬೆಂಗಳೂರು: ಕಾರ್ಮಿಕರನ್ನು ಹೊಂದಿರುವ ಸಂಸ್ಥೆಗಳು, ಏಜೆನ್ಸಿಗಳಿಗೆ ನೋಟಿಸ್ ಜಾರಿಮಾಡಿ ಲಂಚ ಸಂಗ್ರಹಿಸುತ್ತಿದ್ದ ಮಾಹಿತಿ ಆಧರಿಸಿ ನಗರದ ಸಹಾಯಕ ಕಾರ್ಮಿಕ ಆಯುಕ್ತ ವೃತ್ತ-2 ಮತ್ತು ಅವರ ಅಧೀನ ಕಚೇರಿಗಳ ಮೇಲೆ ಮಂಗಳವಾರ ದಾಳಿಮಾಡಿ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ₹ 1.54 ಲಕ್ಷ ನಗದು ವಶಪಡಿಸಿಕೊಂಡಿದೆ.

ಕೈಗಾರಿಕೆಗಳು, ಕಾರ್ಖಾನೆಗಳು, ಬೃಹತ್ ಮಳಿಗೆಗಳು, ಮಾಲ್‌ಗಳು, ಖಾಸಗಿ ಕಚೇರಿಗಳು, ಹೋಟೆಲ್‌ಗಳು, ಒಳಾಂಗಣ ವಿನ್ಯಾಸಕರು ಮತ್ತು ಕಟ್ಟಡ ನಿರ್ಮಾಣ ಮಾಡುವವರಿಗೆ ಕಾರ್ಮಿಕ ಕಾಯ್ದೆ, ನಿಯಮಗಳ ಉಲ್ಲಂಘನೆ ಆರೋಪದಡಿ ನೋಟಿಸ್ ಜಾರಿ ಮಾಡಿರುವ ಕಾರ್ಮಿಕ ಇಲಾಖೆ ಅಧಿಕಾರಿಗಳು, ಭಾರಿ ಪ್ರಮಾಣದ ಲಂಚ ವಸೂಲಿ ಮಾಡುತ್ತಿದ್ದಾರೆ ಎಂಬ ಮಾಹಿತಿ ಎಸಿಬಿ ಬೆಂಗಳೂರು ನಗರ ಘಟಕದ ಅಧಿಕಾರಿಗಳಿಗೆ ಲಭಿಸಿತ್ತು. ಮಾಹಿತಿ ಆಧರಿಸಿ ಎಫ್‌ಐಆರ್ ದಾಖಲಿಸಿ, ಶೋಧ ನಡೆಸಲಾಗಿದೆ.


ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತ ಸಂತೋಷ್ ಹಿಪ್ಪರಗಿ ಮತ್ತು ಅವರ ಅಧೀನದ ಕೆಲವು ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಗಳಲ್ಲಿ ದಾಖಲೆ ಇಲ್ಲದ ನಗದು ಪತ್ತೆಯಾಗಿದೆ. ಕಾರ್ಮಿಕ ಕಾಯ್ದೆ, ನಿಯಮ ಉಲ್ಲಂಘನೆ ಆರೋಪದಡಿ ಕೆಲವು ಸಂಸ್ಥೆಗಳಿಗೆ ನೀಡಿದ್ದ ನೋಟಿಸ್‌ನ ಪ್ರತಿಗಳೂ ನಗದು ಜತೆ ಪತ್ತೆಯಾಗಿವೆ. ಎಸಿಬಿ ಬೆಂಗಳೂರು ನಗರ ಘಟಕದ ಎಸ್‌.ಪಿ. ಜಿ.ಎಚ್.ಯತೀಶ್‌ಚಂದ್ರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು.

ಸಂತೋಷ್ ಹಿಪ್ಪರಗಿ ಕೆಲವು ದಿನಗಳ ಹಿಂದೆ ಲಂಚ ಪ್ರಕರಣದಲ್ಲಿ ಎಸಿಬಿಯಿಂದ ಬಂಧಿತರಾಗಿದ್ದರು. ನ್ಯಾಯಾಲಯದಿಂದ ಜಾಮೀನು ಪಡೆದು ಕರ್ತವ್ಯಕ್ಕೆ ಮರಳಿದ್ದರು.

ನಗರದಲ್ಲಿ ಇಂದು

ರಾಷ್ಟ್ರೀಯ ಶಿಕ್ಷಣ ನೀತಿ–2020; ತಜ್ಞರ ವಿಚಾರಗೋಷ್ಠಿ: ಭಾಗವಹಿಸುವವರು– ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ– ಟಿ.ಜಾನ್ ತಾಂತ್ರಿಕ ಶಿಕ್ಷಣ ಸಂಸ್ಥೆ, ಸ್ಥಳ– ಟಿಜೆಐಟಿ ಆಡಿಟೋರಿಯಂ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ–ಬೆಳಿಗ್ಗೆ 10.30.

ಪೂರ್ಣಚಂದ್ರ ತೇಜಸ್ವಿ 83ನೇ ಜನ್ಮ ದಿನಾಚರಣೆ: ಉದ್ಘಾಟನೆ–ಕನ್ನಡ ವಿ.ವಿ. ನಿವೃತ್ತ ಪ್ರಾಧ್ಯಾಪಕ ಪ್ರೊ.ಕರಿಗೌಡ ಬೀಚನಹಳ್ಳಿ, ಮುಖ್ಯ ಅತಿಥಿ– ರಂಗಭೂಮಿ ಕಲಾವಿದ ಕೆ.ವಿ.ನಾಗರಾಜ ಮೂರ್ತಿ, ಅಧ್ಯಕ್ಷತೆ– ಎಲ್.ಭೈರಪ್ಪ, ಆಶಯ ನುಡಿ– ಎಸ್.ಆರ್.ಹೊನ್ನಲಿಂಗಯ್ಯ, ಆಯೋಜನೆ–ಪೂರ್ಣಚಂದ್ರ ಫೌಂಡೇಷನ್, ಸ್ಥಳ–ಪೂರ್ಣಚಂದ್ರ ರಂಗಮಂದಿರ, ಶ್ರೀಗಂಧದ ಕಾವಲ್–ಸಂಜೆ 5.



ಪೂರ್ಣಚಂದ್ರ ತೇಜಸ್ವಿ

‘ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಕನ್ನಡ’ ಕುರಿತು ವಿಚಾರ ಸಂಕಿರಣ: ಚಾಲನೆ–ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪ್ರಾಸ್ತಾವಿಕ ನುಡಿ–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಮಾತನಾಡುವವರು–ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಶಾಸಕರಾದ ತನ್ವೀರ್ ಸೇಠ್, ಎನ್.ಮಹೇಶ್, ಕಿಮ್ಮನೆ ರತ್ನಾಕರ, ಅಧ್ಯಕ್ಷತೆ–ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, ಆಯೋಜನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ–ಕೊಠಡಿ ಸಂಖ್ಯೆ 419, ವಿಕಾಸಸೌಧ–ಬೆಳಿಗ್ಗೆ 10.30.

ನಿಫಾ: ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರಕ್ಕೆ ಸೂಚನೆ


ಪ್ರಜಾವಾಣಿ ವಾರ್ತೆ


ಬೆಂಗಳೂರು: ನೆರೆಯ ರಾಜ್ಯ ಕೇರಳದಲ್ಲಿ ನಿಫಾ ವೈರಾಣು ಕಾಣಿಸಿಕೊಂಡಿರುವುದರಿಂದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಕೊಡಗು ಹಾಗೂ ಚಾಮರಾಜನಗರದಲ್ಲಿ ಕಟ್ಟೆಚ್ಚರ ವಹಿಸಿ, ಅಲ್ಲಿಂದ ಬರುವವರಿಗೆ ತಪಾಸಣೆ ನಡೆಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸುತ್ತೋಲೆ ಹೊರಡಿಸಿದ್ದಾರೆ. ‘ಈ ವೈರಾಣು 2018ರಲ್ಲಿ ಕೇರಳದಲ್ಲಿ ಕಾಣಿಸಿಕೊಂಡಿತ್ತು. ದೃಢ ಪ್ರಕರಣ ಹಾಗೂ ಮರಣ ಪ್ರಕರಣವೂ ವರದಿಯಾಗಿದ್ದವು. ಈ ರೋಗವು ಶೇ 40ರಿಂದ ಶೇ 75 ರವರೆಗೆ ಮರಣ ಪ್ರಮಾಣವನ್ನು ಹೊಂದಿದೆ. ಹಾಗಾಗಿ, ಈ ಪ್ರಕರಣ ಕೇರಳದಲ್ಲಿ ವರದಿಯಾಗಿರುವುದರಿಂದ ರಾಜ್ಯದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ಅದರಲ್ಲೂ ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ವಿಶೇಷ ನಿಗಾ ಇಡಬೇಕು’ ಎಂದು ತಿಳಿಸಿದ್ದಾರೆ.

‘ಕೇರಳದಿಂದ ಇಲ್ಲಿಗೆ ಬರುವವರು ಜ್ವರ, ಅಸ್ವಸ್ಥತೆ, ತಲೆನೋವು, ಉಸಿರಾಟದ ಸಮಸ್ಯೆ, ಕೆಮ್ಮು ಸೇರಿದಂತೆ ವಿವಿಧ ಲಕ್ಷಣಗಳನ್ನು ಹೊಂದಿದ್ದಾರೆಯೇ ಎನ್ನುವುದನ್ನು ಪರಿಶೀಲಿಸಿ, ಶಂಕಿತರನ್ನು ಗುರುತಿಸಬೇಕು. ಅಂಥವರ ಮಾದರಿಗಳನ್ನು ಸಂಗ್ರಹಿಸಿ, ಪುಣೆಯ ವೈರಾಣು ವಿಜ್ಞಾನ ಸಂಸ್ಥೆಗೆ (ಎನ್‌ಐವಿ) ಕಳುಹಿಸಬೇಕು. ಸದ್ಯ ಈ ಸೋಂಕಿಗೆ ಚಿಕಿತ್ಸೆಯಿಲ್ಲ. ಆದರೆ, ಪೂರಕ ಚಿಕಿತ್ಸೆ ನೀಡುವ ಮೂಲಕ ಮರಣ ಪ್ರಮಾಣವನ್ನು ತಗ್ಗಿಸಲು ಸಾಧ್ಯ’ ಎಂದು ಹೇಳಿದ್ದಾರೆ.

ನಿಫಾ ಲಕ್ಷಣಗಳಿದ್ದರೆ 104ಕ್ಕೆ ಕರೆ ಮಾಡಿ: ‘ಜ್ವರ, ಮೈಕೈ ನೋವು, ತಲೆನೋವು, ನಡುಕ, ವಾಂತಿ, ನಿದ್ರಾಲಸ್ಯ, ತೊದಲುವಿಕೆ ಹಾಗೂ ಪ್ರಜ್ಞಾಹೀನತೆ ನಿಫಾ ಜ್ವರದ ಪ್ರಮುಖ ಲಕ್ಷಣಗಳಾಗಿವೆ. ಜ್ವರದ ಲಕ್ಷಣಗಳು ಕಂಡುಬಂದಲ್ಲಿ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು. ನೆರವಿಗೆ ಉಚಿತ ಸಹಾಯವಾಣಿ 104ಕ್ಕೆ ಕರೆ ಮಾಡಿ’ ಎಂದು ಆರೋಗ್ಯ ಇಲಾಖೆ ತಿಳಿಸಿದೆ.





ಕೊಲೆಗೆ ಸಂಚು; ಬಂಧನ

ಬೆಂಗಳೂರು: ಎದುರಾಳಿ ತಂಡದವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ಇಬ್ಬರು ರೌಡಿಗಳು ಹಾಗೂ ಅವರ ಐವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ‘ಬನ್ನೇರುಘಟ್ಟ ರಸ್ತೆಯ ಲಕ್ಷ್ಮಿನಾರಾಯಣ್ ಅಲಿಯಾಸ್ ಲಕ್ಷ್ಮಿ, ರಾಕೇಶ್ ಅಲಿಯಾಸ್ ರಾಖಿ, ಹರೀಶ್, ಬಿಳೇಕಹಳ್ಳಿಯ ನವೀನ್, ಕಿಶೋರ್, ದೇವರ ಚಿಕ್ಕನಹಳ್ಳಿಯ ವಿನೋದ್ ಹಾಗೂ ನಾಗರಾಜ್ ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಯುವಕ ಆತ್ಮಹತ್ಯೆ

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಸಿದ್ದರಾಮ (33) ಎಂಬುವರು ನೇಣು ಹಾಕಿಕೊಂಡು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ‘ಮಂಡ್ಯ ಜಿಲ್ಲೆಯ ಮದ್ದೂರಿನ ಸಿದ್ದರಾಮ, ನಗರದಲ್ಲಿ ಬಡಗಿ ಕೆಲಸ ಮಾಡುತ್ತಿದ್ದರು. ರಾಜರಾಜೇಶ್ವರಿನಗರದಲ್ಲಿರುವ ಅಕ್ಕನ ಮನೆಯಲ್ಲಿ ವಾಸವಿದ್ದರು. ಅದೇ ಮನೆಯ ಕೊಠಡಿಯಲ್ಲಿ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಜ್ಜ- ಅಜ್ಜಿ ನೋಡಲು ನಗರದಿಂದ ಕೊಡಗಿನತ್ತ ಪಯಣ

30 ಕಿ.ಮೀ. ನಡೆದ 15 ವರ್ಷದ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿದ್ದ 15 ವರ್ಷದ ಬಾಲಕಿಯನ್ನು ತಾವರೆಕೆರೆ ಸಮೀಪದ ಮನೆಯೊಂದರಲ್ಲಿ ಪತ್ತೆ ಮಾಡಿರುವ ಪೊಲೀಸರು, ಆಕೆಯನ್ನು ಸುರಕ್ಷಿತವಾಗಿ ಸಂಬಂಧಿಕರ ಸುಪರ್ದಿಗೆ ಒಪ್ಪಿಸಿದ್ದಾರೆ.

'ಸಂಬಂಧಿಕರ ಮನೆಯಲ್ಲಿ ವಾಸವಿದ್ದ ಬಾಲಕಿ, ಕೊಡಗಿನಲ್ಲಿರುವ ಅಜ್ಜ–ಅಜ್ಜಿ ನೋಡಲೆಂದು ಬೆಂಗಳೂರಿನಿಂದ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದಳು. ನಡಿಗೆ ಮೂಲಕ 30 ಕಿ.ಮೀ ಕ್ರಮಿಸಿ ತಾವರೆಕೆರೆ ಬಳಿ ಮಹಿಳೆಯೊಬ್ಬರ ಮನೆಯಲ್ಲಿ ಆಶ್ರಯ ಪಡೆದಿದ್ದಳು. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಮನೆಗೆ ಹೋಗಿ ಬಾಲಕಿಯನ್ನು ಕರೆತರಲಾಗಿದೆ’ ಎಂದು ಬನಶಂಕರಿ ಪೊಲೀಸರು ಹೇಳಿದರು.

‘ಒಂದೂವರೆ ವರ್ಷದ ಹಿಂದೆಯೇ ಬಾಲಕಿಯ ತಂದೆ–ತಾಯಿ ತೀರಿಕೊಂಡಿದ್ದಾರೆ. ಅನಾಥೆ ಆಗಿದ್ದ ಬಾಲಕಿಯನ್ನು ಸಂಬಂಧಿಯಾದ ಅಯ್ಯಪ್ಪ ಎಂಬುವರು ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದರು. ಶಾಲೆಗೂ ಸೇರಿಸಿದ್ದರು. ಆಗಸ್ಟ್ 21ರಂದು ಬಾಲಕಿ ನಾಪತ್ತೆಯಾಗಿದ್ದರು. ಗಾಬರಿಗೊಂಡಿದ್ದ ಅಯ್ಯಪ್ಪ, ಠಾಣೆಗೆ ದೂರು ನೀಡಿದ್ದರು.’


‘ಮನೆ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿತ್ತು. ಬಾಲಕಿ ನಡಿಗೆ ಮೂಲಕವೇ ಮೈಸೂರು ರಸ್ತೆಯತ್ತ ಹೊರಟಿದ್ದು ಗೊತ್ತಾಗಿತ್ತು. ಬಳಿಕ ಎಲ್ಲ ಠಾಣೆ ವ್ಯಾಪ್ತಿಯ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಮಾಹಿತಿ ಕಲೆಹಾಕಲಾಯಿತು. ಬಾಲಕಿಯ ಫೋಟೊ ಸಮೇತ ಭಿತ್ತಿಪತ್ರಗಳನ್ನು ಮುದ್ರಿಸಿ, ಮಾರ್ಗದುದ್ದಕ್ಕೂ ಹಂಚಿಕೆ ಮಾಡಲಾಗಿತ್ತು’ ಎಂದೂ ಪೊಲೀಸರು ತಿಳಿಸಿದರು.


‘ರಸ್ತೆಯಲ್ಲಿ ನಡೆದು ಸುಸ್ತಾಗಿದ್ದ ಬಾಲಕಿಯನ್ನು ಮಹಿಳೆಯೊಬ್ಬರು ಮಾತನಾಡಿಸಿದ್ದರು. ‘ನನಗೆ ತಂದೆ–ತಾಯಿ ಇಲ್ಲ. ಕೊಡಗಿನಲ್ಲಿರುವ ಅಜ್ಜ–ಅಜ್ಜಿ ಮನೆಗೆ ಹೊರಟಿದ್ದೇನೆ’ ಎಂದಿದ್ದ ಬಾಲಕಿ, ಕೆಲದಿನ ಆಶ್ರಯ ನೀಡುವಂತೆ ಕೋರಿದ್ದಳು. ಅದಕ್ಕೆ ಒಪ್ಪಿದ್ದ ಮಹಿಳೆ, ಬಾಲಕಿಯನ್ನು ಕರೆದೊಯ್ದು ಮನೆಯಲ್ಲಿ ಇರಿಸಿಕೊಂಡಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಮನೆಗೆ ಹೋಗಿ ಬಾಲಕಿಯನ್ನು ಕರೆತರಲಾಗಿದೆ. ಮಹಿಳೆ ಹೇಳಿಕೆಯನ್ನೂ ಪಡೆಯಲಾಗಿದೆ’ ಎಂದೂ ಹೇಳಿದರು.

ಸಂಬಂಧಿಕರ ವಿಚಾರಣೆ: ‘ಸಂಬಂಧಿಕರು ಬಾಲಕಿಗೆ ತೊಂದರೆ ನೀಡಿರುವ ಅನುಮಾನವಿತ್ತು. ಹೀಗಾಗಿ, ಸಂಬಂಧಿಕರನ್ನು ವಿಚಾರಣೆ ನಡೆಸಲಾಯಿತು. ಯಾವುದೇ ತೊಂದರೆ ನೀಡಿರಲಿಲ್ಲವೆಂಬುದು ಬಾಲಕಿ ಹೇಳಿಕೆಯಿಂದ ಖಾತ್ರಿ ಆಯಿತು. ಹೀಗಾಗಿ, ಬಾಲಕಿಯನ್ನು ಸಂಬಂಧಿಕರ ಜೊತೆ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಕಾಂತಾವರ ಕನ್ನಡ ಸಂಘದ ದತ್ತಿನಿಧಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ


ಹೆರಂಜೆ ಕೃಷ್ಣ ಭಟ್


ಶಿವಾನಂದ ಕಾರಂತ


ಉದಯ ಕುಮಾರ್ ಹಬ್ಬು

ಮೂಡುಬಿದಿರೆ: ಉಡುಪಿಯ 'ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ'ದ ಮಾಜಿ ನಿರ್ದೇಶಕ ಪ್ರೊ. ಹೆರಂಜೆ ಕೃಷ್ಣ ಭಟ್ ಸೇರಿದಂತೆ ಮೂವರಿಗೆ ಕಾಂತಾವರ ಕನ್ನಡ ಸಂಘದ 2021ನೇ ಸಾಲಿನ ದತ್ತಿನಿಧಿ ಪ್ರಶಸ್ತಿ ಘೋಷಿಸಲಾಗಿದೆ.

ಸರಸ್ವತಿ ಬಲ್ಲಾಳ್ ಮತ್ತು ಡಾ.ಸಿ.ಕೆ. ಬಲ್ಲಾಳ್ ದಂಪತಿ ಪ್ರತಿಷ್ಠಾನದಿಂದ ನೀಡುವ ಕರ್ನಾಟಕ ಏಕೀಕರಣದ ನೇತಾರ ಕೆ.ಬಿ. ಜಿನರಾಜ ಹೆಗ್ಡೆ ಸ್ಮಾರಕ ಸಾಂಸ್ಕೃತಿಕ ಪ್ರಶಸ್ತಿಗೆ ಪ್ರೊ. ಹೆರಂಜೆ ಕೃಷ್ಣ ಭಟ್ ಅವರನ್ನು ಆಯ್ಕೆ ಮಾಡಲಾಗಿದೆ.

ಮೊಗಸಾಲೆ ಪ್ರತಿಷ್ಠಾನವು ನೀಡುವ 'ಕಾಂತಾವರ ಸಾಹಿತ್ಯ ಪುರಸ್ಕಾರ'ವನ್ನು ನಿವೃತ್ತ ಪ್ರಾಧ್ಯಾಪಕ ಮತ್ತು ಸಾಹಿತಿ ಉದಯ ಕುಮಾರ್ ಹಬ್ಬು ಅವರಿಗೆ ಮತ್ತು ಕಾಂತಾವರ ಸರೋಜಿನಿ ನಾಗಪ್ಪಯ್ಯ ಈಶ್ವರಮಂಗಲ ದಂಪತಿ ಪ್ರತಿಷ್ಠಾನದಿಂದ ನೀಡುವ 'ಮಾಧ್ಯಮ ಸಾಹಿತ್ಯ ಪ್ರಶಸ್ತಿ'ಯನ್ನು ಲೇಖಕ ಕೋಟ ಶಿವಾನಂದ ಕಾರಂತ ಅವರಿಗೆ ನೀಡಲು ನಿರ್ಧರಿಸಲಾಗಿದೆ.

ಕನ್ನಡ ಸಂಘದ ಸ್ಥಾಪಕ ಅಧ್ಯಕ್ಷ ಡಾ.ನಾ. ಮೊಗಸಾಲೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಪ್ರಶಸ್ತಿಯು ತಲಾ ₹10 ಸಾವಿರ ಗೌರವಧನ, ತಾಮ್ರ ಪತ್ರ ಮತ್ತು ಸನ್ಮಾನ ಪತ್ರ ಒಳಗೊಂಡಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಕ್ಕೆ: ತೀರ್ಥಪ್ರಸಾದ, ಅನ್ನಸಂತರ್ಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತೀರ್ಥಪ್ರಸಾದ, ಅನ್ನಸಂತರ್ಪಣೆಗೆ ಅವಕಾಶ ನೀಡಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಮಂಗಳವಾರ ಆದೇಶ ನೀಡಿದ್ದಾರೆ.

'ದೇವಸ್ಥಾನವು ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ತೆರೆದಿರಲಿದೆ. ಈ ಸಮಯದಲ್ಲಿ ಕಡ್ಡಾಯವಾಗಿ ಅಂತರ ಕಾಪಾಡಿಕೊಂಡು ಭಕ್ತರಿಗೆ ದೇವರ ದರ್ಶನ, ತೀರ್ಥಪ್ರಸಾದ, ಅನ್ನಸಂತರ್ಪಣೆಗೆ ಅವಕಾಶ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ತೋಟಗಾರಿಕೆ ಇಲಾಖೆ ನಿರ್ಲಕ್ಷ್ಯ: ಬೆಳೆಗಾರರ ದೂರು

ತೆಂಗಿಗೆ ರಸಹೀರುವ ಕೀಟಬಾಧೆ

ಪ್ರಜಾವಾಣಿ ವಾರ್ತೆ

ಹೊಸದುರ್ಗ: ತಾಲ್ಲೂಕಿನ ಹಲವೆಡೆ ತೆಂಗಿನ ತೋಟಗಳಲ್ಲಿ ರಸಹೀರುವ ಕೀಟಬಾಧೆ ಹೆಚ್ಚಾಗಿರುವುದರಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಯಲ್ಲಿಯೇ ತೆಂಗು ಬೆಳೆಗೆ ಈ ತಾಲ್ಲೂಕು ಅಗ್ರಸ್ಥಾನ ಪಡೆದಿದೆ. ತಾಲ್ಲೂಕಿನಲ್ಲಿ ಸುಮಾರು 27 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ.

ಇಲ್ಲಿನ ಬಹುತೇಕ ರೈತರ ವಾಣಿಜ್ಯ ಬೆಳೆಯಾಗಿದ್ದು, ಜೀವನ ನಿರ್ವಹಣೆಗೆ ಬೇಕಾದ ಆದಾಯ ಕೊಡುವ ಬೆಳೆ ಇದಾಗಿದೆ. ಕೊರೊನಾ ಸಂಕಷ್ಟಕ್ಕೆ ಸಿಲುಕಿರುವ ರೈತರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಲಾಭ ಗಳಿಸುವ ಉದ್ದೇಶದಿಂದ ತೆಂಗಿನ ಮರಗಳಿಗೆ ಹೊಸಮಣ್ಣು, ಗೊಬ್ಬರ ಹಾಕಿ ಉಪಚರಿಸುತ್ತಿದ್ದಾರೆ.

'ಬೆಲಗೂರು, ಕಬ್ಬಳ, ಅಗಿಲವ, ನೀರಗುಂದ ಸೇರಿ ತಾಲ್ಲೂಕಿನ ಇನ್ನಿತರ ಕಡೆ ತೆಂಗಿನ ಮರಕ್ಕೆ ಕಪ್ಪುತಲೆ ಹುಳು (ರಸಹೀರುವ ಕೀಟ) ಕಾಟ ಹೆಚ್ಚಾಗಿದೆ. ಈ ಹುಳು ಹಸಿರು ರಸವನ್ನು ಹೀರುತ್ತಿರುವುದರಿಂದ ತೆಂಗಿನ ಮರದಲ್ಲಿ ಹಸಿ ಗರಿಗಳು ಒಣಗಿ ಉದುರುತ್ತಿವೆ. ಇದರಿಂದ ಮರಕ್ಕೆ ಆಹಾರ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಇದರಿಂದ ಗುಳುಬು ಹಾಗೂ ಎಳನೀರು ನಿಲ್ಲುತ್ತಿಲ್ಲ. ಇದರಿಂದಾಗಿ ಸಾಕಷ್ಟು ಇಳುವರಿ ಕುಸಿತವಾಗುತ್ತಿರುವುದರಿಂದ ಬೆಳೆಗಾರರಿಗೆ ಸಾಕಷ್ಟು ನಷ್ಟವಾಗುತ್ತಿದೆ' ಎನ್ನುತ್ತಾರೆ ರೈತರೂ ಆಗಿರುವ ಮಾಜಿ ಶಾಸಕ ಬಿ.ಜಿ. ಗೋವಿಂದಪ್ಪ.

'ಈ ಹಿಂದೆ 150 ತೆಂಗಿನ ಮರಕ್ಕೆ ವಾರ್ಷಿಕ 25 ಸಾವಿರಕ್ಕೂ ಅಧಿಕ ತೆಂಗಿನಕಾಯಿ ಕೆಡವುತ್ತಿದ್ದೆ. ಆದರೆ ಕಳೆದ 2 ವರ್ಷಗಳಿಂದ ರಸಹೀರುವ ಕೀಟಬಾಧೆ ಕಾಣಿಸಿದಾಗಿನಿಂದ 5 ಸಾವಿರಕ್ಕೂ ಹೆಚ್ಚು ಇಳುವರಿ ಕುಸಿತವಾಗಿದೆ. ಇದರಿಂದಾಗಿ ವಾರ್ಷಿಕ ₹ 70 ಸಾವಿರಕ್ಕೂ ಅಧಿಕ ನಷ್ಟವಾಗುತ್ತಿದೆ. ಕಷ್ಟಪಟ್ಟು ಬೆಳೆಸಿರುವ ತೆಂಗಿನ ಸಸಿಗಳು ಫಸಲಿಗೆ ಬಂದಿರುವಾಗ ರೋಗಬಾಧೆ ಹೆಚ್ಚಾಗುತ್ತಿದೆ. ಕೀಟಬಾಧೆ ಕಾಣಿಸಿ 2 ವರ್ಷವಾದರೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಸುಳಿ ಹಾಗೂ ರಸ ಸೋರುವ ರೋಗಬಾಧೆಯಿಂದ ತೆಂಗಿನಕಾಯಿ ಗಾತ್ರವೂ ದಪ್ಪವಾಗುತ್ತಿಲ್ಲ' ಎಂದು ಬೆಳೆಗಾರ ರಾಜಣ್ಣ ಅಳಲು ತೋಡಿಕೊಂಡರು.

'ನಮ್ಮ ತೆಂಗಿನ ತೋಟದ ಸ್ಥಿತಿ ಈ ರೀತಿ ಇದ್ದರೂ ನಮಗೆ ಸಲಹೆ, ಮಾರ್ಗದರ್ಶನ ನೀಡಲು ಒಮ್ಮೆಯೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ತೋಟಗಳತ್ತ ಸುಳಿದಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ನಷ್ಟ ಅನುಭವಿಸುವಂತಾಗಿದೆ' ಎಂದು ಬೆಳೆಗಾರರು ದೂರಿದರು.


ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದ ತೆಂಗಿನ ತೋಟವೊಂದರಲ್ಲಿನ ತೆಂಗಿನ ಮರಗಳಿಗೆ ರಸಹೀರುವ ಕೀಟಬಾಧೆ ಕಾಣಿಸಿರುವುದು.

ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆಸಿರುವ ತಾಲ್ಲೂಕಿನ ರೈತರ ತೆಂಗಿನತೋಟ ಉಳಿಸಲು ಸರ್ಕಾರ ನೆರವಿಗೆ ಬರಬೇಕು.
ಬಿ.ಜಿ.ಗೋವಿಂದಪ್ಪ, ಮಾಜಿ ಶಾಸಕ

ಉತ್ಕೃಷ್ಟವಾಗಿದ್ದ ತೆಂಗಿನ ಮರದ ಹಸಿ ಗರಿಗಳಿಗೆ ಕೀಟ ಬಾಧೆಯಿಂದ ಕಪ್ಪಾಗುತ್ತಿವೆ. ದೊಡ್ಡ ಮರಗಳಿಗೆ ಔಷಧ ಹೇಗೆ ಸಿಂಪಡಿಸುವುದು ಎಂಬ ಚಿಂತೆ ಕಾಡುತ್ತಿದೆ.
ಜಿ.ಎಸ್.ಉಮಾಕಾಂತ್, ತೆಂಗು ಬೆಳೆಗಾರ

ಹೆಕ್ಸಾಕೊನೊಜೋಲ್ ಸಿಂಪಡಿಸಿ

'ರಸಹೀರುವ ಹುಳುಬಾಧೆ ಕಾಣಿಸಿಕೊಂಡರೆ ಗರಿ ಹಳದಿ ಬಣ್ಣಕ್ಕೆ ತಿರುಗಿ ಒಣಗುತ್ತದೆ. ಈ ಕೀಟ ನಿಯಂತ್ರಣಕ್ಕೆ ಪ್ರತಿ ಲೀಟರ್ ನೀರಿಗೆ ಹೆಕ್ಸಾಕೊನೊಜೋಲ್ 1 ಮಿ.ಲೀ. ಅಥವಾ ಮಾನೋಕ್ರೊಟೋಫಸ್ 5 ಮಿ.ಲೀ. ಬೆರಸಿ 15 ದಿನಕ್ಕೊಮ್ಮೆ ಸಿಂಪಡಿಸಿದಲ್ಲಿ ಹುಳು ನಿಯಂತ್ರಣಕ್ಕೆ ಬರುತ್ತದೆ' ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ತೆಂಗಿನ ಗರಿ ಎಲೆ ಕಪ್ಪಾಗುತ್ತಿದ್ದರೆ ಪ್ರತಿ ಲೀಟರ್ ನೀರಿಗೆ 5 ಮಿ.ಲೀ. ಬೇವಿನ ಎಣ್ಣೆ ಮಿಶ್ರಣ ಮಾಡಿ ಸಿಂಪಡಿಸಿದಲ್ಲಿ ರೋಗ ನಿವಾರಣೆ ಆಗುತ್ತದೆ. ಇಲಾಖೆಯ ಸಿಬ್ಬಂದಿ ಬೆಳೆ ವಿಮೆ ಪಾವತಿ ಪರಿಶೀಲನೆ ಹಾಗೂ ಬೆಳೆ ಸಮೀಕ್ಷೆ ಕಾರ್ಯದಲ್ಲಿ ತೊಡಗಿದ್ದರಿಂದ ತೋಟಗಳಿಗೆ ಭೇಟಿ ನೀಡಲು ಸಾಧ್ಯವಾಗಿರಲಿಲ್ಲ. ಈಗ ಭೇಟಿ ಕೊಟ್ಟು ಬೆಳೆಗಾರರಿಗೆ ಸಲಹೆ ನೀಡಲಾಗುವುದು' ಎಂದು ಅವರು ಹೇಳಿದರು.

ಶಾಸಕ ಶ್ರೀನಿವಾಸ ಗೌಡ ವಿರುದ್ಧ ಕ್ರಮಕ್ಕೆ ಸೂಚನೆ

ಶಾಸಕ ಜಿ.ಟಿ.ದೇವೇಗೌಡ ವಿರುದ್ಧ ಸದ್ಯಕ್ಕೆ ಕ್ರಮವಿಲ್ಲ: ಎಚ್‌.ಡಿ.ದೇವೇಗೌಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಾಂಗ್ರೆಸ್ ಮುಖಂಡರ ಜತೆ ಸೇರಿಕೊಂಡು ಜೆಡಿಎಸ್ ಪಕ್ಷಕ್ಕೆ ಹಾನಿಯಾಗುವಂತೆ ವರ್ತಿಸುತ್ತಿರುವ ಕೋಲಾರ ಶಾಸಕ ಕೆ.ಶ್ರೀನಿವಾಸ ಗೌಡ ವಿರುದ್ಧ ಕ್ರಮ ಜರುಗಿಸುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಸೂಚನೆ ನೀಡಲಾಗಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಕೋಲಾರ ಶಾಸಕರ ವಿಚಾರದಲ್ಲಿ ಇನ್ನು ಸಹಿಸಲು ಆಗುವುದಿಲ್ಲ. ನೇರವಾಗಿ ಪಕ್ಷಕ್ಕೆ ಹಾನಿಯಾಗುವ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಸೂಕ್ತ ಕ್ರಮ ಜರುಗಿಸುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಸೂಚಿಸಿದ್ದೇನೆ' ಎಂದರು.

ಶಾಸಕ ಜಿ.ಟಿ. ದೇವೇಗೌಡ ಅವರು ಕೂಡ ಕಾಂಗ್ರೆಸ್ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ. ತಮಗೆ ಹಾಗೂ ಮಗನಿಗೆ ಟಿಕೆಟ್ ನೀಡುವಂತೆ ಸಿದ್ದರಾಮಯ್ಯ ಬಳಿ ಕೇಳಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ, ಅವರು ಪಕ್ಷಕ್ಕೆ ಹಾನಿಯಾಗುವ ರೀತಿಯಲ್ಲಿ ಎಲ್ಲಿಯೂ ಮಾತನಾಡಿಲ್ಲ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳುವ ಪ್ರಸ್ತಾವ ಸದ್ಯಕ್ಕೆ ಇಲ್ಲ ಎಂದು ಹೇಳಿದರು.


ಸಹಕಾರ ಕೋರಿದ ಖರ್ಗೆ: 'ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಜೆಡಿಎಸ್ ನಾಲ್ಕು ಸ್ಥಾನ ಗಳಿಸಿದೆ. ಕಾಂಗ್ರೆಸ್ ಪಕ್ಷಕ್ಕೆ ಸಹಕಾರ ನೀಡುವಂತೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕೇಳಿದ್ದಾರೆ. ನನ್ನ ಮತ್ತು ಎಚ್.ಡಿ. ಕುಮಾರಸ್ವಾಮಿ ಜತೆ ಅವರು ಮಾತನಾಡಿದ್ದಾರೆ' ಎಂದು ದೇವೇಗೌಡ ತಿಳಿಸಿದರು.

ಬಿಜೆಪಿಗೆ ಸಹಕಾರ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕುಮಾರಸ್ವಾಮಿ ಜತೆ ಮಾತನಾಡಿರುವ ಸಾಧ್ಯತೆ ಇದೆ. ಸ್ಥಳೀಯ ಮುಖಂಡರ ಅಭಿಪ್ರಾಯ ಕೇಳಿದ ನಿರ್ಧಾರ ಕೈಗೊಳ್ಳುವಂತೆ ಕುಮಾರಸ್ವಾಮಿ ಅವರಿಗೆ ಸೂಚನೆ ನೀಡಲಾಗಿದೆ ಎಂದರು.

'ಬೆಳಗಾವಿಯಲ್ಲೂ ಅವರ ಪಕ್ಷದವರು ಸಂಪರ್ಕಿಸಿ ಮಾತನಾಡಿದ್ದಾರೆ ಎನ್ನಿಸುತ್ತದೆ. ಖರ್ಗೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಕುರಿತು ಮಾತನಾಡದೆ ಆಮೇಲೆ ನೋಡೋಣ' ಎಂದು ಹೇಳಿದರು.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದಿಂದ ನಿರಾಶರಾಗಬೇಕಿಲ್ಲ. ಜೆಡಿಎಸ್ ಸದಸ್ಯತ್ವ ನೋಂದಣಿಗೆ ಆದ್ಯತೆ ನೀಡಲಿದೆ ಎಂದರು.

ಮಕ್ಕಳ ಸ್ಕೂಲು ಆ್ಯಪ್‌ಗಳಲ್ಲೇ!



> ಶಿಕ್ಷಣ ಕ್ಷೇತ್ರದಲ್ಲಿ ಆ್ಯಪ್‌ಗಳ ಬಳಕೆ ಇಂದು ಅನಿವಾರ್ಯ ಎಂಬ ಸ್ಥಿತಿಗೆ ನಾವು ತಲುಪಿದ್ದೇವೆ. ಒಂದು ಅಂದಾಜಿನ ಪ್ರಕಾರ, ಇಂದು ಲಭ್ಯವಿರುವ ಆ್ಯಪ್‌ಗಳಲ್ಲಿ ಅತಿ ಹೆಚ್ಚು ಸಂಖ್ಯೆಯ ಆ್ಯಪ್‌ಗಳು ಬಳಕೆಯಲ್ಲಿರುವುದು ಶಿಕ್ಷಣ ಕ್ಷೇತ್ರದಲ್ಲಿ!

ಬಾಲಕೃಷ್ಣ ಅಡಿಗ

ಒಂದು ಕಾಲವಿತ್ತು. ಶಿಕ್ಷಕರಾಗಲೀ ವಿದ್ಯಾರ್ಥಿಗಳಾಗಲೀ, ಯಾವುದೇ ವಿಷಯದ ಪಾಠಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿ ಶಾಲೆಯ ಗ್ರಂಥಾಲಯವನ್ನೇ ಸಂಪೂರ್ಣವಾಗಿ ಅವಲಂಬಿಸಬೇಕಿತ್ತು, ಇಲ್ಲವೇ, ನಿಯತಕಾಲಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನು ಓದಿ ವಿಷಯ ಸಂಗ್ರಹಣೆ ಮಾಡಬೇಕಿತ್ತು. ಆದರೆ, ಕಳೆದ ಮೂರು ದಶಕಗಳಿಂದೀಚೆಗೆ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಅಗಾಧ ಬೆಳವಣಿಗೆಗಳಿಂದಾಗಿ ವಿಷಯ ಸಂಗ್ರಹಣೆ ಅತ್ಯಂತ ಸುಲಭವಾಗಿದೆ. ಅದರಲ್ಲಿಯೂ, ಗಣಕಯಂತ್ರಗಳ ಹಾಗೂ ಮೊಬೈಲ್ ಫೋನ್‌ಗಳ ನೆರವಿನಿಂದ ಅಂತರ್ಜಾಲದ ಮೂಲಕ ಬೆರಳ ತುದಿಯಲ್ಲೇ ಅಗತ್ಯ ಮಾಹಿತಿ ಪಡೆಯುವ ಸಾಧ್ಯತೆ ಹೆಚ್ಚಿದೆ. ಈ ನಿಟ್ಟಿನಲ್ಲಿ ಆಂಡ್ರಾಯ್ಡ್ ಫೋನ್, ಟಾಬ್ಲೆಟ್ ಹಾಗೂ ಐಪ್ಯಾಡ್‌ಗಳ ಬಳಕೆ ಪ್ರಾರಂಭವಾದ ಮೇಲೆ, ಅವುಗಳಲ್ಲಿ ವಿಶೇಷವಾಗಿ ರೂಪಿಸಲಾದ ಉಪಯುಕ್ತ ತಂತ್ರಾಂಶಗಳನ್ನು ಅಳವಡಿಸಿಕೊಳ್ಳುವ ಪದ್ಧತಿ ಜಾರಿಗೆ ಬಂದಿದೆ. ಈ ರೀತಿಯ ತಂತ್ರಾಶಗಳಿಗೆ 'ಅಪ್ಲಿಕೇಷನ್ಸ್' ಎಂದು ಕರೆಯಲಾಗುತ್ತದೆ. ಸಂಕ್ಷಿಪ್ತವಾಗಿ ಆ್ಯಪ್ (apps) ಎಂದು ಕರೆಯಲಾಗುವ ಈ ತಂತ್ರಾಂಶಗಳನ್ನು ರೂಪಿಸಿ ನಮ್ಮ ಫೋನ್ ಅಥವಾ ಐಪ್ಯಾಡ್‌ಗಳಲ್ಲಿ ಅಳವಡಿಸಿರುವುದು ನಮಗೆಲ್ಲಾ ತಿಳಿದೇ ಇದೆ. ಶಿಕ್ಷಣ ಕ್ಷೇತ್ರದಲ್ಲಿ ಇಂಥ ಆ್ಯಪ್‌ಗಳ ಬಳಕೆ ಇಂದು ಅನಿವಾರ್ಯ ಎಂಬ ಸ್ಥಿತಿಗೆ ನಾವು ತಲುಪಿದ್ದೇವೆ. ಒಂದು ಅಂದಾಜಿನ ಪ್ರಕಾರ, ಇಂದು ಲಭ್ಯವಿರುವ ಆ್ಯಪ್‌ಗಳಲ್ಲಿ ಅತಿ ಹೆಚ್ಚು ಸಂಖ್ಯೆಯ ಆ್ಯಪ್‌ಗಳು ಬಳಕೆಯಲ್ಲಿರುವುದು ಶಿಕ್ಷಣ ಕ್ಷೇತ್ರದಲ್ಲಿ! ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಲಾದ ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಶೈಕ್ಷಣಿಕ ಆ್ಯಪ್‌ಗಳು ಇಂದು ಲಭ್ಯವಿವೆ!

ವಿದ್ಯಾರ್ಥಿಗಳು ಕೇಳಿಸಿಕೊಳ್ಳುವ, ನೋಡುವ, ಮಾತನಾಡುವ, ಯೋಚಿಸುವ, ಒಂಟಿಯಾಗಿ ಇಲ್ಲವೇ ಗುಂಪಿನಲ್ಲಿ ನೇರವಾಗಿ ಭಾಗವಹಿಸುವ ಮೂಲಕ ನಡೆಯುತ್ತಿದ್ದ ಕಲಿಕಾ ಪ್ರಕ್ರಿಯೆಯನ್ನು ಮೊಬೈಲ್ ಆ್ಯಪ್‌ಗಳು ಸಂಯೋಜಿಸಿ, ಸರಳ ಮತ್ತು ಸುಲಭಗೊಳಿಸಿವೆ. ಆ್ಯಪ್‌ಗಳನ್ನು ಬಳಸುವ ಮೂಲಕ ವಿದ್ಯಾರ್ಥಿಗಳಲ್ಲಿ ಅಭಿವ್ಯಕ್ತಿಯಲ್ಲಿ ಸುಧಾರಣೆ ತರಬಹುದು. ಅವರನ್ನು ಸಕ್ರಿಯವಾಗಿ ಕಲಿಕೆಯ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಬಹುದು. ಜೊತೆಗೆ, ಪೋಷಕರು, ವಿದ್ಯಾರ್ಥಿ ಹಾಗೂ ಶಿಕ್ಷಕರ ನಡುವೆ ಸಮನ್ವಯ ಸಾಧಿಸುವುದು ಸುಲಭವಾಗುತ್ತದೆ.

ಶೈಕ್ಷಣಿಕ ಆ್ಯಪ್‌ಗಳ ಆಯ್ಕೆ ಹೇಗೆ?

ಶಿಕ್ಷಣಕ್ಕೆ ಸಂಬಂಧಿಸಿದ ಆ್ಯಪ್‌ಗಳನ್ನು ಆಯ್ಕೆ ಮಾಡುವಾಗ ಕೆಲವು ಅಂಶಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ. ಆ್ಯಪ್‌ನಲ್ಲಿ ಪ್ರತಿಯೊಂದು ತರಗತಿಯ, ಪ್ರತಿಯೊಂದು ವಿಷಯದ ಪಠ್ಯವಸ್ತುವನ್ನು ಪೂರ್ತಿಯಾಗಿ ಅಳವಡಿಸಿಕೊಂಡಿರಬೇಕು. ಅದಕ್ಕೆ ಸಂಬಂಧಿಸಿದ ಪೂರ್ಣ ಮಾಹಿತಿ ಹೊಂದಿರಬೇಕು. ವಿದ್ಯಾರ್ಥಿಗೆ ವಿಷಯ ಗ್ರಹಣ ಸುಲಭವಾಗಿ ಆಗುವಂತಿರಬೇಕು. ಪಠ್ಯವಸ್ತುವಿಗೆ ಪೂರಕವಾದ ಹೆಚ್ಚಿನ ಮಾಹಿತಿ ಹೊಂದಿರಬೇಕು. ಹೊಸ ಕೌಶಲಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುವಂತಿರಬೇಕು. ವಿದ್ಯಾರ್ಥಿಯ ಸಂದೇಹಗಳನ್ನು ಪರಿಹರಿಸುವ ವ್ಯವಸ್ಥೆ ಇರಬೇಕು. ವಿವಿಧ ಬಗೆಯ ಪ್ರಶ್ನೆಗಳ ಕೋಶ ಇರಬೇಕು. ಇಂಟರ್‌ನೆಟ್ ಸೌಲಭ್ಯ ಇಲ್ಲದಾಗಲೂ ಬಳಸುವಂತಿರಬೇಕು. ವಿದ್ಯಾರ್ಥಿಯ ಸ್ವಯಂ ಮೌಲ್ಯಮಾಪನಕ್ಕೆ ಅವಕಾಶ ಇರಬೇಕು. ಚಟುವಟಿಕೆಗಳಿದ್ದಲ್ಲಿ, ವಿದ್ಯಾರ್ಥಿಯೇ ನೇರವಾಗಿ ಪಾಲ್ಗೊಳ್ಳುವಂಥ ('hands on') ಅನುಭವ ನೀಡುವಂತಿರಬೇಕು. ಒಟ್ಟಾರೆಯಾಗಿ, ಅದು ಬಳಕೆದಾರ-ಸ್ನೇಹಿಯಾಗಿರಬೇಕು.

ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಪ್ರಸ್ತುತ ಲಭ್ಯ ಇರುವ ಅಸಂಖ್ಯಾತ ಶೈಕ್ಷಣಿಕ ಆ್ಯಪ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಹೆಚ್ಚು ಉಪಯುಕ್ತವಾಗುವ ಕೆಲವು ಜನಪ್ರಿಯ ಆ್ಯಪ್‌ಗಳನ್ನು ಪರಿಚಯ ಮಾಡಿಕೊಳ್ಳೋಣ:

ಯುಡೆಮಿ (Udemy)



ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಸ್ವತಂತ್ರವಾಗಿ ಶಿಕ್ಷಣ ಮುಂದುವರೆಸುವ ಇಚ್ಛೆ ಉಳ್ಳವರಿಗೆ ಅತ್ಯಂತ ಉಪಯುಕ್ತವಾದ ಆ್ಯಪ್ ಇದು. ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಕೋರ್ಸ್‌ಗಳು, ಏಳು ಲಕ್ಷ ಶಿಕ್ಷಕರು ಹಾಗೂ ಐವತ್ತು ಮಿಲಿಯನ್‌ಗಿಂತ ಹೆಚ್ಚು ಬಳಕೆದಾರರು ಈ ಆ್ಯಪ್‌ನ ಹೆಗ್ಗಳಿಕೆ. ಎಲ್ಲ ವಿಷಯಗಳ ಬಗ್ಗೆ ಮಾಹಿತಿ ಒದಗಿಸುವ ಈ ಆ್ಯಪ್‌ನಿಂದ, ಹಲವಾರು ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಸಾಧ್ಯವಿದೆ. ವ್ಯಕ್ತಿಗತ ಬೆಳವಣಿಗೆ, ಯೋಗ ಮುಂತಾದ ವಿಷಯಗಳನ್ನೂ ಈ ಆ್ಯಪ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಮಯ ಹೊಂದಿಸಿಕೊಳ್ಳಲು ನಿಮಗೆ ಸಾಧ್ಯವಾದರೆ, ನಿಮ್ಮ ಶೈಕ್ಷಣಿಕ ಉನ್ನತಿಗೆ ಇದೊಂದು ಅತ್ಯಂತ ಉಪಯುಕ್ತವಾದ ಆ್ಯಪ್. ಬಳಕೆಯೂ ಸುಲಭ ಮತ್ತು ಸರಳ.

ಗೂಗಲ್ ಕ್ಲಾಸ್‌ರೂಮ್ (Google class room)



ಇದೊಂದು ಗೂಗಲ್ ಸಂಸ್ಥೆ ರೂಪಿಸಿರುವ ಉಚಿತ ಆ್ಯಪ್; ಮೊಬೈಲ್ ಮತ್ತು ಐ-ಫೋನ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಂಡು ಬಳಸಬಹುದಾಗಿದೆ. ತಮ್ಮ ಶಾಲೆಯ ಮೂಲಕವೂ ರಿಜಿಸ್ಟರ್ ಮಾಡಿಸಿಕೊಂಡು ಉಚಿತವಾಗಿ ಬಳಸಬಹುದು. ಅತ್ಯಂತ ಸರಳವಾಗಿರುವ ಈ ಆ್ಯಪ್ ಎಲ್ಲ ಹಂತದ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಮಧ್ಯೆ ಪರಸ್ಪರ ಸುಲಲಿತ ಸಂವಹನ ಮತ್ತು ಸಹಕಾರ ಏರ್ಪಡಿಸುತ್ತದೆ. ತರಗತಿಯ ವಿದ್ಯಾರ್ಥಿಗಳ ಪಟ್ಟಿಗೆ ಅನಗುಣವಾಗಿ, ಅವರನ್ನು ಶಿಕ್ಷಕರು ಸುಲಭವಾಗಿ ಸಂಪರ್ಕಿಸಬಹುದು. ಯಾವುದೇ ಒಂದು ತರಗತಿಗೆ ಅವಶ್ಯವಾದ ಶೈಕ್ಷಣಿಕ ವಿಷಯಗಳನ್ನು, ಪರಿಕರಗಳನ್ನು ಹಾಗೂ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಶಿಕ್ಷಕರು ಇದರ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸಬಹುದು. ವಿದ್ಯಾರ್ಥಿಗಳಿಂದ ಹಿಮ್ಮಾಹಿತಿ, ಅಸೈನ್‌ಮೆಂಟ್‌ಗಳಿಗೆ ಉತ್ತರಗಳನ್ನು ಪಡೆಯಬಹುದು. ಅವಶ್ಯ ಬಿದ್ದಲ್ಲಿ ವಿದ್ಯಾರ್ಥಿಗಳೊಂದಿಗೆ ವ್ಯಕ್ತಿಗತವಾಗಿ ಅಥವಾ ಗುಂಪಿನಲ್ಲಿ ಚರ್ಚೆ ನಡೆಸಬಹುದು. ರಸಪ್ರಶ್ನೆಯಂಥ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನೂ ನಡೆಸಬಹುದು. ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವವರಿಗೆ ಅಗತ್ಯವಾದ ಮಾಹಿತಿ ನೀಡುವ ಹಲವಾರು ಜಾಲತಾಣಗಳ ಜೊತೆಗೆ ಸಂಪರ್ಕ ಒದಗಿಸುವುದು ಈ ಆ್ಯಪ್‌ನ ಇನ್ನೊಂದು ವಿಶೇಷ. ❖

ತಂತ್ರಜ್ಞಾನ ವಿಷಯಕ್ಕೆ ಸಂಬಂಧಿಸಿ ಮತ್ತಷ್ಟು ಲೇಖನಗಳನ್ನು prajavani.net ನಲ್ಲಿ ಓದಿ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 55

741) ಪ್ರತಿ 3 ಲೋಹದ ನಾಣ್ಯಗಳಿಗೆ 1 ಚಿನ್ನದ ನಾಣ್ಯ ಇತ್ತು. 10 ಹೊಸ ಚಿನ್ನದ ನಾಣ್ಯಗಳನ್ನು ಸೇರಿಸಿದಾಗ ಚಿನ್ನ ಹಾಗೂ ಲೋಹದ ನಾಣ್ಯಗಳು 1:0 ರಷ್ಟಾದವು. ಹಾಗಾದರೆ, ಈಗ ಅಲ್ಲಿರುವ ಒಟ್ಟು ನಾಣ್ಯಗಳ ಸಂಖ್ಯೆ ಎಷ್ಟು?
ಎ) 90 ಬಿ) 80 ಸಿ) 60 ಡಿ) 50

742) ಒಂದು ಪರೀಕ್ಷೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಭೌತಶಾಸ್ತ್ರ ಅಥವಾ ಗಣಿತಶಾಸ್ತ್ರ ಅಥವಾ ಎರಡನ್ನೂ ತೆಗೆದುಕೊಂಡಿದ್ದರು. ಭೌತಶಾಸ್ತ್ರವನ್ನು ತೆಗೆದುಕೊಂಡವರು ಶೇ 65.8 ರಷ್ಟು ಇದ್ದರು. ಗಣಿತಶಾಸ್ತ್ರವನ್ನು ತೆಗೆದುಕೊಂಡವರು ಶೇ 59.2 ರಷ್ಟು ಇದ್ದರು. ಹಾಗಾದರೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?
ಎ) 750 ಬಿ) 500 ಸಿ) 250 ಡಿ) 125

743) 12 ರಲ್ಲಿ ಬಿಡಿ ಸ್ಥಾನದ ಅಂಕಿ ಯಾವುದು?
ಎ) 1 ಬಿ) 3 ಸಿ) 6 ಡಿ) 9

744) ರಾಜು ತನ್ನ ಮನೆಯಿಂದ ಶಾಲೆಗೆ ಬೈಸಿಕಲ್‌ನಲ್ಲಿ ಹೋಗುವನು. ಅವನು ಮೊದಲ ನಿಮಿಷದಲ್ಲಿ 125 ಮೀ ದೂರವನ್ನು, ಎರಡನೇ ನಿಮಿಷದಲ್ಲಿ 135 ಮೀ ದೂರವನ್ನು, 3 ನೇ ನಿಮಿಷದಲ್ಲಿ 145 ಮೀ ದೂರವನ್ನು ಕ್ರಮಿಸುತ್ತಾನೆ. ಇದೇ ಕ್ರಮದಲ್ಲಿ ಚಲಿಸಿ ಅವನು 10 ನಿಮಿಷಗಳಲ್ಲಿ ಶಾಲೆ ತಲುಪಿದರೆ ಆತನ ಮನೆಗೂ ಶಾಲೆಗೂ ಇರುವ ದೂರವೆಷ್ಟು?
ಎ) 1.4 ಕಿ.ಮೀ ಬಿ) 1.5 ಕಿ.ಮೀ ಸಿ) 1.6 ಕಿ.ಮೀ ಡಿ) 1.7 ಕಿ.ಮೀ

745) ಒಬ್ಬ ವ್ಯಕ್ತಿಯು ಇಬ್ಬರು ಸಾಲ ನೀಡುವವರಿಂದ ₹ 2500 ಪಡೆಯುತ್ತಾನೆ. ಒಂದು ಸಾಲಕ್ಕೆ ಅವನು ವಾರ್ಷಿಕ ಶೇ 8 ರ ಸರಳಬಡ್ಡಿಯನ್ನು ಮತ್ತು ಇನ್ನೊಂದಕ್ಕೆ ವಾರ್ಷಿಕ ಶೇ 6 ರ ಸರಳ ಬಡ್ಡಿಯನ್ನು ಪಾವತಿಸುತ್ತಾನೆ. ಒಂದು ವರ್ಷಕ್ಕೆ ಅವನು ಒಟ್ಟು ಬಡ್ಡಿಯಾಗಿ ₹ 180 ಅನ್ನು ಪಾವತಿಸಿದಲ್ಲಿ ಎಷ್ಟು ಮೊತ್ತವನ್ನು ಶೇ 8 ರಂತೆ ಸಾಲ ಪಡೆಯುತ್ತಾನೆ?
ಎ) 1000 ಬಿ) 1200 ಸಿ) 1300 ಡಿ) 1500

746) ಸ್ವಲ್ಪವೂ ದೋಷವಿಲ್ಲದೆ ನಡೆಯುವ ಗಡಿಯಾರ 3:00 ಗಂಟೆಯ ಸಮಯ ತೋರುತ್ತದೆ. ಗಂಟೆಯನ್ನು ತೋರುವ ಮುಳ್ಳು 135 ಡಿಗ್ರಿಯಷ್ಟು ಚಲಿಸಿದಾಗ ವೇಳೆ ಎಷ್ಟಾಗಿರುತ್ತದೆ?
ಎ) 7:30 ಬಿ) 6:30 ಸಿ) 8:00 ಡಿ) 9:30

747) ಒಬ್ಬನ ವಯಸ್ಸು ಆತನ ಇಬ್ಬರು ಮಕ್ಕಳ ವಯಸ್ಸಿನ ಮೊತ್ತದ ಮೂರು ಪಟ್ಟಿದೆ. ಐದು ವರ್ಷಗಳ ನಂತರ, ಆತನ ವಯಸ್ಸು ಅವನ ಮಕ್ಕಳ ವಯಸ್ಸಿನ ಮೊತ್ತದ ಎರಡು ಪಟ್ಟಾಗಿರುತ್ತದೆ. ಹಾಗಿದ್ದರೆ, ತಂದೆಯ ಈಗಿನ ವಯಸ್ಸು ಎಷ್ಟು?
ಎ) 35 ವರ್ಷ ಬಿ) 40 ವರ್ಷ ಸಿ) 45 ವರ್ಷ ಡಿ) 50 ವರ್ಷ

748) ವ್ಯಕ್ತಿಯೊಬ್ಬರು ₹ 400 ಬೆಲೆಯ ಸಕ್ಕರೆ ಕೊಂಡರು. ಅದರ ¾ ಭಾಗವನ್ನು ಶೇ 10 ರಷ್ಟು ನಷ್ಟಕ್ಕೆ ಮಾರಿದರು. ಉಳಿದಿದ್ದನ್ನು ಶೇ 10 ರಷ್ಟು ಲಾಭಕ್ಕೆ ಮಾರಿದರು, ಒಟ್ಟಾರೆ ಅವರಿಗೆ ನಷ್ಟ ಆದದ್ದು?
ಎ) ಶೇ 5 ನಷ್ಟ ಬಿ) ಶೇ 4 ನಷ್ಟ ಸಿ) ಶೇ 5 ನಷ್ಟ ಡಿ) ಶೇ ನಷ್ಟ

749) ಒಂದು ಡಬ್ಬಿಯಲ್ಲಿ ₹ 1 ಹಾಗೂ ₹ 2 ರ ಒಟ್ಟು 50 ನಾಣ್ಯಗಳಿವೆ. ಅಲ್ಲಿರುವ ಒಟ್ಟು ಮೊತ್ತ ₹ 75 ಆದರೆ ₹ 1 ಹಾಗೂ 2 ರ ನಾಣ್ಯಗಳು ಕ್ರಮವಾಗಿ ಎಷ್ಟಿವೆ?
ಎ) 15 & 35 ಬಿ) 35 & 415 ಸಿ) 25 & 25 ಡಿ) 30 & 40

750) YEX, WHT, UKP, SNL, QQH, ___?
ಎ) OTC ಬಿ) OTB ಸಿ) TOC ಡಿ) TOB

751) ತಮಿಳುನಾಡು ಸರ್ಕಾರ ನೇಮಿಸಿದ ಐದು ಸದಸ್ಯರ ಆರ್ಥಿಕ ಸಲಹಾ ಸಮಿತಿಯಲ್ಲಿ ಕೆಳಕಂಡವರು ಸದಸ್ಯರಾಗಿಲ್ಲ
ಎ) ರಘುರಾಮ್ ರಾಜನ್ ಬಿ) ಡಾ. ಅರವಿಂದ ಸುಬ್ರಹ್ಮಣಂ
ಸಿ) ಏಸ್ಥಿರ ಡೂಪ್ಲೊ ಡಿ) ಬಿಮಲ್ ಜಲನ್

752) ಜಮ್ಮುಕಾಶ್ಮೀರದ ಪೀಪಲ್ ಅಲಯನ್ಸ್ ಫಾರ್ ಗುಪ್ಕರ್ ಡಿಕ್ಲೇರಷನ್‌ನಲ್ಲಿ ಇರದ ಪಕ್ಷ ಯಾವುದು?
ಎ) ಪಿಡಿಪಿ ಬಿ) ನ್ಯಾಶನಲ್ ಕಾನ್ಫರೆನ್ಸ್
ಸಿ) ಸಿಪಿಐ-ಎಂ ಡಿ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

753) ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ ದತ್ತಿ' ಪ್ರಶಸ್ತಿಗೆ ಈ ವರ್ಷ ಯಾರು ಆಯ್ಕೆಯಾಗಿದ್ದಾರೆ?
ಎ) ಸಿದ್ಧಲಿಂಗಯ್ಯ ಬಿ) ಡಾ. ಜಿ.ಎಸ್. ಕಾಪಸೆ
ಸಿ) ಡಾ. ಮೋಹನ್ ಆಳ್ವ ಡಿ) ಡಾ. ಗುರುರಾಜ ಕಾಪಸೆ

754) ಕೋವಿಡ್ 3ನೇ ಅಲೆ ನಿಯಂತ್ರಣ ಮತ್ತು ಚಿಕಿತ್ಸಾ ಸಿದ್ಧತೆಗಳ ಅಧ್ಯಯನ ಸಮಿತಿ ಅಧ್ಯಕ್ಷರು ಯಾರು?
ಎ) ಡಾ. ಕೆ. ಸುಧಾಕರ ಬಿ) ಡಾ. ದೇವಿಪ್ರಸಾದ ಶೆಟ್ಟಿ
ಸಿ) ಡಾ. ರವಿ ಡಿ) ಡಾ. ಸುದರ್ಶನ ಬಲ್ಲಾಳ

755) ವಿಶ್ವದ ಪ್ರಥಮ ಕುಲಾಂತರಿ ರಬ್ಬರ್ ಸಸಿ ಎಲ್ಲಿ ನೆಡಲಾಯಿತು?
ಎ) ಕೇರಳ ಬಿ) ಅಸ್ಸಾಂ ಸಿ) ಅರುಣಾಚಲ ಪ್ರದೇಶ ಡಿ) ಸಿಕ್ಕಿಂ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ – 54 ರ ಉತ್ತರ: 726. ಡಿ, 727. ಬಿ, 728. ಸಿ, 729. ಸಿ, 730. ಬಿ, 731. ಬಿ, 732. ಸಿ, 733. ಸಿ, 734. ಬಿ, 735. ಸಿ, 736. ಬಿ, 737. ಸಿ, 738. ಡಿ, 739. ಸಿ, 740. ಸಿ



ಸುಭಾಷಿತ

ಸ್ವಾರ್ಥವು ಅತ್ಯಂತ ಖಂಡನೀಯವಾದುದು. ತನ್ನ ಬಗ್ಗೆ ಮಾತ್ರ ಯೋಚಿಸುವವನು ಎಲ್ಲರಿಗಿಂತಲೂ ಹೆಚ್ಚು ದುರದೃಷ್ಟಕರವಾದ ವ್ಯಕ್ತಿಯಾಗಿರುತ್ತಾನೆ.

–ಆನಂದ್ ನೀಲಕಂಠನ್

ಪಾಲಿಕೆ ಚುನಾವಣೆ: ಆತ್ಮವಿಮರ್ಶೆಗೆ ಈಡಾಗಿಸುವ ಫಲಿತಾಂಶ

ಉತ್ತರ ಕರ್ನಾಟಕದ ಮೂರು ಮಹಾನಗರ ಪಾಲಿಕೆಗಳು ಮತ್ತು ದೊಡ್ಡಬಳ್ಳಾಪುರ ನಗರಸಭೆ ಹಾಗೂ ತರೀಕೆರೆ ಪುರಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯದ ಆಡಳಿತಾರೂಢ ಬಿಜೆಪಿ ಮುನ್ನಡೆ ಸಾಧಿಸಿದೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಅಧಿಕಾರ ಹಿಡಿಯುವಲ್ಲಿ ಸಫಲವಾಗದಿದ್ದರೂ ಎರಡು ಪಾಲಿಕೆಗಳಲ್ಲಿ ತೀವ್ರ ಸ್ಪರ್ಧೆಯೊಡ್ಡಿದೆ. ಜೆಡಿಎಸ್ ತೀರಾ ನಿರಾಶಾದಾಯಕ ಪ್ರದರ್ಶನ ನೀಡಿದೆ. ಕುಂದಾನಗರಿ ಬೆಳಗಾವಿಯಲ್ಲಿ ಬಿಜೆಪಿ ಅತ್ಯಧಿಕ ಸ್ಥಾನಗಳನ್ನು ಪಡೆದು, ಆಡಳಿತದ ಚುಕ್ಕಾಣಿ ಹಿಡಿಯಲು ಬೇಕಾದ ಸ್ಪಷ್ಟ ಬಹುಮತ ಸಾಧಿಸಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಚುಕ್ಕಾಣಿ ಈ ಹಿಂದೆ ಬಿಜೆಪಿ ಬಳಿಯೇ ಇತ್ತು. ಇದರ ಹೊರತಾಗಿಯೂ ಬಹುಮತ ಪಡೆಯಲು ವಿಫಲವಾಗಿದೆ. ಅದೇ ರೀತಿ ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದರೂ ಬಹುಮತ ಪಡೆಯುವಲ್ಲಿ ಸೋತಿದೆ. ಯಾವುದೇ ಪಕ್ಷ ಇಲ್ಲಿ ಅಧಿಕಾರ ಹಿಡಿಯಬೇಕಾದರೂ ಅದಕ್ಕೆ ಜೆಡಿಎಸ್ ಬೆಂಬಲ ಅನಿವಾರ್ಯ ಎಂಬ ಅತಂತ್ರ ಸ್ಥಿತಿ ತಲೆದೋರಿದೆ. ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್ ಶಾಸಕರು ಇದ್ದರೂ ಅಲ್ಲಿನ ನಗರಸಭೆಯ ಅಧಿಕಾರ ಹಿಡಿಯಲು ಆ ಪಕ್ಷ ವಿಫಲವಾಗಿದೆ. ಇಲ್ಲಿಯೂ ಅತಂತ್ರ ಸ್ಥಿತಿ ಉಂಟಾಗಿದ್ದು, ಉಳಿದ ಪಕ್ಷಗಳಿಗಿಂತ ಬಿಜೆಪಿ ಹೆಚ್ಚು ಸ್ಥಾನ ಪಡೆದಿದೆ. ತರೀಕೆರೆ ವಿಧಾನಸಭಾ ಕ್ಷೇತ್ರವನ್ನು ಬಿಜೆಪಿ ಶಾಸಕ ಪ್ರತಿನಿಧಿಸುತ್ತಿದ್ದರೂ ಇಲ್ಲಿನ ಪುರಸಭೆಯ ಮೇಲಿನ ಹಿಡಿತವನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಈ ಮಧ್ಯೆ ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಪಕ್ಷವು ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಪಾಲಿಕೆಗಳಲ್ಲಿ ಖಾತೆ ತೆರೆದಿರುವುದು ಕುತೂಹಲಕರ ರಾಜಕೀಯ ವಿದ್ಯಮಾನ. ಅಲ್ಪಸಂಖ್ಯಾತರ ಮತಗಳನ್ನು ದೊಡ್ಡ ಮಟ್ಟದಲ್ಲಿ ಪಡೆಯುತ್ತಿದ್ದ ಕಾಂಗ್ರೆಸ್‌ಗೆ ಇದು ಚಿಂತೆ ಹುಟ್ಟಿಸುವ ಸಂಗತಿಯೇ ಸರಿ. ಕೆಲವು ನಗರ ಸ್ಥಳೀಯ ಸಂಸ್ಥೆಗಳ ಉಪಚುನಾವಣೆ ಸೇರಿದಂತೆ ಒಟ್ಟು 260ಕ್ಕೂ ಹೆಚ್ಚು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 117 ಮತ್ತು ಕಾಂಗ್ರೆಸ್ 103 ಸ್ಥಾನಗಳನ್ನು ಗೆದ್ದಿರುವುದು ನೋಡಿದರೆ ಸಂಖ್ಯಾಬಲದ ವಿಷಯದಲ್ಲಿ ಉಭಯ ಪಕ್ಷಗಳ ಮಧ್ಯೆ ಪೈಪೋಟಿ ತೀವ್ರವಾಗಿತ್ತು ಎನ್ನಬಹುದು. ಜೆಡಿಎಸ್ ಬರೀ 16 ಸ್ಥಾನಗಳನ್ನು ಗೆದ್ದಿದ್ದರೂ ಕಲಬುರ್ಗಿ ಪಾಲಿಕೆಯಲ್ಲಿ ಅದು ಪಡೆದಿರುವ ನಾಲ್ಕು ಸ್ಥಾನಗಳು ಯಾವುದೇ ಪಕ್ಷ ಅಧಿಕಾರಕ್ಕೆ ಬರಲು ನಿರ್ಣಾಯಕ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಆಡಳಿತ ಪಕ್ಷಕ್ಕೆ ಹೆಚ್ಚು ಅನುಕೂಲ ಇರುತ್ತದೆ. ಆದಕಾರಣ ಫಲಿತಾಂಶ ಸಹಜವಾಗಿಯೇ ಆಡಳಿತ ಪಕ್ಷದ ಪರ ವಾಲುವುದು ಸಹಜ ಎಂಬಂತಾಗಿದೆ. ಸೋಲು-ಗೆಲುವು ನಿರ್ಧರಿಸುವಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಧಾನ ಪಾತ್ರ ವಹಿಸುತ್ತದೆ. ವಾರ್ಡ್ ಮಟ್ಟದ ಸೀಮಿತ ವಲಯದಲ್ಲಿ ಅಭ್ಯರ್ಥಿಯ ಶಕ್ತಿ-ಮಿತಿಗಳನ್ನು ಒರೆಗೆ ಹಚ್ಚುವುದು ಮತದಾರರಿಗೆ ಸುಲಭಸಾಧ್ಯ. ಸ್ಥಳೀಯ ಮುಖಂಡರ ಸಕ್ರಿಯ ಪಾಲ್ಗೊಳ್ಳುವಿಕೆ ಅಥವಾ ನಿರಾಸಕ್ತಿಯೂ ಕೆಲವೊಮ್ಮೆ ತಕ್ಕಡಿಯನ್ನು ಏರುಪೇರಾಗಿಸಬಹುದು. ಗುಂಪುಗಾರಿಕೆ ಮತ್ತು ಕಾಲೆಳೆಯುವ ಪ್ರವೃತ್ತಿಯ ಪಾತ್ರವನ್ನೂ ಕಡೆಗಣಿಸುವಂತಿಲ್ಲ.



ಮೂರೂ ಮಹಾನಗರ ಪಾಲಿಕೆಗಳಲ್ಲಿ ಅಧಿಕಾರಕ್ಕೆ ಏರಲಿರುವ ಪಕ್ಷಗಳು, ಮತದಾನದ ಪ್ರಮಾಣ ಹಿಂದಿನ ಸಲಕ್ಕಿಂತ ಕಡಿಮೆ ಆಗಿರುವುದನ್ನು ಗಮನಿಸಿ, ಸ್ವಚ್ಛ, ಪಾರದರ್ಶಕ ಮತ್ತು ದಕ್ಷ ಆಡಳಿತವನ್ನು ನೀಡುವತ್ತ ಗಮನ ಹರಿಸಬೇಕಿದೆ

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ಬಳಿಕ ನಡೆದ ಮೊದಲ ಚುನಾವಣೆ ಇದು. ನಾಯಕತ್ವ ಬದಲಾವಣೆಯಿಂದ ಚುನಾವಣೆಯಲ್ಲಿ ಪಕ್ಷಕ್ಕೆ ನಷ್ಟವುಂಟಾಗಬಹುದೇ ಎಂಬ ಕುತೂಹಲ ಕೆಲವರಲ್ಲಾದರೂ ಇದ್ದಿರಬಹುದು. ಆ ಪ್ರಶ್ನೆಗೆ ಈ ಫಲಿತಾಂಶದಲ್ಲಿ ಉತ್ತರ ಹುಡುಕಬಹುದು. ಬೆಳಗಾವಿ ಪಾಲಿಕೆ ಚುನಾವಣೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮೂಲೆಗುಂಪಾಗಿದೆ. ಭಾಷೆ ಹೆಸರಿನಲ್ಲಿ ಏನಾದರೂ ಒಂದು ತಂಟೆ ತೆಗೆಯುತ್ತ, ಅಭಿವೃದ್ಧಿ ಚಟುವಟಿಕೆಗಳಿಗೆ ಅಡ್ಡಗಾಲು ಹಾಕುವ ಎಂಇಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಅಲ್ಲಿನ ಮತದಾರರು ತಿರಸ್ಕರಿಸಿರುವುದು ಕುತೂಹಲಕರ ಬೆಳವಣಿಗೆ. ಬೆಲೆ ಏರಿಕೆ ವಿರುದ್ಧ ವಿರೋಧ ಪಕ್ಷಗಳು ಧ್ವನಿ ಎತ್ತಿದ್ದವು. ಆದರೆ, ಅದು ಈ ಚುನಾವಣೆಯಲ್ಲಿ ಹೆಚ್ಚಿನ ಪರಿಣಾಮ ಬೀರಿದಂತೆ ಇಲ್ಲ. ಹಾಗಂತ ಆಡಳಿತಕ್ಕೆ ಜನ ನೀಡಿದ ಮನ್ನಣೆ ಎಂದು ಬಿಜೆಪಿ ನಾಯಕರು ಭಾವಿಸಬೇಕಾಗಿಲ್ಲ. ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಕೇಂದ್ರದ ಒಬ್ಬ ಪ್ರಭಾವಿ ಸಚಿವ ಮತ್ತು ಬಿಜೆಪಿಯ ಅನೇಕ ಹಿರಿಯ ನಾಯಕರ ಪ್ರಭಾವದ ಹೊರತಾಗಿಯೂ ಪಾಲಿಕೆಯಲ್ಲಿ ಬಹುಮತ ಪಡೆಯಲು ಆಗಿಲ್ಲ ಎಂಬುದು ಏನನ್ನು ಸೂಚಿಸುತ್ತದೆ? ಈ ಪ್ರಶ್ನೆಯು ಅಧಿಕಾರಸ್ಥರನ್ನು ಆತ್ಮಾವಲೋಕನಕ್ಕೆ ಈಡುಮಾಡಬೇಕಾದುದು ಅಗತ್ಯ. ಕಾಂಗ್ರೆಸ್‌ಗೆ ಗಟ್ಟಿ ನೆಲೆ ಒದಗಿಸಿದ್ದ ಕಲಬುರ್ಗಿಯಲ್ಲಿ ಆ ಪಕ್ಷಕ್ಕೆ ಬಹುಮತ ದೊರೆತಿಲ್ಲ ಎಂಬುದು ಕೂಡ ಆ ಪಕ್ಷದ ನಾಯಕರು ಆತ್ಮವಿಮರ್ಶೆ ನಡೆಸಬೇಕಾದ ಬೆಳವಣಿಗೆ. ಈ ಮೂರೂ ಮಹಾನಗರ ಪಾಲಿಕೆಗಳಲ್ಲಿ ಮತದಾನದ ಪ್ರಮಾಣ ಹಿಂದಿನ ಸಲಕ್ಕಿಂತ ಕಡಿಮೆ ಆಗಿರುವುದನ್ನು ಗಮನಿಸಿದರೆ, ಮತದಾರರು ಎಲ್ಲ ರಾಜಕೀಯ ಪಕ್ಷಗಳ ಬಗೆಗೂ ಅತೃಪ್ತಿ ಹೊಂದಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಈಗ ಅಧಿಕಾರಕ್ಕೆ ಏರುವ ಪಕ್ಷಗಳು ಈ ಅಂಶವನ್ನು ಗಮನಿಸಿ ಸ್ವಚ್ಛ, ಪಾರದರ್ಶಕ ಮತ್ತು ದಕ್ಷ ಆಡಳಿತವನ್ನು ನೀಡುವತ್ತ ಗಮನ ಹರಿಸಬೇಕಿದೆ.

ದಿನದ ಟ್ವೀಟ್



ಇಚ್ಛಾಶಕ್ತಿ ತೋರಬೇಕಿದೆ

ಯುವಿಸಿಇ, ಬಿಎಂಸಿ, ಕೆಎಂಸಿ, ವಿಐಎಂಎಸ್, ಎಂಎಂಸಿ ತರಹದ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಚೆನ್ನಾಗಿ ನಡೆಸಲು ಸರ್ಕಾರಕ್ಕೆ ಸಾಧ್ಯವಾಗುವಾಗ, ಒಂದು ಐನೂರು ಅದ್ಭುತವಾದ ಕನ್ನಡ ಮಾಧ್ಯಮದ ಶಾಲೆಗಳನ್ನು ರಾಜ್ಯದಲ್ಲಿ ನಡೆಸಿ ತೋರಿಸುವುದು ಕಷ್ಟವಲ್ಲ. ಕನ್ನಡ ಮಾಧ್ಯಮದ ಬಗ್ಗೆ ಜನರಲ್ಲಿ ನಂಬಿಕೆ ಬರಲು ಇಂತಹದ್ದೊಂದು ಹೆಜ್ಜೆ ಇಡಿ ಸರ್

@drashwathcn

ವಸಂತ್ ಶೆಟ್ಟಿ, ಬರಹಗಾರ

ಕಿಡಿನುಡಿ

ಕಳೆದ ಬಾರಿ ಬಿಬಿಎಂಪಿ ಚುನಾವಣೆಯಲ್ಲಿ ನಾವು ಬಿಜೆಪಿಗಿಂತ ಹೆಚ್ಚು ಸ್ಥಾನ ಗೆದ್ದಿದ್ದೆವು. ಈ ಬಾರಿಯೂ ನಾವು ಅವರಿಗಿಂತ ಹೆಚ್ಚಿನ ಸ್ಥಾನ ಗೆಲ್ಲುತ್ತೇವೆ. ಬಿಜೆಪಿಯವರಿಗೆ ಗೆಲ್ಲುವ ಧೈರ್ಯ, ಆತ್ಮವಿಶ್ವಾಸ ಇದ್ದರೆ ಬಿಬಿಎಂಪಿ ಚುನಾವಣೆ ನಡೆಸಲಿ. ಕುಂಟುನೆಪ ಹೇಳುತ್ತಾ ಚುನಾವಣೆ ಮುಂದೂಡುತ್ತಿರುವುದು ಯಾಕೆ?



ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 8-9-1996

• ಡಾ. ರಾಜ್‌ಗೆ ಮೈಸೂರಿನಲ್ಲಿ ಪೌರ ಸನ್ಮಾನ

ಮೈಸೂರು, ಸೆ. 7– ಮಾನಸ ಗಂಗೋತ್ರಿಯ ಹಸಿರ ಸಿರಿಯ ಹಿನ್ನೆಲೆಯಲ್ಲಿ, ಸಹಸ್ರಾರು ಅಭಿಮಾನಿಗಳ ಹರ್ಷೋದ್ಗಾರಗಳ ನಡುವೆ ಈ ಬಾರಿಯ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಕನ್ನಡ ಚಿತ್ರನಟ ಡಾ. ರಾಜಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಆಳೆತ್ತರದ ಗುಲಾಬಿಯ ಹಾರಗಳು, ಕುಸುರಿ ಕೆಲಸದ ರೇಷಿಮೆಯ ಮಾಲೆಗಳು, ನೆನಪಿನ ಕಾಣಿಕೆಗಳು, ಸಕಲಗುಣ ವಿಶೇಷಣಗಳನ್ನೂ ಹೊತ್ತ ಅಭಿನಂದನ ಪತ್ರ, ಅಭಿಮಾನಿಗಳ ಉತ್ಸಾಹ ಈ ಎಲ್ಲದರ ನಡುವೆ ಮುಳುಗಿಹೋಗಿದ್ದ ರಾಜಕುಮಾರ್ ಅವರಿಗೆ ತವರೂರ ಪುಲಕ. ಹುಟ್ಟಿದ ಜಿಲ್ಲೆಯ ರೋಮಾಂಚನ. ಆನಂದಭಾಷ್ಪಗಳನ್ನು ತುಂಬಿಕೊಂಡು ನೆರೆದ ಅಭಿಮಾನಿಗಳ ಮುಂದೆ ಕೃತಜ್ಞತೆ ಹೇಳಿದ ಡಾ. ರಾಜ್, ಅಷ್ಟೇ ಹುರುಪಿನಿಂದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬ ಹಾಡನ್ನೂ ಹಾಡಿ ಅದಕ್ಕೆ ಹೆಜ್ಜೆಯನ್ನೂ ಹಾಕಿದರು.

ಮೈಸೂರು ಮಹಾನಗರ ಪಾಲಿಕೆಯು ಡಾ. ರಾಜ್ ಅವರನ್ನು ಅಭಿನಂದಿಸಲು ಪೌರ ಸನ್ಮಾನ ಏರ್ಪಡಿಸಿತ್ತು.

50 ವರ್ಷಗಳ ಹಿಂದೆ

ಬುಧವಾರ, 8-9-1971

• ನಗರ ಆಸ್ತಿ ಮೇಲೆ ಮಿತಿ: ಶಾಸನ ರಚನೆ ಅಧಿಕಾರ ಕುರಿತು ರಾಜ್ಯಗಳ ಜಿಜ್ಞಾಸೆ

ನವದೆಹಲಿ, ಸೆ. 7– ಪಟ್ಟಣ ಪ್ರದೇಶಗಳಲ್ಲಿ ಆಸ್ತಿ ಮೇಲೆ ಮಿತಿ ವಿಧಿಸುವ ಶಾಸನವನ್ನು ಯಾರು ಮಾಡಬೇಕು? ಕೇಂದ್ರವೇ, ವಿವಿಧ ರಾಜ್ಯಗಳೇ?

ಈ ಬಗ್ಗೆ ವಿವಿಧ ರಾಜ್ಯಗಳು ವಿಭಿನ್ನ ಬಗೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ. ಅಗತ್ಯವಾದ ಶಾಸನವನ್ನು ಕೇಂದ್ರ ಸರ್ಕಾರ ರಚಿಸುವುದಕ್ಕೆ ಮಹಾರಾಷ್ಟ್ರ ಮತ್ತು ಉತ್ತರಪ್ರದೇಶ ಬೆಂಬಲ ವ್ಯಕ್ತಪಡಿಸಿವೆ. ಆಸ್ತಿ ಮಿತಿ ಪ್ರಶ್ನೆಯನ್ನು ಪರಿಶೀಲಿಸಲು ನೇಮಕ ಮಾಡಿರುವ ಸಮಿತಿಯ ವರದಿ ಬಂದ ಬಳಿಕ ಆಂಧ್ರ ಮತ್ತು ತಮಿಳುನಾಡು ಅಭಿಪ್ರಾಯ ವ್ಯಕ್ತಪಡಿಸುವುದಾಗಿ ತಿಳಿಸಿವೆ.

5 ಲಕ್ಷ ರೂ. ಮಿತಿಯನ್ನು ಸೂಚಿಸುವ ಕೇಂದ್ರದ ಮಾದರಿ ಮಸೂದೆಗೆ ಉಳಿದ ಬಹುತೇಕ ರಾಜ್ಯಗಳು ಬೆಂಬಲ ವ್ಯಕ್ತಪಡಿಸಿವೆ. ಬಿಹಾರವು 5 ಲಕ್ಷ ರೂ. ಮಿತಿಯನ್ನು ಜಾರಿಗೆ ತಂದು ಈಗಾಗಲೇ ಸುಗ್ರೀವಾಜ್ಞೆಯನ್ನು ಹೊರಡಿಸಿದೆ.

• ಪೊಲೀಸ್ 'ದೌರ್ಜನ್ಯ' ವಿರುದ್ಧ ಠಾಣೆಗೆ ಮುತ್ತಿಗೆ

ತುಮಕೂರು, ಸೆ. 7– ಸ್ಥಳೀಯ ಮುಖಂಡರಿಬ್ಬರ ಮೇಲೆ ಪೊಲೀಸರು ದೌರ್ಜನ್ಯವೆಸಗಿದರೆಂಬ ಆಪಾದನೆ ಮೇಲೆ ಇಂದು ಇಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಉದ್ರಿಕ್ತಗೊಂಡ ನಿಮಿತ್ತ, ಜಿಲ್ಲಾ ಮ್ಯಾಜಿಸ್ಟ್ರೇಟರು ನಗರದಲ್ಲಿ 144ನೆಯ ಸೆಕ್ಷನ್ ಅನ್ವಯ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದ್ದಾರೆ.

ಉದ್ರಿಕ್ತಗೊಂಡ ಗುಂಪು ಬಸ್ಸುಗಳ ಮೇಲೆ ಕಲ್ಲು ತೂರಿ ಗಾಜು ಒಡೆದುಹಾಕಿತು.

ಕ್ರಿಕೆಟ್ ಜನಕರ ನಾಡಿನಲ್ಲಿ ಕೊಹ್ಲಿ ಬಳಗವು ಟೆಸ್ಟ್ ಕ್ರಿಕೆಟ್ ಸರಣಿ ಜಯದ ಹೊಸ್ತಿಲಿಗೆ ಬಂದು ನಿಂತಿದೆ

ಇಂಗ್ಲೆಂಡ್ ನೆಲದಲಿ ಗೆಲುವಿನ ಸುಖ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಕ್ರಿಕೆಟ್ ಜನಕರ ನಾಡು ಇಂಗ್ಲೆಂಡ್ ತಂಡವನ್ನು ಅದರ ನೆಲದಲ್ಲಿಯೇ ಮಣಿಸುವ ಸಂತೋಷಕ್ಕೆ ಬೆಲೆ ಕಟ್ಟಲಾಗದು.

ಐವತ್ತು ವರ್ಷಗಳ ಹಿಂದೆ ಅಂತಹದೊಂದು ಅವಿಸ್ಮರಣೀಯ ವಿಜಯ ಸಾಧಿಸಿದ್ದು ಅಜಿತ್ ವಾಡೇಕರ್ ಬಳಗ. ಮೊದಲ ಬಾರಿಗೆ ಇಂಗ್ಲೆಂಡ್ ತಂಡದ ವಿರುದ್ಧ ಅದರ ನೆಲದಲ್ಲಿಯೇ ಸರಣಿ ಗೆದ್ದಿತ್ತು. ಅದಾಗಿ 15 ವರ್ಷಗಳ ನಂತರ ಕಪಿಲ್ ದೇವ್ ಪಡೆಯು ಸರಣಿ ಗೆಲುವಿನ ಸಂತಸ ಆಚರಿಸಿತ್ತು. ಇದೀಗ ವಿರಾಟ್ ಕೊಹ್ಲಿ ಬಳಗವೂ ಅಂತಹದೊಂದು ಐತಿಹಾಸಿಕ ಜಯದ ಹೊಸ್ತಿಲಲ್ಲಿ ಬಂದು ನಿಂತಿದೆ. ಸೋಮವಾರವಷ್ಟೇ ಓವಲ್ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ 2-1ರಿಂದ ಮುನ್ನಡೆ ಸಾಧಿಸಿದೆ. ಗಣೇಶ ಚತುರ್ಥಿಯಂದು ಮ್ಯಾಂಚೆಸ್ಟರ್‌ನಲ್ಲಿ ನಡೆಯುವ ಕೊನೆಯ ಪಂದ್ಯ ಡ್ರಾ ಆದರೂ ಸಾಕು ಭಾರತಕ್ಕೆ ಕಿರೀಟ ಖಚಿತ. ಆದರೆ ಆತಿಥೇಯರು ಗೆದ್ದುಬಿಟ್ಟರೆ ಸಮಬಲ ಸಾಧನೆಯಷ್ಟೇ.

ಫಲಿತಾಂಶ ಏನೇ ಇರಲಿ. ಈ ಸರಣಿಯ ಪಂದ್ಯಗಳಲ್ಲಿ ಒಲಿ ರಾಬಿನ್ಸನ್, ಜಿಮ್ಮಿ ಆ್ಯಂಡರ್ಸನ್, ಕ್ರಿಸ್ ವೋಕ್ಸ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್ ಅವರಂತಹ ವೇಗದ ಬೌಲರ್‌ಗಳು ವಿಕೆಟ್ ಉರುಳಿಸಿದ ರೀತಿ ನೋಡಿದಾಗ ಒಂದು ಪ್ರಶ್ನೆ ಕಾಡಿತು. ಇದೇ ನೆಲದಲ್ಲಿ 1971ರಲ್ಲಿ ಕನ್ನಡಿಗ, ಸ್ಪಿನ್ ಗಾರುಡಿಗ ಬಿ.ಎಸ್. ಚಂದ್ರಶೇಖರ್ ಯಶಸ್ವಿಯಾಗಿದ್ದು ಹೇಗೆ ಎಂಬುದೇ ಆ ಪ್ರಶ್ನೆ. ಲಾಗಾಯ್ತಿನಿಂದಲೂ ಇಂಗ್ಲೆಂಡ್, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಪಿಚ್‌ಗಳೆಂದರೆ ವೇಗಿಗಳ ಸ್ವರ್ಗ. ತಲೆಗಪ್ಪಳಿಸುವ ಬೌನ್ಸರ್‌ಗಳು, ಕಾಲಬುಡದಲ್ಲಿ ನುಗ್ಗಿಬರುವ ಯಾರ್ಕರ್‌ಗಳದ್ದೇ ದರ್ಬಾರು. ಅಂತಹ ಪಿಚ್‌ನಲ್ಲಿ ಅಂದು ಚಂದ್ರಶೇಖರ್ ಆರು ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡು, ಭಾರತದ ಮಡಿಲಿಗೆ ಸರಣಿ ಜಯದ ಕಾಣಿಕೆ ನೀಡಿದ್ದರು.

ಕಳೆದ ಐದು ದಶಕಗಳಲ್ಲಿ ಲಂಡನ್‌ನ ಥೇಮ್ಸ್ ನದಿಯಲ್ಲಿ ಬಹಳಷ್ಟು ನೀರು ಹರಿದುಹೋಗಿದೆ. ಅದೇ ರೀತಿ ಕ್ರಿಕೆಟ್‌ನಲ್ಲಿಯೂ ಬದಲಾವಣೆಗಳು ನಿರಂತರವಾಗಿ ಆಗುತ್ತಿವೆ. ಆದರೆ, ಇಂಗ್ಲೆಂಡ್ ಇಂದಿಗೂ ತನ್ನ ವೇಗದ ಬೌಲರ್‌ಗಳನ್ನೇ ನೆಚ್ಚಿಕೊಂಡಿದೆ. ಹಾಗಾಗಿ ಹಸಿರುಕ್ಕುವ ಪಿಚ್‌ಗಳ ಮೇಲೆ ಆತಿಥ್ಯ ನೀಡುತ್ತದೆ. ಈ ಬಾರಿಯೂ ಅದೇ ಸಂಪ್ರದಾಯ ಮುಂದುವರಿಸಿತು. ನಾಲ್ಕು ಪಂದ್ಯಗಳಲ್ಲಿ ಒಟ್ಟು 133 ವಿಕೆಟ್‌ಗಳು ಪತನಗೊಂಡಿವೆ. ಅದರಲ್ಲಿ ಸ್ಪಿನ್ನರ್‌ಗಳಿಗೆ ದಕ್ಕಿದ್ದು 13 ಮಾತ್ರ!

ಆದರೆ ವಿರಾಟ್ ಪಡೆಯು ಆತಿಥೇಯರಿಗೆ ತಿರುಮಂತ್ರವನ್ನು ಹಾಕಿತು. ಸ್ಪಿನ್ನರ್‌ಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡದೇ ತನ್ನ ಮಧ್ಯಮವೇಗಿಗಳ ಮೇಲೆ ವಿಶ್ವಾಸವಿಟ್ಟ ಭಾರತ ತಂಡದ ವ್ಯವಸ್ಥಾಪನ ಸಮಿತಿ ಸೈ ಎನಿಸಿಕೊಂಡಿತು. ಸರಣಿಯ ಒಂದೂ ಪಂದ್ಯದಲ್ಲಿ ದಿಗ್ಗಜ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರನ್ನು ಕಣಕ್ಕಿಳಿಸಿಯೇ ಇಲ್ಲ. ಅವಕಾಶ ಪಡೆದ ಏಕೈಕ ಸ್ಪಿನ್ನರ್ ರವೀಂದ್ರ ಜಡೇಜ ಬೌಲಿಂಗ್‌ಗಿಂತ ಹೆಚ್ಚು ಬ್ಯಾಟಿಂಗ್‌ನಲ್ಲಿ ಮಿಂಚಿದ್ದಾರೆ.

ಅಶ್ವಿನ್‌ಗೆ ಅವಕಾಶ ಕೊಡಬೇಕಿತ್ತು ಎಂಬ ಚರ್ಚೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಲೇ ಇದೆ. ಆದರೆ ತಂಡದ ಆಡಳಿತ ತಲೆಕೆಡಿಸಿಕೊಂಡಿಲ್ಲ. ಪ್ರತೀ ಪಂದ್ಯದಲ್ಲಿಯೂ ನಾಲ್ವರು ಮಧ್ಯಮ ವೇಗಿಗಳನ್ನು ಕಣಕ್ಕಿಳಿಸಿದೆ. ಅದಕ್ಕೆ ತಕ್ಕಂತೆ ಗೆಲುವು ಕೂಡ ಒಲಿದಿದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಬೌಲರ್‌ಗಳು 'ಬಾಲಂಗೋಚಿ' ಎಂಬ ಉಡಾಫೆಯ ಹಣೆಪಟ್ಟಿಯನ್ನು ಅಳಿಸಿ ಹಾಕಿದ್ದಾರೆ. ಲಾರ್ಡ್ಸ್ ವಿಜಯದಲ್ಲಿ ಮೊಹಮ್ಮದ್ ಶಮಿ ಅವರ ಅರ್ಧಶತಕ ಮತ್ತು ಬೂಮ್ರಾ ಅವರ 34 ರನ್‌ಗಳ ಕಾಣಿಕೆಯೇ ಪ್ರಮುಖ ಪಾತ್ರ ವಹಿಸಿತ್ತು. ಲೀಡ್ಸ್ ಸೋಲಿನಲ್ಲಿ ಅಗ್ರ ಬ್ಯಾಟ್ಸ್‌ಮನ್‌ಗಳ ಜೊತೆಗೆ ಕೊನೆಯ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯ ಕೂಡ ಎದ್ದು ಕಂಡಿತ್ತು.

ಆದರೆ, ಕೆನಿಂಗ್ಟನ್ ಓವಲ್ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ ಶಾರ್ದೂಲ್ ಠಾಕೂರ್ ತಮ್ಮ ಆಯ್ಕೆಯನ್ನೂ ಸಮರ್ಥಿಸಿಕೊಂಡರು. ಈ ಪಂದ್ಯದಲ್ಲಿ ಅವರು ಶಮಿ ಬದಲು ಸ್ಥಾನ ಪಡೆದಿದ್ದರು. ಅನುಭವಿ ಇಶಾಂತ್ ಶರ್ಮಾಗೆ ವಿಶ್ರಾಂತಿ ನೀಡಿ ಉಮೇಶ್ ಯಾದವ್‌ಗೆ ಅವಕಾಶ ಕೊಟ್ಟಿದ್ದು ಒಳ್ಳೆಯದೇ ಆಯಿತು. ಒಟ್ಟು ಆರು ವಿಕೆಟ್ ಸಂಪಾದಿಸಿದ್ದೂ ಅಲ್ಲದೆ ಬ್ಯಾಟಿಂಗ್‌ನಲ್ಲಿಯೂ ಮಹತ್ವದ ಕಾಣಿಕೆ ನೀಡಿದರು. ಅದರಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ ರೋಹಿತ್ ಶರ್ಮಾ ಮಾಡಿದ ಶತಕ ವ್ಯರ್ಥವಾಗಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಕೇವಲ 191 ರನ್‌ಗಳಿಗೆ ಆಲೌಟ್ ಆಗಿ, 99 ರನ್‌ಗಳ ಹಿನ್ನಡೆ ಅನುಭವಿಸಿದ ನಂತರವೂ 466 ರನ್‌ಗಳ ಮೊತ್ತ ಗಳಿಸಿದ್ದು ಸಣ್ಣ ಸಾಧನೆಯಲ್ಲ. ಬೂಮ್ರಾ, ಉಮೇಶ್ ಬೌಲಿಂಗ್‌ನಲ್ಲಿ ಮಿಂಚಿ ತಂಡದ ಜಯವನ್ನು ಖಚಿತಪಡಿಸಿದರು.


ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಮೊದಲ ಸರಣಿಯೂ ಇದಾಗಿರುವುದರಿಂದ ಈ ಜಯಕ್ಕೆ ಅದರದ್ದೇ ಆದ ಮಹತ್ವವಿದೆ. ಮೊದಲ ಟೂರ್ನಿಯಲ್ಲಿ ರನ್ನರ್ ಅಪ್ ಆಗಿರುವ ಭಾರತ ತಂಡ ಈಗಿನ ಜಯದ ಅಬ್ಬರದಲ್ಲಿ ಮೈಮರೆಯುವಂತಿಲ್ಲ. ಆತ್ಮಾವಲೋಕನ ಮಾಡಿಕೊಳ್ಳುವಂತಹ ಕೆಲವು ಸಂಗತಿಗಳೂ ಇಲ್ಲಿವೆ. ಅದರಲ್ಲಿ ಪ್ರಮುಖವಾಗಿ ವಿರಾಟ್ ಕೊಹ್ಲಿಯ ಬ್ಯಾಟಿಂಗ್. ಸುಮಾರು ಒಂದೂವರೆ ವರ್ಷದಿಂದ ಅವರು ಒಂದೂ ಶತಕ ಗಳಿಸಿಲ್ಲ. ಡಬ್ಲ್ಯುಟಿಸಿ ಫೈನಲ್ ಸೋಲಿನಲ್ಲಿ ಅವರ ನಾಯಕತ್ವ ಕೂಡ ಟೀಕೆಗೊಳಗಾಗಿತ್ತು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬರುವ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದ್ದೇ ಇರುತ್ತದೆ. ಅದರ ಒತ್ತಡವನ್ನು ನಿಭಾಯಿಸುವಷ್ಟು ಅನುಭವ ಮತ್ತು ಮಾನಸಿಕ ಸದೃಢತೆ ಅವರಿಗೆ ಇದೆ. ವೇಗದ ಪಿಚ್‌ಗಳಲ್ಲಿ ಹೊಸ ಚೆಂಡಿನ ಹೊಳಪಿನ ಮುಂದೆ ಆರಂಭಿಕ ಜೋಡಿ ವಿಫಲವಾದಾಗ ಮೂರು ಮತ್ತು ನಾಲ್ಕನೇ ಕ್ರಮಾಂಕದವರ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಆದ್ದರಿಂದ ಚೇತೇಶ್ವರ್ ಪೂಜಾರ ಹಾಗೂ ವಿರಾಟ್ ಮೇಲೆ ಹೆಚ್ಚಿನ ಹೊಣೆ ಇರುತ್ತದೆ.

ಆದರೆ ಇತ್ತೀಚಿನ ಪಂದ್ಯಗಳಲ್ಲಿ ಈ ಇಬ್ಬರ ಆಟ ಅಸ್ಥಿರವಾಗಿದೆ. ಅಜಿಂಕ್ಯ ರಹಾನೆ ಕೂಡ ಫಾರ್ಮ್ ಕಳೆದುಕೊಂಡಿರುವುದು ಚಿಂತೆಯ ವಿಷಯ. ಬೆಂಚ್ ಕಾಯುತ್ತಿರುವ ಟೆಸ್ಟ್ ಪರಿಣತ ಬ್ಯಾಟ್ಸ್‌ಮನ್ ಹನುಮವಿಹಾರಿ ಅವರನ್ನು ಕಣಕ್ಕಿಳಿಸುವ ಬಗ್ಗೆ ತಂಡವು ಏಕೆ ಚಿತ್ತ ಹರಿಸುತ್ತಿಲ್ಲ? ಗಾಯದಿಂದ ಚೇತರಿಸಿಕೊಂಡಿರುವ ಮಯಂಕ್ ಅಗರವಾಲ್ ಕೂಡ ಅವಕಾಶಕ್ಕಾಗಿ ಕಾದಿದ್ದಾರೆ. ಕ್ರಿಕೆಟಿಗರು ಒಂದು ಹಂತದಲ್ಲಿ ಲಯ ಕಳೆದುಕೊಳ್ಳುವುದು ಸಹಜ. ಕೋವಿಡ್ ಕಾಲಘಟ್ಟದಲ್ಲಿ ನಿರಂತರ ವೈಫಲ್ಯವು ಮಾನಸಿಕ ಒತ್ತಡ ಹೆಚ್ಚಿಸುತ್ತದೆ. ಅದು ದೈಹಿಕ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು. ಆದರೆ, ಬೌಲಿಂಗ್ ವಿಭಾಗದಲ್ಲಿ ಬದಲಾವಣೆ ಮಾಡುವಲ್ಲಿ ಇರದ ಹಿಂಜರಿಕೆ ಬ್ಯಾಟಿಂಗ್‌ನಲ್ಲಿ ಯಾಕೆ?

ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಅಸ್ಥಿರತೆಗೆ ಪರಿಹಾರ ಕಂಡುಹಿಡಿಯುವುದೂ ಅವಶ್ಯಕ. ಇಂತಹ ಸಂದರ್ಭದಲ್ಲಿ ತಂಡದೊಳಗೇ ಇರುವ 'ಪ್ರತಿಭಾ ಸಂಪನ್ಮೂಲ'ವನ್ನು ಸೂಕ್ತವಾಗಿ ಬಳಸಿಕೊಳ್ಳುವುದು ಜಾಣತನ. ಇನ್ನೂ ಎರಡು ವರ್ಷಗಳ ಕಾಲ ನಡೆಯಲಿರುವ ಈ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ತಂಡದಲ್ಲಿ ಸಮತೋಲನ ಕಾಪಾಡಲು ಸಕಾರಾತ್ಮಕ ಪ್ರಯೋಗಗಳು ಅವಶ್ಯಕ. ಕಳೆದ ಡಿಸೆಂಬರ್-ಜನವರಿಯಲ್ಲಿ ಆಸ್ಟ್ರೇಲಿಯಾದಲ್ಲಿ ಐತಿಹಾಸಿಕ ಸರಣಿ ಜಯ ಸಾಧಿಸಿದ ತಂಡದಲ್ಲಿ 'ಬೆಂಚ್ ಶಕ್ತಿ'ಯೇ ವಿಜೃಂಭಿಸಿತ್ತು ಎಂಬುದನ್ನು ಮರೆಯಬಾರದಲ್ಲವೇ?



ಚುರುಮುರಿ



ಭಾಷಾ ಗಣತಿ

• ಆನಂದ

'ಜಾತಿ ಗಣತಿ ಆಗಲಿಲ್ಲ' ಹೆಂಡತಿ ಅಂದಳು. 'ಆಗಿದೆ ವರದಿ ಹೊರಬಿದ್ದಿಲ್ಲ' ಎಂದೆ. 'ಆದರೆ ಇಲ್ಲಿ ನೋಡಿ ಭಾಷೆ ಗಣತಿ ಆಗಿದೆ' ಎಂದು ಒಂದು ಬ್ರೇಕಿಂಗ್ ನ್ಯೂಸ್ ಕೊಟ್ಟಳು.

'ಭಾಷೆ ಗಣತಿ? ಯಾವ ಸ್ವಾಮೀಜಿಗಳಾಗಲೀ ಜಗದ್ಗುರುಗಳಾಗಲೀ ಡಿಮ್ಯಾಂಡ್ ಮಾಡಿದಂತಿಲ್ಲವಲ್ಲ' ಎಂದೆ ತುಸು ಗೊಂದಲಕ್ಕೊಳಗಾಗಿ.

'ನಿಜ, ಆದರೆ ಕೆಲವು ಸಂಶೋಧಕರು 2011ರ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಭಾಷಾ ಗಣತಿ ಮಾಡಿ, ಯಾವ ಯಾವ ನಗರದಲ್ಲಿ ಯಾವ ಯಾವ ಭಾಷೆ ಮಾತನಾಡುವವರು ಎಷ್ಟೆಷ್ಟು ಮಂದಿ ಇದ್ದಾರೆ ಎಂದು ಲೆಕ್ಕ ಹಾಕಿದ್ದಾರೆ. ಅದರ ಪ್ರಕಾರ, ಕೆಂಪೇಗೌಡ ಅಂದು ನಿರ್ಮಿಸಿದ ಇಂದಿನ ಬೆಂಗಳೂರಿನಲ್ಲಿ ಒಟ್ಟು 107 ಭಾಷೆಗಳು ಚಾಲ್ತಿಯಲ್ಲಿವೆ ಎಂದು ಕಂಡುಬಂದಿದೆ' ಎಂದಳು.

'ಕನ್ನಡಾನೂ ಇದೆ ತಾನೆ?' ಎಂದು ಕೇಳಿದೆ.

'ಇದೇರಿ, ಶೇ 45ರಷ್ಟು ಜನ ಬರೀ ಕನ್ನಡವನ್ನೇ ಮಾತನಾಡುತ್ತಾರಂತೆ ಬೆಂಗಳೂರಿನಲ್ಲಿ'.

'ಅದು ಉತ್ಪ್ರೇಕ್ಷೆ ಅಂತ ಅನಿಸುವುದಿಲ್ಲವೆ ನಿನಗೆ?' ಎಂದು ಕೇಳಿದೆ. 'ಯಾಕ್ರೀ?' ಎಂದಳು.

'ರಸೆಲ್ ಮಾರ್ಕೆಟ್‌ನಲ್ಲಿ ಕತ್ರಿಕಾಯಿ ಪತ್ತು ರೂಪಾಯಿ ಎಂದು ಕೂಗುವುದು ಕೇಳಿಲ್ಲವೆ? ಕನ್ನಡ ಟೀವಿ ಅಡುಗೆ ಕಾರ್ಯಕ್ರಮದಲ್ಲಿ ಒಂದು ಸ್ಪೂನ್ ಸಾಲ್ಟ್, ನಾಲ್ಕು ಸ್ಮಾಲ್ ಪೀಸ್ ಆನಿಯನ್, ಸ್ವಲ್ಪ ಕೊರಿಯಾಂಡರ್ ಲೀವ್ಸ್ ಹಾಕಿ ಗಾರ್ನಿಷ್ ಮಾಡಿ ಎಂದೆಲ್ಲಾ ಪ್ಯೂರ್ ಕನ್ನಡದಲ್ಲೇ ಮಾತನಾಡ್ತಾರೆ. ಮೊನ್ನೆ ಕೈಗಾಡೀಲಿ ಕೊತ್ತಂಬರಿ ಸೊಪ್ಪು 1 kat 10 ರುಪೀಸ್ ಎಂಬ ದ್ವಿಭಾಷಾ ಬೋರ್ಡ್ ನೋಡಿದೆ' ಎಂದೆ.

'ನೀವು ಸಿನಿಕಲ್' ಎಂದಳು.

'ಅಂದಹಾಗೆ ಜನ ಗಣತಿ ಯಾವ ವರ್ಷದ್ದು?'

'2011ರದ್ದು' ಎಂದಳು. 'ಹತ್ತು ವರ್ಷ ಹಳೆಯದು. ಆಗಲೇ ಶೇ 45ರಷ್ಟು ಇದ್ದಿದ್ದರೆ ಈಗ ಅದು ಖಂಡಿತ ಇನ್ನೂ ಕೆಳಗೆ ಇಳಿದಿರುತ್ತದೆ. ಕನ್ನಡಿಗರ ಸಂಖ್ಯೆ ಸತತವಾಗಿ ಹೆಚ್ಚಲು ಅದೇನು ಪೆಟ್ರೋಲ್ ಬೆಲೆಯೇ? ಎಂದೆ.

'ಹಾಗಾದರೆ ಈಗ ಎಷ್ಟಿರಬಹುದು?'

'ಈಗೊಂದು ಭಾಷಾ ಗಣತಿ ಮಾಡಿದರೆ ಬೆಂಗಳೂರಿನಲ್ಲಿ ಎಷ್ಟು ಮಂದಿ ಕನ್ನಡ ಮಾತನಾಡುವವರು ಇದ್ದಾರೆ ಎಂದು ತಿಳಿಯಬಹುದು' ಎಂದೆ.

ಸಂಗತ

ಕಿವಿಯಾಗಬೇಕಿದೆ ಮನದಾಳದ ಮಾತಿಗೆ

ಮಕ್ಕಳು ಕೋವಿಡ್ ಕಾಲದಲ್ಲಿನ ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣವನ್ನು ಶಿಕ್ಷಕರು ಶಾಲೆಯಲ್ಲಿ ಸೃಷ್ಟಿಸುವ ಮೂಲಕ ಭಾವನಾತ್ಮಕ ಭದ್ರತೆ ಕಲ್ಪಿಸಬೇಕಾಗಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಕೋವಿಡ್ ತೀವ್ರಗತಿಯಲ್ಲಿದ್ದ ಕಾಲಘಟ್ಟದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ವಿಭಿನ್ನ ರೀತಿಯ ಸನ್ನಿವೇಶದಲ್ಲಿ ಆತಂಕ, ಒತ್ತಡಗಳನ್ನು ಎದುರಿಸಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಒಡನಾಟ, ಸಂವಾದ, ಸಂವಹನಗಳ ಮೂಲಕ ಕಲಿಸಲಾಗದೆ ಅನಿವಾರ್ಯವಾಗಿ ನೂತನ ತಂತ್ರಜ್ಞಾನಕ್ಕೆ ತಮ್ಮನ್ನು ತಾವು ತೆರೆದುಕೊಂಡು ಬೋಧಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಶಿಕ್ಷಕರ ನೇರ ಬೋಧನೆಯ ಜೊತೆ ಗೆಳೆಯರೊಂದಿಗೆ ಆಟ, ವಿನೋದಗಳ ಮೂಲಕ ಸಹಜವಾಗಿ ಆಗುತ್ತಿದ್ದ ಸಾಮಾಜೀಕರಣದಿಂದ ವಂಚಿತರಾಗಿದ್ದ ವಿದ್ಯಾರ್ಥಿಗಳು ಮನೆಯಿಂದ ಹೊರಬರದೆ ಮೊಬೈಲ್, ಲ್ಯಾಪ್‌ಟಾಪ್, ದೂರದರ್ಶನದಂತಹ ಮಾಧ್ಯಮಗಳ ಮೂಲಕ ಕಲಿಯುವ ಒತ್ತಡದಲ್ಲಿದ್ದರು.

ದೀರ್ಘಕಾಲದ ಬಿಡುವಿನ ನಂತರ ಇದೀಗ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳು ಮರು ಪ್ರಾರಂಭವಾಗಿವೆ. ಇಂತಹ ಸಂದರ್ಭದಲ್ಲಿ, ಈವರೆಗೆ ಶಿಕ್ಷಕರು ತಾವು ನಿರ್ವಹಿಸುತ್ತಿದ್ದ ಪಾತ್ರಗಳಲ್ಲಿ ಕಂಡುಕೊಳ್ಳಬಹುದಾದ ಬದಲಾವಣೆಗಳು ಮುಖ್ಯ ಪಾತ್ರ ವಹಿಸುತ್ತವೆ.

ಕೋವಿಡ್ ಕಾಲದಲ್ಲಿ ತಂತ್ರಜ್ಞಾನದ ವಿವಿಧ ಸಾಧನಗಳನ್ನು ಬಳಸಿ, ಆನ್‌ಲೈನ್ ಮೂಲಕ ಪಾಠ ಬೋಧನೆ ಮಾಡಲು ಶಿಕ್ಷಕರು ಕಲಿತಿದ್ದಾರೆ. ವಿವಿಧ ಕಲಿಕಾಂಶಗಳಿಗೆ ಸಂಬಂಧಿಸಿದಂತೆ ಅನೇಕ ಶಿಕ್ಷಕರು ವಿಡಿಯೊಗಳನ್ನು ಸೃಜಿಸಿ, ಅವುಗಳಿಗೆ ಅಗತ್ಯವಾದ ಚಿತ್ರ, ಪೂರಕ ಮಾಹಿತಿ ಸೇರಿಸಿ, ಅನಿಮೇಶನ್ ಅಳವಡಿಸಿ, ಎಡಿಟ್ ಮಾಡಿ, ತಮ್ಮದೇ ಯುಟ್ಯೂಬ್ ಚಾನೆಲ್‌ಗಳಲ್ಲಿ ಅವುಗಳನ್ನು ಅಪ್‌ಲೋಡ್ ಮಾಡುತ್ತಿದ್ದಾರೆ. ಪಾಠಕ್ಕೆ ಪೂರಕವಾಗಿ ಅಂತರ್ಜಾಲದಲ್ಲಿ ಲಭ್ಯವಿರುವ ಅನೇಕ ಚಿತ್ರ, ಆಡಿಯೊ, ವಿಡಿಯೊ ಸಂಪನ್ಮೂಲಗಳ ಹುಡುಕಾಟ ನಡೆಸಿ, ತಮ್ಮ ಆನ್‌ಲೈನ್ ತರಗತಿಗಳಿಗೆ ಬಳಸುವುದನ್ನು ಕಲಿತಿದ್ದಾರೆ. ಶಿಕ್ಷಣ ಇಲಾಖೆ ವತಿಯಿಂದ ಪ್ರಸಾರವಾಗುವ ದೂರದರ್ಶನ ಪಾಠಗಳನ್ನು ವೀಕ್ಷಿಸಿ, ಅವುಗಳಲ್ಲಿರುವ ಉತ್ತಮ ಅಂಶಗಳನ್ನು ತಮ್ಮ ಪಾಠಗಳಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಶಿಕ್ಷಕರು ಬೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ತರಗತಿಯಾಚೆ ಗಮನಿಸಿ, ತಮ್ಮ ಕಲಿಕೆಯ ಪರಿಧಿಯನ್ನು ಹಿಗ್ಗಿಸಿಕೊಳ್ಳಲು ಅವಕಾಶ ದೊರೆತಿದೆ.

ಕೋವಿಡ್ ಕಾಲದಲ್ಲಿ ಶಿಕ್ಷಕರಲ್ಲಿ ಆದ ಈ ಕಲಿಕೆಯು ಅವರು ವಿದ್ಯಾರ್ಥಿಗಳಿಗೆ ಕೈಗೊಳ್ಳುವ ನೇರ ತರಗತಿಗಳನ್ನು ಸಂಪದ್ಭರಿತಗೊಳಿಸಲು ನೆರವಾಗಲಿದೆ. ಇದರ ಜೊತೆ ವಿದ್ಯಾರ್ಥಿಗಳು ಸಹ ಶಿಕ್ಷಣಕ್ಕೆ ಪೂರಕವೆನಿಸುವ ಅನೇಕ ಕೌಶಲಗಳನ್ನು ಕಲಿತು ಬಂದಿರುತ್ತಾರೆ. ಕೋವಿಡ್ ಸನ್ನಿವೇಶದಲ್ಲಿ ಆದ ಕಲಿಕೆಯ ನಷ್ಟವನ್ನು ಮಾತ್ರ ಅಂದಾಜಿಸದೆ ವಿದ್ಯಾರ್ಥಿಗಳು ಈ ಅವಧಿಯಲ್ಲಿ ಕಟ್ಟಿಕೊಂಡಿರುವ ಅನುಭವಗಳ ಆಧಾರದ ಮೇಲೆ ಶಿಕ್ಷಕರು ತಮ್ಮ ತರಗತಿಗಳ ಬೋಧನೆಯನ್ನು ರೂಪಿಸಬೇಕಾಗಿದೆ.

ಅನೇಕ ಕುಟುಂಬಗಳು ಕೋವಿಡ್ ಕಾರಣದಿಂದ ಕುಟುಂಬ ಸದಸ್ಯರ ಅನಾರೋಗ್ಯ, ಸಾವು, ಉದ್ಯೋಗ ನಷ್ಟ, ಆರ್ಥಿಕ ಸಂಕಷ್ಟ, ಏಕಾಂಗಿತನ, ಮಾನಸಿಕ ಆಘಾತದಂತಹ ಸಮಸ್ಯೆಗಳಿಂದ ತೊಂದರೆಗೀಡಾಗಿರುವ ಸಾಧ್ಯತೆಗಳಿರುತ್ತವೆ. ಇಂತಹ ಕುಟುಂಬಗಳಿಂದ ಶಾಲೆಗೆ ಹಾಜರಾಗುವ ಅನೇಕ ವಿದ್ಯಾರ್ಥಿಗಳ ಜೊತೆ ಶಿಕ್ಷಕರು ಭಾವನಾತ್ಮಕವಾಗಿ ಸ್ಪಂದಿಸುವ ಅಗತ್ಯವಿದೆ. ಈ ಅಂಶಗಳನ್ನು ಶಿಕ್ಷಕರು ಅರ್ಥ ಮಾಡಿಕೊಂಡು, ಅಂತಹ ಮಕ್ಕಳೊಂದಿಗೆ ಸೂಕ್ಷ್ಮವಾಗಿ ಒಡನಾಡುವ ಅಗತ್ಯವಿದೆ.

ಕೋವಿಡ್ ಕಾಲದಲ್ಲಿ ಮಕ್ಕಳು ಓದಿದ ಪುಸ್ತಕಗಳು, ದಕ್ಕಿಸಿಕೊಂಡ ಅನುಭವಗಳು, ಅನುಭವಿಸಿದ ಸಂತಸ, ಸಂಕಟ, ಸಮಸ್ಯೆಗಳ ಕುರಿತಾದ ವಿಷಯಗಳನ್ನು ಮಕ್ಕಳು ತಾವಾಗಿಯೇ ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಾಗುವ ವಾತಾವರಣವನ್ನು ಶಿಕ್ಷಕರು ತರಗತಿಯಲ್ಲಿ ಸೃಷ್ಟಿಸಬೇಕು. ಮಕ್ಕಳ ಮಾತುಗಳಿಗೆ ಶಿಕ್ಷಕರು ಕಿವಿಯಾಗಬೇಕು. ಹಂಚಿಕೊಳ್ಳಲು ಇಚ್ಛಿಸದ ಮಕ್ಕಳನ್ನು ಗುರುತಿಸಿ, ಅವರ ಮೌನವನ್ನೂ ಗೌರವಿಸಬೇಕು. ಶಿಕ್ಷಕರು ತೋರುವ ಇಂತಹ ಅನುಭೂತಿಯು ಮಕ್ಕಳಲ್ಲಿ ಭಾವನಾತ್ಮಕ ಭದ್ರತೆ ಹೊಂದುವಂತೆ ಮಾಡುತ್ತದೆ. ಇದರ ಜೊತೆ ಮಕ್ಕಳಿಗೆ ತಮ್ಮ ಶಾಲೆಯ ಮೇಲೆ ಪ್ರೀತಿ, ವಿಶ್ವಾಸ ಹಾಗೂ ಭರವಸೆಗಳು ಮೂಡುತ್ತವೆ. ಇದು ಅವರ ಶಾಲಾ ಜೀವನವನ್ನು ಮುಂದುವರಿಸಲು ಅಗತ್ಯವಾದ ಚೈತನ್ಯವನ್ನು ಅವರಿಗೆ ನೀಡುತ್ತದೆ.



ಶಾಲೆಗಳು ದೀರ್ಘ ಅವಧಿಯ ಬಿಡುವಿನ ನಂತರ ಪ್ರಾರಂಭವಾಗಿವೆ. ಹೀಗಾಗಿ, ವಿದ್ಯಾರ್ಥಿಗಳಲ್ಲಿರುವ ಕಲಿಕೆಯ ಅಂತರವನ್ನು ಸರಿದೂಗಿಸಲು ಶಿಕ್ಷಕರು ಸಹಜವಾಗಿ ಅವರ ಕಲಿಕಾ ಮಟ್ಟ ಅಳೆಯಲು ಪರೀಕ್ಷೆ ಮಾಡುವುದು ಹಾಗೂ ಪಠ್ಯಾಂಶ ಬೋಧನೆಗೆ ಹೆಚ್ಚು ಒತ್ತು ನೀಡುತ್ತಾರೆ. ಈ ಪ್ರಕ್ರಿಯೆಯಿಂದ ಮಕ್ಕಳಲ್ಲಿ ಕಲಿಕೆಯೆಡೆ ನಿರಾಸಕ್ತಿಯ ಭಾವ, ಆತಂಕ, ಒತ್ತಡಗಳು ಉಂಟಾಗಬಹುದು. ಈ ಹಿನ್ನೆಲೆಯಲ್ಲಿ ಹಾಡು, ಕತೆ, ಕವಿತಾ ವಾಚನ, ನಾಟಕ, ಪ್ರಶ್ನೆ, ಸಂವಾದ, ಯೋಜನಾ ಕಾರ್ಯ, ರಸಪ್ರಶ್ನೆ, ವೈಜ್ಞಾನಿಕ ಪ್ರಯೋಗ ಹಾಗೂ ಇತರ ಪ್ರಾಯೋಗಿಕ ಚಟುವಟಿಕೆ, ಬರವಣಿಗೆ, ಓದುವ ಅಭ್ಯಾಸಗಳಲ್ಲಿ ಮಕ್ಕಳನ್ನು ನಿಧಾನವಾಗಿ ತೊಡಗಿಸಿಕೊಳ್ಳುವ ಕಾರ್ಯ ಮಾಡಬೇಕು.

ವಿದ್ಯಾರ್ಥಿಗಳು ಹಂತ ಹಂತವಾಗಿ ಖುಷಿ, ಸಂತಸ, ಆಸಕ್ತಿಗಳಿಂದ ಕಲಿಕೆಯೆಡೆಗೆ ಸಾಗುವಂತೆ ಕಾರ್ಯತಂತ್ರ, ಚಟುವಟಿಕೆಗಳನ್ನು ಶಿಕ್ಷಕರು ರೂಪಿಸಿ, ಮುನ್ನಡೆಯುವ ಅಗತ್ಯ ಇದೆ.

ಕೋವಿಡ್ ಸನ್ನಿವೇಶವು ಮಕ್ಕಳ ಸಾಮಾಜಿಕ ಬೆಳವಣಿಗೆಗೆ ಬಹು ದೊಡ್ಡ ಪೆಟ್ಟು ನೀಡಿದೆ. ವಿದ್ಯಾರ್ಥಿಗಳು ದೈಹಿಕ ಅಂತರವನ್ನು ಕಾಯ್ದುಕೊಳ್ಳುತ್ತಲೇ ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸ್ಪಂದಿಸುತ್ತಾ ಸಹಪಾಠಿಗಳ ಜೊತೆ ಒಡನಾಡುವಂತೆ ಮಾಡಬೇಕಿದೆ. ತರಗತಿಗಳು ಹೆಚ್ಚು ಹೆಚ್ಚು ಸಂವೇದನಾಶೀಲವಾಗುವಂತೆ ರೂಪಿಸುವ ಜರೂರಿದೆ.

ವಾಚಕರ ವಾಣಿ

ತಿಳಿದೂ ತಪ್ಪು ಮಾಡಿದರೆ ಕ್ಷಮೆ ಯಾಕೆ?

ರಾಜ್ಯ ಸರ್ಕಾರವು ಆನ್‌ಲೈನ್ ಜೂಜನ್ನು 'ಕರ್ನಾಟಕ ಪೊಲೀಸ್ ಕಾಯ್ದೆ- 1963'ಕ್ಕೆ ತಿದ್ದುಪಡಿ ತರುವ ಮೂಲಕ ನಿಷೇಧಿಸಲು ಮುಂದಾಗಿರುವುದು ಸ್ವಾಗತಾರ್ಹ ನಿರ್ಧಾರ. ಇದರಿಂದ ಎಷ್ಟೋ ಜನ ಬೀದಿಗೆ ಬೀಳುವುದು, ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪಬಹುದು. ಮೊದಲ ಬಾರಿ ಸಿಕ್ಕಿಬಿದ್ದರೆ ಆರು ತಿಂಗಳು ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ ವಿಧಿಸಲು ತೀರ್ಮಾನಿಸಲಾಗಿದೆ. ಆದರೆ ಮೊದಲ ಬಾರಿ ಸಿಕ್ಕಿಬಿದ್ದರೆ ವಿನಾಯಿತಿ ಇದೆ ಎನ್ನುವ ಕಾರಣಕ್ಕೆ ಹಳೆ ಚಾಳಿ ಮುಂದುವರಿಸುವ ಸಾಧ್ಯತೆಯಿದೆ. ಆನ್‌ಲೈನ್‌ನಲ್ಲಿ ಜೂಜಾಡುವವರು ಅನಕ್ಷರಸ್ಥರಲ್ಲ. ಹಾಗಾಗಿ ಅವರಿಗೆ ಯಾವುದೇ ವಿನಾಯಿತಿ ನೀಡುವುದು ಸೂಕ್ತವಲ್ಲ. ಏಕೆಂದರೆ, ತಪ್ಪೆಂದು ತಿಳಿದೂ ಮಾಡಿದ ಮೇಲೆ ಯಾರೂ ಕ್ಷಮೆಗೆ ಅರ್ಹರಲ್ಲ.

ಪುನೀತ್ ಕುಮಾರ್ ಎ.ಆರ್., ಉಜಿರೆ

ಜಿಎಸ್‌ಟಿಯಿಂದ ಹೊರಗಿಟ್ಟರೆ ಉತ್ತಮ

ಲೇಖಕ ಜಿ.ಎನ್.ರಂಗನಾಥ ರಾವ್ ಅವರು ಉಲ್ಲೇಖಿಸಿರುವಂತೆ (ವಾ.ವಾ., ಸೆ. 6) ಲೇಖಕ, ಪ್ರಕಾಶಕರಿಗೆ ಜಿಎಸ್‌ಟಿ ವಿಧಿಸುವ ಕ್ರಮ ಸರಿಯಾದುದಲ್ಲ. ಪುಸ್ತಕೋದ್ಯಮವನ್ನು ವೃತ್ತಿಯಾಗಿಸಿಕೊಂಡವರಿಗೆ ಜಿಎಸ್‌ಟಿ ವಿಧಿಸಿದರೆ ತಪ್ಪೇನೂ ಇಲ್ಲ. ಆದರೆ ಇಡೀ ರಾಜ್ಯದಲ್ಲಿ ಅಂಥ ವೃತ್ತಿಪರ ಪ್ರಕಾಶಕರು ಇರುವುದು ಬೆರಳೆಣಿಕೆಯಷ್ಟು ಮಾತ್ರ. ಹೇಳಿ ಕೇಳಿ ಪುಸ್ತಕೋದ್ಯಮದ ಪರಿಸ್ಥಿತಿ ತೀರಾ ಹೇಳಿಕೊಳ್ಳುವಂಥ ಸ್ಥಿತಿಯಲ್ಲಿ ಇಲ್ಲ. ಪುಸ್ತಕ ಪ್ರಕಟಿಸುವ ಹವ್ಯಾಸ ಇರುವವರಿಗೆ ಜಿಎಸ್‌ಟಿ ಮಾರಕ. ಅಷ್ಟೇ ಅಲ್ಲ ಕೆಲವೊಮ್ಮೆ ಹಾಕಿದ ಬಂಡವಾಳವೂ ವಾಪಸು ಬರುವ ಖಾತರಿ ಇರುವುದಿಲ್ಲ. ಕೆಲವಾರು ಸಂದರ್ಭಗಳಲ್ಲಿ ಲೇಖಕನ ಒತ್ತಾಯಕ್ಕೆ ಮಣಿದು ಪುಸ್ತಕವನ್ನು ಪ್ರಕಟಿಸಿ ಬಿಡುಗಡೆಗೊಳಿಸಿ ಮಾರುಕಟ್ಟೆಯಲ್ಲಿ ಪುಸ್ತಕದ ಬೇಡಿಕೆ ಇಲ್ಲದೆ, ಇತ್ತ ಹಾಕಿದ ಬಂಡವಾಳವೂ ವಾಪಸು ಬರದೆ ನಷ್ಟ ಅನುಭವಿಸುವ ಸಂದರ್ಭವೂ ಬರದೇ ಇರದು. ಒಟ್ಟಾರೆ ಪ್ರಕಾಶಕ, ಲೇಖಕರನ್ನು ಜಿಎಸ್‌ಟಿಯಿಂದ ಹೊರಗಡೆ ಇಟ್ಟರೆ ಉತ್ತಮ.

ಸಿರಿಗೇರಿ ಯರಿಸ್ವಾಮಿ, ಬಳ್ಳಾರಿ

ಓದುವ ಸಂಸ್ಕೃತಿ ಬೆಳೆಯಲಿ

ಡಾ. ಹಾ.ಮಾ.ನಾಯಕರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಯೋಜನೆಯೊಂದನ್ನು ರೂಪಿಸಿದ್ದರು. ಅದರಂತೆ, ವೃತ್ತಪತ್ರಿಕೆ ಮತ್ತು ನಿಯತಕಾಲಿಕಗಳಲ್ಲಿ ವರ್ಷಪೂರ್ತಿ ಪ್ರಕಟವಾಗುತ್ತಿದ್ದ ಕಾವ್ಯ, ಸಣ್ಣಕಥೆ, ವಿಮರ್ಶೆ, ಪ್ರಬಂಧ, ವಿನೋದ, ವಿಜ್ಞಾನ, ಮಕ್ಕಳ ಸಾಹಿತ್ಯದಂತಹ ಬರಹಗಳನ್ನು ಒಟ್ಟುಗೂಡಿಸಲು, ಬರಹಗಾರರೊಬ್ಬರಿಗೆ ಸಂಪಾದನೆಯ ಕೆಲಸ ವಹಿಸಿ ಅದನ್ನು ಅಕಾಡೆಮಿಯ ಪ್ರಕಾಶತ್ವದ ಅಡಿಯಲ್ಲಿ ಪ್ರಕಟಿಸುತ್ತಿದ್ದರು. ಈ ಯೋಜನೆ ಕೆಲವು ವರ್ಷಗಳವರೆಗೆ ಜಾರಿಯಲ್ಲಿತ್ತು. ನಂತರದ ದಿನಗಳಲ್ಲಿ ಕಾಣೆಯಾಯಿತು. ಪ್ರಸ್ತುತ ಅಕಾಡೆಮಿಯ ಅಧ್ಯಕ್ಷರು ಈ ಯೋಜನೆಯನ್ನು ಮತ್ತೆ ಕೈಗೆತ್ತಿಕೊಳ್ಳಬಹುದೇ? ಅಕ್ಷರಗಳು ಯಾವುದೋ ಒಂದು ಮೂಲೆ ಸೇರುವ ಬದಲು ಕೃತಿಯ ರೂಪ ಪಡೆಯಲಿ, ಬರಹ ಉಳಿಯಲಿ, ಓದುವ ಸಂಸ್ಕೃತಿ ಬೆಳೆಯಲಿ.

ಮಹಾಂತೇಶ ಹೊದ್ಲೂರ, ಬಾಗಲಕೋಟೆ

ಯಾತ್ರಿಗಳಿಗಷ್ಟೇ ಸೀಮಿತವಲ್ಲ ಮಥುರಾ

ಮಥುರಾವನ್ನು ಬರೀ ಭಕ್ತ ಯಾತ್ರಿಗಳಿಗೆ ಸೀಮಿತವಾದ ನಗರವೆಂದು ಗಣಪತಿ ಶಿರಳಗಿ ಅವರು (ವಾ.ವಾ., ಸೆ. 6) ಭಾವಿಸಿದಂತಿದೆ. ಆದರೆ ಮಥುರೆಯಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಮಂದಿ ವಾಸಿಸುತ್ತಿದ್ದಾರೆ. ಇವರಲ್ಲಿ ಬಹುತೇಕರು ಮಾಂಸಾಹಾರಿಗಳು. ಹಾಗೆಯೇ ಇನ್ನು ಕೆಲವರು ಮಾಂಸ, ಮದ್ಯ ಹಾಗೂ ಇವಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ನಿರತರಾಗಿರುವವರು. ಇವರ ಆಹಾರ ಪದ್ಧತಿಯನ್ನು, ಉದ್ಯೋಗವನ್ನು ಬಲವಂತದಿಂದ ಬದಲಾಯಿಸುವುದು ಫ್ಯಾಸಿಸ್ಟ್ ಧೋರಣೆಯಲ್ಲದೆ ಮತ್ತಿನ್ನೇನು? ಮಥುರಾ ಪ್ರವಾಸ ಕೈಗೊಳ್ಳುವ ಭಕ್ತರು ಕೆಲವು ದಿನ ಮಾತ್ರ ಮದ್ಯ, ಮಾಂಸಗಳಿಂದ ದೂರವುಳಿದು, ಪ್ರವಾಸದ ಬಳಿಕ ಗಣಪತಿ ಅವರು ಕರೆದಿರುವಂತೆ ಈ 'ದುಶ್ಚಟ'ಗಳನ್ನು ಪುನರಾರಂಭಿಸಬಹುದು. ಆದರೆ ಇವರಿಗೆ ಕಿರಿಕಿರಿಯಾಗದಿರಲೆಂದು ಹಲವು ಮಥುರಾ ನಿವಾಸಿಗಳ ಆಹಾರ ಪದ್ಧತಿಯನ್ನೇ ಜೀವನಪರ್ಯಂತ ಬದಲಿಸುವ ಸರ್ಕಾರದ ನಿರ್ಧಾರ ವಿಚಿತ್ರ ಜಗತ್ತಿನಲ್ಲಿ ಮಾತ್ರ ಸರಿಯೆನಿಸಲು ಸಾಧ್ಯ.

ಸುನೀಲ ನಾಯಕ, ಬೆಂಗಳೂರು

ದೇಶದಲ್ಲಿ ಪ್ರೋತ್ಸಾಹ ಸಿಗುತ್ತಿಲ್ಲವೇಕೆ?

'ಎಲ್ಲಿ ಹೋದರು ನಮ್ಮ ಚಿನ್ನದ ಹುಡುಗಿಯರು' ಎಂಬ ಡಾ. ಅನುಪಮಾ ಎಚ್.ಎಸ್. ಅವರ ಲೇಖನ (ಪ್ರ.ವಾ., ಸೆ. 6) ಮಹಿಳೆಯರ ವಾಸ್ತವಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತಿದೆ. ಇಲ್ಲಿ ಅನುಪಮಾ ಕೂಗು ತಳಮಳದ್ದು, ಅಂತಃಕರಣದ್ದು. ಲೇಖನದ ಈ ತಲೆಬರಹವನ್ನು ಓದಿದ ಕ್ಷಣ ನನ್ನ ಮನಸ್ಸು ಪ್ರವೇಶಿಸಿದ್ದು, ಮೊನ್ನೆ ಮೊನ್ನೆ ಜಪಾನಿನಲ್ಲಿ ಸಮಾಪನಗೊಂಡ ಒಲಿಂಪಿಕ್ಸ್ ಕ್ರೀಡಾಕೂಟವನ್ನು. ಹಾಗೆಯೇ ಈ ಕ್ರೀಡಾಕೂಟದ ಹಿಂದಿನ ಪುಟಗಳನ್ನು ತೆಗೆದುನೋಡಿದೆ. ಕಳೆದ ಎರಡು ದಶಕಗಳಲ್ಲಿ ಕೇವಲ ಏಳು ಜನ ಭಾರತೀಯ ಮಹಿಳೆಯರು ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಗೆದ್ದು ತಂದದ್ದು ಒಟ್ಟು ಎರಡು ಬೆಳ್ಳಿ, 6 ಕಂಚಿನ ಪದಕಗಳನ್ನು. ನಮ್ಮ ಪರಿಸರದಲ್ಲಿಯ ಹಲವು ಅಭಾವಗಳ ನಡುವೆಯೂ ಈ ಹೆಣ್ಣುಮಕ್ಕಳು ತಂದಿದ್ದಾರಲ್ಲಾ ಪದಕಗಳನ್ನು ಎಂದು ಮನಸ್ಸಿನಲ್ಲಿಯೇ ಅವರಿಗೆ 'ಶಹಬ್ಬಾಸ್' ಹೇಳಿದೆ.

ಇವರನ್ನು ಹಿಂದುಳಿದವರೆಂದು ನಾವು ಗುರುತಿಸುತ್ತೇವೆ. ಕೆನ್ಯಾ, ಇಥಿಯೋಪಿಯಾ, ನೈಜೀರಿಯಾ, ಮೊರೊಕ್ಕೊದಂಥ ಆಫ್ರಿಕನ್ ದೇಶದ ಆಟಗಾರ್ತಿಯರು ಗೆದ್ದುಕೊಂಡಿದ್ದಾರೆ ಬಂಗಾರ, ಬೆಳ್ಳಿ, ಕಂಚಿನ ಪದಕಗಳ ಸರಮಾಲೆಯನ್ನು! ಜನಸಂಖ್ಯೆಯಲ್ಲಿ ನಮ್ಮದು ಎರಡನೆಯ ಸ್ಥಾನ. ದೇಶದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರು ಇದ್ದಾಗಲೂ ಒಲಿಂಪಿಕ್ಸ್‌ನಂಥ ವಿಶ್ವ ಮಟ್ಟದ ಆಟೋಟ ಸ್ಪರ್ಧೆಗಳಿಂದ ಏಕೆ ಹಿಂದೆ ಸರಿದಿದ್ದಾರೆ? ವಿಶ್ವವಿದ್ಯಾಲಯಗಳಲ್ಲಿ ಇವರು ಬಂಗಾರದ ಪದಕಗಳನ್ನು ಬಾಚಿಕೊಂಡಿದ್ದಾರೆ. ಆದರೆ ಇಂಥ ಆಟೋಟಗಳಿಗೆ ನಮ್ಮ ದೇಶದಲ್ಲಿ ಪ್ರೋತ್ಸಾಹವೇಕೆ ಸಿಗುತ್ತಿಲ್ಲ? ಆಧುನಿಕ ಜಗತ್ತಿನಲ್ಲಿ ಒಲಿಂಪಿಕ್ಸ್ ವೇದಿಕೆಯ ಮೇಲೆ ನಮ್ಮ ಹುಡುಗಿಯರು ಭಾರತದ ಪತಾಕೆಯನ್ನು ಏಕೆ ಹಾರಿಸಲು ಸಾಧ್ಯವಾಗಿಲ್ಲ? ಈ ಪ್ರಶ್ನೆಗಳಿಗೆ ಉತ್ತರಿಸಬೇಕಾದವರು ನಮ್ಮನ್ನಾಳುವ ಜನನಾಯಕರು, ಶಿಕ್ಷಣ ತಜ್ಞರು, ಸಮಾಜಸೇವಕರು, ಮಹಿಳಾ ಪ್ರತಿನಿಧಿಗಳು, ಶಿಕ್ಷಕರು, ಪಾಲಕರು ಹಾಗೂ ಸ್ವತಃ ಮಹಿಳೆಯರು ಕೂಡಾ!

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಗತ್ಯ ಇರುವಷ್ಟು ಉದ್ಯೋಗಗಳನ್ನು ಒದಗಿಸಿಲ್ಲ ಎಂಬುದು ಮಾತ್ರ ಉದಾರೀಕರಣದ ಸಮಸ್ಯೆ ಅಲ್ಲ. ಸೃಷ್ಟಿಯಾದ ಉದ್ಯೋಗಗಳು ಬೇಡಿಕೆಗಳಿಗೆ ತಕ್ಕಂತೆ ಇರಲಿಲ್ಲ. ಕಾರ್ಮಿಕರಲ್ಲಿ ಇರುವ ಕೌಶಲ ಮತ್ತು ಉದ್ಯೋಗಕ್ಕೆ ಬೇಕಿದ್ದ ಕೌಶಲದ ನಡುವೆ ಹೊಂದಾಣಿಕೆಯೇ ಇರಲಿಲ್ಲ. ಬೇಸಾಯದಿಂದ ಜನರು ಹೊರ ಬಿದ್ದ ಸ್ಥಳ ಮತ್ತು ತಮಗೆ ಕೆಲಸ ಸಿಗಬಹುದು ಎಂದು ಅವರು ನಿರೀಕ್ಷಿಸಿದ್ದ ಸ್ಥಳಗಳ ನಡುವಣ ಅಂತರ ಬಹಳ ದೊಡ್ಡದೇ ಆಗಿತ್ತು


ಕೋವಿಡ್ ಮೊದಲ ಅಲೆ ಎದುರಾದಾಗ ಹೇರಿದ್ದ ರಾಷ್ಟ್ರವ್ಯಾಪಿ ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಊರುಗಳಿಗೆ ಮರಳಲು ಬಾಂದ್ರಾ ರೈಲು ನಿಲ್ದಾಣದಲ್ಲಿ ಸೇರಿದ್ದ ಜನರು ಪಿಟಿಐ ಚಿತ್ರ

ಉದಾರೀಕರಣ ಸೃಷ್ಟಿಸಿದ ಉದ್ಯೋಗದ ಮರೀಚಿಕೆ

ಉದಾರೀಕರಣಕ್ಕೆ 30 ವರ್ಷ

• ನರೇಂದ್ರ ಪಾಣಿ



ಭಾರತದ ಹಣಕಾಸು ಸಚಿವರಾಗಿದ್ದ ಡಾ. ಮನಮೋಹನ್ ಸಿಂಗ್ ಅವರು 1991ರ ಜುಲೈನಲ್ಲಿ ಅತಿ ಹೆಚ್ಚಿನ ದರದ ಪ್ರಗತಿಯ ಕನಸುಗಳನ್ನು ಬಿತ್ತಿ ಆರ್ಥಿಕ ಸುಧಾರಣೆಗಳ ಪ್ರಸ್ತಾವವನ್ನು ಮಂಡಿಸಿದ್ದರು. ಉದ್ಯೋಗ ಸೃಷ್ಟಿಯೂ ಅದೇ ಪ್ರಮಾಣದಲ್ಲಿ ಇರಲಿದೆ ಎಂಬ ಅರ್ಥವೂ ಅದರಲ್ಲಿ ಅಂತರ್ಗತವಾಗಿ ಇತ್ತು. ಮುಂದಿನ ಮೂರು ದಶಕಗಳಲ್ಲಿ ಈ ಸಂಕಥನವು ಪ್ರಗತಿಯ ಬಗ್ಗೆ ಗಮನವನ್ನು ಕೇಂದ್ರೀಕರಿಸಿದೆ. ಆದರೆ, ಉದ್ಯೋಗ ಸೃಷ್ಟಿಯ ವಿಚಾರದಲ್ಲಿ ಆಗಿರುವ ಹಿನ್ನಡೆಗಳಿಗೆ ಈ ಚರ್ಚೆಯಲ್ಲಿ ಅರ್ಥಪೂರ್ಣ ಸ್ಥಾನ ದೊರೆತಿಲ್ಲ.

ಡಾ. ಸಿಂಗ್ ಅವರ ಕಾರ್ಯತಂತ್ರದ ಮೊದಲ ಹಿನ್ನಡೆಯು ಬಹಿರಂಗವಾಗಿ ಗೋಚರಿಸಲು ದೀರ್ಘ ಕಾಲವೇನೂ ಬೇಕಾಗಲಿಲ್ಲ. ಹೆಚ್ಚು ಹೆಚ್ಚು ಆಮದುಗಳಿಗೆ ಅರ್ಥ ವ್ಯವಸ್ಥೆಯನ್ನು ತೆರೆದಿಟ್ಟರೆ ಭಾರತದ ತಯಾರಕರು ವಿದೇಶಿ ತಯಾರಕರ ಜತೆಗಿನ ಸ್ಪರ್ಧೆಗೆ ಸಜ್ಜಾಗುತ್ತಾರೆ; ಇದರಿಂದಾಗಿ ಭಾರತದ ತಯಾರಕರು ಜಾಗತಿಕವಾಗಿ ಸ್ಪರ್ಧಾತ್ಮಕವಾಗುತ್ತಾರೆ. ಪರಿಣಾಮವಾಗಿ ಅವರು ಜಾಗತಿಕ ಮಾರುಕಟ್ಟೆಗೆ ರಫ್ತು ಹೆಚ್ಚಿಸಲು ಸಮರ್ಥರಾಗುತ್ತಾರೆ ಎಂಬ ನಿರೀಕ್ಷೆಯು ಡಾ. ಸಿಂಗ್ ಅವರ ಚಿಂತನೆಯ ನೆಲೆಗಟ್ಟಾಗಿತ್ತು. ವಾಸ್ತವದಲ್ಲಿ, ವಿದೇಶಿ ಕಂಪನಿಗಳಿಗೆ ತಮ್ಮ ಬ್ರಾಂಡ್‌ಗಳನ್ನು ಮಾರುವುದೇ ಹೆಚ್ಚು ಅನುಕೂಲಕರ ಎಂಬ ನಿರ್ಧಾರಕ್ಕೆ ಭಾರತದ ಕಂಪನಿಗಳು ಬಂದವು. ಥಮ್ಸ್ ಅಪ್ ಬ್ರಾಂಡ್ ಅನ್ನು ಕೋಕಾ ಕೋಲ ಕಂಪನಿಗೆ ಮಾರಾಟ ಮಾಡಿದ್ದೇ ತಡ, ಭಾರತದ ಲಘುಪಾನೀಯ ಮಾರುಕಟ್ಟೆಯು ಕೋಕಾ ಕೋಲ ಮತ್ತು ಪೆಪ್ಸಿ ತೆಕ್ಕೆ ಸೇರಿತು.

ಥಮ್ಸ್ ಅಪ್‌ನ ಅನುಭವವು ಅದಕ್ಕೇ ಸೀಮಿತವಾದುದಲ್ಲ. ಸ್ಪರ್ಧಾತ್ಮಕವಾಗಲು ಮತ್ತು ರಫ್ತು ಹೆಚ್ಚಿಸಲು ತೀವ್ರವಾದ ಸ್ಪರ್ಧೆಯು ಕೆಲವು ತಯಾರಕರಿಗೆ ನೆರವಾಗಿದ್ದು ಹೌದಾದರೂ ಒಟ್ಟು ಪ್ರವೃತ್ತಿಯು ಅದರ ವಿರುದ್ಧ ದಿಕ್ಕಿನಲ್ಲಿಯೇ ಇತ್ತು. ರಫ್ತುಗಿಂತ ಆಮದು ತೀವ್ರವಾಗಿ ಹೆಚ್ಚುತ್ತಲೇ ಹೋಯಿತು. ಆಮದು ಮತ್ತು ರಫ್ತುವಿನ ಅನುಪಾತವು 1991–92ರಿಂದ 2019–20ರ ಅವಧಿಯಲ್ಲಿ 41.4ರಷ್ಟು ಹೆಚ್ಚಿತು. ಭಾರತದ ಮಾರುಕಟ್ಟೆಯ ಬಹುಭಾಗವು ಆಮದುಗಳಿಂದಲೇ ತುಂಬಿ ಹೋಯಿತು. ಭಾರತದ ತಯಾರಿಕಾ ಕ್ಷೇತ್ರದ ಪ್ರಗತಿಯ ಗತಿಯು ಬಹಳ ನಿಧಾನವಾಗಿಯೇ ಇತ್ತು. ಪರಿಣಾಮವಾಗಿ ಉದ್ಯೋಗ ಸೃಷ್ಟಿಯು ಮಂದವಾಯಿತು.

ಸೃಷ್ಟಿಯಾದ ಉದ್ಯೋಗಕ್ಕೆ ಬೇಕಿದ್ದ ಕೌಶಲಗಳು ಮತ್ತು ಉದ್ಯೋಗ ಆಕಾಂಕ್ಷಿಗಳಲ್ಲಿ ಇದ್ದ ಕೌಶಲಗಳ ನಡುವೆ ಭಾರಿ ಕಂದಕ ಸೃಷ್ಟಿಯಾಗಲು ಉದಾರೀಕರಣದ ಬಗ್ಗೆ ಇದ್ದ ಹೆಚ್ಚು ಪ್ರಕಟಗೊಳ್ಳದ ಪೂರ್ವಗ್ರಹಗಳು ಕಾರಣವಾಗಿದ್ದವು. ಕೃಷಿ ಕ್ಷೇತ್ರದಲ್ಲಿ ಸೃಷ್ಟಿಯಾಗಿದ್ದ ಬಿಕ್ಕಟ್ಟನ್ನು ಉದಾರೀಕರಣವು ಸಂಪೂರ್ಣವಾಗಿ ನಿರ್ಲಕ್ಷಿಸಿತು. ಉತ್ತರಾಧಿಕಾರ ರೀತಿಯಿಂದಾಗಿ ಹೊಲಗಳು ಚಿಕ್ಕದಾಗುತ್ತಾ ಹೋದವು ಮತ್ತು ಹಲವು ರೈತರ ಹೊಲಗಳು ಲಾಭದಾಯಕವಾಗಿ ಬೇಸಾಯ ಮಾಡಲು ಸಾಧ್ಯವಿರುವುದಕ್ಕಿಂತ ಸಣ್ಣದಾದವು. ದರದಲ್ಲಿನ ಭಾರಿ ಏರಿಳಿತವು ಒಂದು ವರ್ಷ ಲಾಭದಾಯಕ ಎನಿಸಿಕೊಂಡ ಹೊಲವು ಮರುವರ್ಷ ಲಾಭದಾಯಕ ಅಲ್ಲ ಎನಿಸಿಕೊಳ್ಳಲು ಕಾರಣವಾಯಿತು.

ಕೃಷಿ ಕ್ಷೇತ್ರದಿಂದ ಹೊರಬಿದ್ದ ಜನರಿಗೆ ಉದ್ಯೋಗದ ಅಗತ್ಯ ತೀವ್ರವಾಗಿತ್ತು. ಉದಾರೀಕರಣವು ಸೃಷ್ಟಿಸಿದ ಸೀಮಿತ ಉದ್ಯೋಗಗಳಿಗೆ ಬೇಕಾದ ಕೌಶಲಗಳು ಕೃಷಿ ಕ್ಷೇತ್ರದಿಂದ ಹೊರಬಿದ್ದವರಲ್ಲಿ ಇರಲಿಲ್ಲ. ಅರ್ಥ ವ್ಯವಸ್ಥೆಯಲ್ಲಿ ವೇಗವಾಗಿ ಬೆಳೆಯತೊಡಗಿದ ಸಾಫ್ಟ್‌ವೇರ್ ಉದ್ಯಮದಂತಹ ಕ್ಷೇತ್ರದಲ್ಲಿ ಕೆಲಸ ಪಡೆದುಕೊಳ್ಳಲು ಬೇಕಾದ ತಾಂತ್ರಿಕ ಕೌಶಲ ಅಥವಾ ಇಂಗ್ಲಿಷ್ ಭಾಷಾ ಕೌಶಲವು ಬಹುಪಾಲು ಜನರಲ್ಲಿ ಇರಲಿಲ್ಲ. ಉದಾರೀಕರಣದ ನೆಚ್ಚಿನ ಉದ್ಯಮಗಳಿಗಾಗಿ ಸೃಷ್ಟಿಯಾಗಬೇಕಿದ್ದ ಮೂಲಸೌಕರ್ಯ ನಿರ್ಮಾಣದಲ್ಲಿ ಕೆಲಸ ಕಂಡುಕೊಳ್ಳುವುದೇ ಈ ವರ್ಗಕ್ಕೆ ಇದ್ದ ಏಕೈಕ ಭರವಸೆ ಆಗಿತ್ತು.

ಇಂತಹ ತಳ ಹಂತದ ಉದ್ಯೋಗಗಳಿಗೂ ಉದಾರೀಕರಣವು ಅಡ್ಡಿಯಾದದ್ದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. ರಫ್ತಿಗಿಂತ ಆಮದು ಬಹಳ ಹೆಚ್ಚು ಇದ್ದ ಕಾರಣದಿಂದಾಗಿ ವಿದೇಶಿ ವಿನಿಮಯದ ಮೇಲೆ ಒತ್ತಡದ ಪರಿಸ್ಥಿತಿ ಮತ್ತೆ ಕಾಣಿಸಿಕೊಳ್ಳುವ ಅಪಾಯ ಇತ್ತು. ಈ ಬಿಕ್ಕಟ್ಟನ್ನು ತಪ್ಪಿಸಿಕೊಂಡಿದ್ದರೆ, ವಿದೇಶಿ ಬಂಡವಾಳ ಆಕರ್ಷಿಸಲು ನಡೆಸಿದ ಇನ್ನಿಲ್ಲದ ಪ್ರಯತ್ನವೇ ಅದಕ್ಕೆ ಕಾರಣ. ಭಾರತದ ಪ್ರಮುಖ ನಗರಗಳು ವಿಶ್ವ ದರ್ಜೆಯ ಮೂಲಸೌಕರ್ಯ ಹೊಂದಿವೆ ಎಂದು ಬಿಂಬಿಸುವುದೂ ಈ ಪ್ರಯತ್ನದ ಭಾಗವಾಗಿತ್ತು. ಇದು ಕೆಲವೇ ನಗರಗಳ ಮೇಲೆ ಹೂಡಿಕೆ ಕೇಂದ್ರೀಕರಣಕ್ಕೆ ಕಾರಣವಾಯಿತು ಮತ್ತು ಕೈಗಾರಿಕೀಕರಣವು ಎಲ್ಲೆಡೆ ಹಂಚಿಹೋಗುವ ಸಾಧ್ಯತೆಯನ್ನು ಕಮರಿಸಿತು. ಪರಿಣಾಮವಾಗಿ, ಕೃಷಿಯನ್ನು ಬಿಟ್ಟು ಬಂದವರಿಗೆ ಅವರ ಮನೆಗಳ ಸಮೀಪದಲ್ಲಿಯೇ ಉದ್ಯೋಗ ಒದಗಿಸುವುದು ಸಾಧ್ಯವಾಗಲಿಲ್ಲ.

ಜಾಗತಿಕ ಮಟ್ಟದ ಮೂಲಸೌಕರ್ಯದ ಮೇಲಿನ ಹೂಡಿಕೆಯು ಮುಖ್ಯವಾಗಿ ಎರಡು ರೀತಿಯಲ್ಲಿ ವಿದೇಶಿ ಹೂಡಿಕೆಯನ್ನು ಗುರಿ ಆಗಿಸಿ ಕೊಂಡಿತ್ತು. ಮೊದಲನೆಯದಾಗಿ, ವಿದೇಶಿ ಹೂಡಿಕೆದಾರರು ಮೂಲಸೌಕರ್ಯ ಯೋಜನೆಗಳಲ್ಲಿ ಹೂಡಿಕೆ ಮಾಡಬೇಕು ಎಂಬ ನಿರೀಕ್ಷೆಯನ್ನು ಇರಿಸಿಕೊಳ್ಳಲಾಗಿತ್ತು. ವಿದೇಶದ ಪ್ರಮುಖ ಹೂಡಿಕೆದಾರರು ಸಣ್ಣ ಸಣ್ಣದಾದ ಹಲವು ಯೋಜನೆಗಳಲ್ಲಿ ಆಸಕ್ತಿ ತಳೆಯುವುದು ಸಾಧ್ಯವಿರಲಿಲ್ಲ. ಹಾಗಾಗಿ, ಮೂಲಸೌಕರ್ಯ ಯೋಜನೆಗಳನ್ನು ಬೃಹತ್ ಗಾತ್ರಗಳದ್ದಾಗಿ ಹಿಗ್ಗಿಸಲು ಮತ್ತು ಆಕರ್ಷಕಗೊಳಿಸಲು ಒತ್ತು ಕೊಡಲಾಯಿತು. ಜಾಗತಿಕ ಮಟ್ಟದ ವರ್ಚಸ್ಸನ್ನು ಆಗಲೇ ಹೊಂದಿದ್ದ ಮಹಾನಗರಗಳಲ್ಲಿ ಈ ಯೋಜನೆಗಳು ಕೇಂದ್ರೀಕೃತಗೊಂಡವು.

ಈ ಒತ್ತು ನೀಡಿಕೆಯಿಂದಾಗಿ, ವಿದೇಶಿ ಹೂಡಿಕೆಯ ಎರಡನೇ ಅತಿ ಹೆಚ್ಚು ಮಹತ್ವದ ಭಾಗವಾಗಿ ದೊಡ್ಡ ಮತ್ತು ಆಕರ್ಷಕ ಮೂಲಸೌಕರ್ಯ ಯೋಜನೆಗಳು ಗುರುತಿಸಿಕೊಂಡವು. ದೇಶಕ್ಕೆ ಬರಬಹುದಾದ ವಿದೇಶಿ ಹೂಡಿಕೆದಾರರನ್ನೇ ಇವುಗಳಲ್ಲಿ ಹೆಚ್ಚಿನ ಯೋಜನೆಗಳು ಗುರಿಯಾಗಿಸಿಕೊಂಡಿದ್ದವು. ದುಬಾರಿ ವಿಮಾನ ನಿಲ್ದಾಣಗಳು, ಎಕ್ಸ್‌ಪ್ರೆಸ್ ವೇಗಳೇ ಈ ಯೋಜನೆಗಳಲ್ಲಿ ಮುಖ್ಯವಾಗಿದ್ದವು. ಭಾರಿ ವೆಚ್ಚದಾಯಕವಾದ ಈ ಯೋಜನೆಗಳನ್ನು ಖಾಸಗಿ ಕ್ಷೇತ್ರವು ನಿರ್ಮಿಸಿದಾಗ ಅದಕ್ಕೆ ಶುಲ್ಕ ವಿಧಿಸಲು ಆರಂಭಿಸಲಾಯಿತು. ಸರ್ಕಾರವೇ ಇಂತಹ ಮೂಲಸೌಕರ್ಯಗಳನ್ನು ಸೃಷ್ಟಿಸಿದಾಗ ಅದಕ್ಕೆ ತಗುಲಿದ ವೆಚ್ಚ ಭರಿಸಲು ತೆರಿಗೆಯ ಮೂಲಕ ಸಂಪನ್ಮೂಲ ಸಂಗ್ರಹಿಸಿತು. ಬಡ ವರ್ಗದ ಜನರು ಬಳಸುವ ವಸ್ತುಗಳ ಮೇಲೆಯೂ ಪರೋಕ್ಷ ತೆರಿಗೆ ಹೇರಲಾಯಿತು. ಇದರಿಂದಾಗಿ, ನಗರ ಪ್ರದೇಶಗಳಲ್ಲಿ ಕೆಲಸದ ಹುಡುಕಾಟದಲ್ಲಿದ್ದ ಜನರ ಜೀವನ ವೆಚ್ಚವು ಏರಿಕೆಯಾಯಿತು.

ಮಹಾನಗರಗಳ ಮೇಲೆಯೇ ಗಮನ ಕೇಂದ್ರೀಕೃತವಾದ ಕಾರಣ ದೊಡ್ಡ ಮಟ್ಟದ ಹೂಡಿಕೆಯ ಪ್ರಯೋಜನವು ದೇಶದ ಹೆಚ್ಚಿನ ಭಾಗಗಳಿಗೆ ಸಿಗಲಿಲ್ಲ. ದೇಶದ ಉತ್ತರ ಮತ್ತು ಪೂರ್ವ ಭಾಗದ ಜಿಲ್ಲೆಗಳ ದುರ್ಬಲ ವರ್ಗಗಳ ಕಾರ್ಮಿಕರಿಗೆ ವರ್ಷಕ್ಕೆ ಆರು ತಿಂಗಳೂ ಕೆಲಸ ಸಿಗುತ್ತಿಲ್ಲ ಎಂಬ ಮಾಹಿತಿಯನ್ನು 2011ರ ಜನಗಣತಿಯು ದಾಖಲಿಸಿತ್ತು. ಕೆಲಸ ಸಿಗದ ಕಾರಣದಿಂದಾಗಿ ಈ ಕಾರ್ಮಿಕರು ಕೆಲಸ ಹುಡುಕಿಕೊಂಡು ಮಹಾನಗರಗಳಿಗೆ ವಲಸೆ ಹೋಗಬೇಕಾಯಿತು. ಆದರೆ, ಈ ನಗರಗಳಲ್ಲಿ ಜೀವನ ವೆಚ್ಚವು ಹೆಚ್ಚುತ್ತಲೇ ಇದ್ದ ಕಾರಣ ಇವರು ನಗರಗಳಲ್ಲಿಯೇ ಕಾಯಂ ನೆಲೆಸುವುದು ಸಾಧ್ಯವಾಗಲಿಲ್ಲ. ಹಾಗಾಗಿ, ಅವರು ತಮ್ಮ ಕುಟುಂಬಗಳನ್ನು ಹಳ್ಳಿಗಳಲ್ಲಿಯೇ ಬಿಟ್ಟು ಬರಬೇಕಾಯಿತು. ದೂರದ ನಗರಗಳಲ್ಲಿ ಅಲ್ಪಾವಧಿ ಕೆಲಸಗಳನ್ನು ಪಡೆದುಕೊಂಡು ಅದರ ಮೂಲಕ ಅವರು ಜೀವನ ಕಟ್ಟಿಕೊಳ್ಳಲು ಯತ್ನಿಸಬೇಕಾಯಿತು. ಈ ವ್ಯವಸ್ಥೆಯು ಒಳಗಿನಿಂದ ಎಷ್ಟು ಶಿಥಿಲವಾಗಿತ್ತು ಎಂಬುದು ಕೋವಿಡ್ ಸಾಂಕ್ರಾಮಿಕ ಹರಡುವಿಕೆ ತಡೆಗಾಗಿ ಹೇರಿದ ಲಾಕ್‌ಡೌನ್ ಸಂದರ್ಭವು ತೋರಿಸಿಕೊಟ್ಟಿತು. ಈ ವಲಸೆ ಕಾರ್ಮಿಕರು ಬೀದಿಗಳಲ್ಲಿ ಸಿಲುಕಬೇಕಾಯಿತು.

ಅಗತ್ಯ ಇರುವಷ್ಟು ಉದ್ಯೋಗಗಳನ್ನು ಒದಗಿಸಿಲ್ಲ ಎಂಬುದು ಮಾತ್ರ ಉದಾರೀಕರಣದ ಸಮಸ್ಯೆ ಅಲ್ಲ. ಸೃಷ್ಟಿಯಾದ ಉದ್ಯೋಗಗಳು ಬೇಡಿಕೆಗಳಿಗೆ ತಕ್ಕಂತೆ ಇರಲಿಲ್ಲ. ಕಾರ್ಮಿಕರಲ್ಲಿ ಇರುವ ಕೌಶಲ ಮತ್ತು ಉದ್ಯೋಗಕ್ಕೆ ಬೇಕಿದ್ದ ಕೌಶಲದ ನಡುವೆ ಹೊಂದಾಣಿಕೆಯೇ ಇರಲಿಲ್ಲ. ಬೇಸಾಯದಿಂದ ಜನರು ಹೊರ ಬಿದ್ದ ಸ್ಥಳ ಮತ್ತು ತಮಗೆ ಕೆಲಸ ಸಿಗಬಹುದು ಎಂದು ಅವರು ನಿರೀಕ್ಷಿಸಿದ್ದ ಸ್ಥಳಗಳ ನಡುವಣ ಅಂತರ ಬಹಳ ದೊಡ್ಡದೇ ಆಗಿತ್ತು. ಇದರ ಪರಿಣಾಮವಾಗಿ ಕುಟುಂಬಗಳು ಶಾಶ್ವತವಾಗಿಯೇ ವಿಭಜನೆಗೊಂಡವು. ಲಭ್ಯ ಇದ್ದ ಕೆಲಸದ ಸುತ್ತಲು ಅನಿಶ್ಚಿತ ಸ್ಥಿತಿ ಸದಾ ಹೊಯ್ದಾಡುತ್ತಲೇ ಇತ್ತು. ಕೆಲಸದ ಪರಿಸ್ಥಿತಿಯು ಅಮಾನವೀಯ ಎಂದು ಕರೆಯಬಹುದಾದುದರ ಅಂಚಿನಲ್ಲಿಯೂ ಇತ್ತು.

ಲೇಖಕ: ಪ್ರಾಧ್ಯಾಪಕ ಮತ್ತು ಡೀನ್, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನ ಸಮಾಜ ವಿಜ್ಞಾನಗಳ ವಿಭಾಗ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ

ಬ್ರಾಹ್ಮಣರ ಮತಕ್ಕೆ ಎಲ್ಲರ ಕಸರತ್ತು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ, ಪ್ರಮುಖ ರಾಜಕೀಯ ಪಕ್ಷಗಳು ಜಾತಿ ಸಮೀಕರಣದ ಹೊಂದಾಣಿಕೆಯಲ್ಲಿ ತೊಡಗಿವೆ. ರಾಜ್ಯದ ಪ್ರಭಾವಿ ಸಮುದಾಯ ಎನಿಸಿರುವ 'ಬ್ರಾಹ್ಮಣ'ರ ಮೇಲೆ ಎಲ್ಲರ ಕಣ್ಣು ಬಿದ್ದಿದೆ.

ಕಾಂಗ್ರೆಸ್ ಪಕ್ಷವು 'ಬ್ರಾಹ್ಮಣ ಚೇತನ ಪರಿಷತ್' ಘಟಕದ ಮೂಲಕ ಈಗಾಗಲೇ ರಾಜ್ಯದ ವಿವಿಧ ಭಾಗಗಳಲ್ಲಿ ಯಾತ್ರೆ ನಡೆಸುತ್ತಿದೆ. 'ಸಮುದಾಯದ ನ್ಯಾಯಕ್ಕಾಗಿ ಅಭಿಯಾನ' ಎಂದು ಇದನ್ನು ಕರೆದಿದೆ. 2007ರಲ್ಲಿ ಬ್ರಾಹ್ಮಣ ಮತ್ತು ದಲಿತ ಸಮೀಕರಣವನ್ನು ಪ್ರಯೋಗಿಸಿ ಅಧಿಕಾರ ಹಿಡಿದಿದ್ದ ಬಿಎಸ್‌ಪಿ, ಈ ಬಾರಿ ಸಮುದಾಯದ ಓಲೈಕೆಗಾಗಿ 'ಪ್ರಬುದ್ಧ ಸಮ್ಮೇಳನ'ಗಳನ್ನು ಬ್ರಾಹ್ಮಣರಿಗಾಗಿ ಆಯೋಜಿಸಿದೆ.

ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವುದಾಗಿ ಕಾಂಗ್ರೆಸ್ ಈಗಾಗಲೇ ಸುಳಿವು ನೀಡಿದೆ. ಈ ವಿಚಾರದಲ್ಲಿ ತಾನೇನೂ ಹಿಂದೆ ಬೀಳದ ಬಿಜೆಪಿ, 'ಪ್ರಬುದ್ಧ ವರ್ಗ ಸಮ್ಮೇಳನ'ಗಳ ಸರಣಿಯನ್ನೇ ಆಯೋಜಿಸಿದೆ.

ಸಮಾಜವಾದಿ ಪಕ್ಷವು ರಾಜ್ಯದ ವಿವಿಧ ಭಾಗಗಳಲ್ಲಿ ಪರಶುರಾಮನ ಪ್ರತಿಮೆಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಎಲ್ಲ 403 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿರುವ ಆಮ್ ಆದ್ಮಿ ಪಕ್ಷವು, 'ಚಾಣಕ್ಯ ವಿಚಾರ ಸಮ್ಮೇಳನ'ಗಳನ್ನು ಆಯೋಜಿಸುವ ಉದ್ದೇಶ ಹೊಂದಿದೆ.

ರಾಜ್ಯದಲ್ಲಿ ಶೇ 13ರಷ್ಟಿರುವ ಬ್ರಾಹ್ಮಣರನ್ನು ಈ ಬಾರಿ ಯಾವ ಪಕ್ಷ ಸೆಳೆಯಲಿದೆ ಎಂಬುದುನ್ನು ಕಾದುನೋಡಬೇಕಿದೆ.

ಜಾಟರ ಓಲೈಕೆಗೆ ವಿಶ್ವವಿದ್ಯಾಲಯ

ಜಾಟ್ ಸಮುದಾಯದವರು ಅಪಾರವಾಗಿ ಗೌರವಿಸುವ ಆ ಸಮುದಾಯದ ದೊರೆ ಮಹೇಂದ್ರ ಪ್ರತಾಪ್ ಸಿಂಗ್ ಹೆಸರಿನಲ್ಲಿ, ಅಲಿಗಡದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿದೆ.

ಚುನಾವಣೆಯ ಲೆಕ್ಕದಲ್ಲಿ ನೋಡಿದರೆ ಈ ಸಮುದಾಯವು ಬಹು ಪ್ರಭಾವಿ. ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವವರಲ್ಲಿ ಇದೇ ಜಾಟ್ ಸಮುದಾಯದವರೇ ಮುಂಚೂಣಿಯಲ್ಲಿದ್ದಾರೆ. ಹೀಗಾಗಿ ಅವರನ್ನು ಓಲೈಸುವ ಉದ್ದೇಶ ಇದರ ಹಿಂದಿದೆ ಎನ್ನಲಾಗಿದೆ.

ಭಾರತೀಯ ಕಿಸಾನ್ ಯೂನಿಯನ್‌ನ ಬಹುತೇಕ ರೈತ ಮುಖಂಡರು ಇದೇ ಸಮುದಾಯಕ್ಕೆ ಸೇರಿದವರು. ಕೇಂದ್ರ ಕೃಷಿ ಕಾಯ್ದೆಗಳನ್ನು ಬಲವಾಗಿ ವಿರೋಧಿಸುತ್ತಿರುವ ಇವರು, ಮುಂಬರಲಿರುವ ಉತ್ತರಪ್ರದೇಶ, ಉತ್ತರಾಖಂಡ ಹಾಗೂ ಪಂಜಾಬ್ ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದಾಗಿ ಘೋಷಿಸಿದ್ದಾರೆ. ಹೀಗಾಗಿ, ಉತ್ತರ ಪ್ರದೇಶ ಸರ್ಕಾರವು ಈ ಪ್ರತಿಭಟನನಿರತರ ಕೋಪವನ್ನು ಮೊದಲು ಶಮನ ಮಾಡಬೇಕಿದೆ. ಆ ನಿಟ್ಟಿನ ಮೊದಲ ಪ್ರಯತ್ನವಾಗಿ ವಿಶ್ವವಿದ್ಯಾಲಯ ಸ್ಥಾಪನೆಯ ತಂತ್ರಗಾರಿಕೆಗೆ ಮುಂದಾಗಿದೆ ಎನ್ನಲಾಗಿದೆ.

ಪ್ರತಿಮೆ ನಿರ್ಮಾಣ ಇಲ್ಲ: ಮಾಯಾವತಿ

ಮುಂದಿನ ವರ್ಷ ನಡೆಯುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಅಧಿಕಾರದ ಗದ್ದುಗೆ ಏರಲು ಬಿಎಸ್‌ಪಿ ವರಿಷ್ಠೆ ಮಾಯಾವತಿ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಅವರ ಭಾಷಣಗಳಲ್ಲಿ ಅದು ಸ್ಪಷ್ಟವಾಗಿ ತೋರುತ್ತಿದೆ.

2022ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ತಮ್ಮ ಪಕ್ಷವು ರಾಜ್ಯದಲ್ಲಿ ಅಧಿಕಾರ ಪಡೆದರೆ ತಾವು ಯಾವುದೇ ಸ್ಮಾರಕ, ಪ್ರತಿಮೆ ಅಥವಾ ಉದ್ಯಾನ ನಿರ್ಮಿಸುವುದಿಲ್ಲ ಎಂದು ಪ್ರಬುದ್ಧ ವರ್ಗ ಸಮ್ಮೇಳನದ (ಬ್ರಾಹ್ಮಣ ಸಮ್ಮೇಳನ) ಸಮಾರೋಪ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಬಿಎಸ್‌ಪಿ ವರಿಷ್ಠೆಯು ತಮ್ಮ ಹಿಂದಿನ ಅಧಿಕಾರವಧಿಯಲ್ಲಿ (2007–2012) ವ್ಯಾಪಕ ಟೀಕೆಗಳ ನಡುವೆಯೂ ರಾಜಧಾನಿ ಲಖನೌ ಮತ್ತು ಇತರ ಕಡೆಗಳಲ್ಲಿ ಹಲವಾರು ಸ್ಮಾರಕಗಳು ಮತ್ತು ಉದ್ಯಾನಗಳನ್ನು ನಿರ್ಮಿಸಿದ್ದರು. ಇವುಗಳಲ್ಲಿ ತಮ್ಮ ಪ್ರತಿಮೆಗಳನ್ನೇ ಸ್ಥಾಪಿಸಿದ್ದರು. ಇದಕ್ಕಾಗಿ ಅವರ ಸರ್ಕಾರ ಸುಮಾರು ₹ 1400 ಕೋಟಿ ವೆಚ್ಚ ಮಾಡಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸರ್ಕಾರ ಆರಂಭಿಸಿರುವ ಹೊಸ ಯೋಜನೆಯೊಂದು ಚರ್ಚೆಯಾಗುತ್ತಿದೆ. ಈ ಕುರಿತ ಸಂದೇಶವೊಂದರಲ್ಲಿ ತಾವು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಿಬ್ಬಂದಿ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬರು ಯೋಜನೆಯನ್ನು ವಿವರಿಸಿದ್ದಾರೆ. ₹12,500 ಹೂಡಿಕೆ ಮಾಡಿದರೆ, ಹಿಂತಿರುಗಿ ₹4.62 ಕೋಟಿ ನೀಡಲಾಗುವುದು ಎಂದು ತಿಳಿಸಿದ್ದಾರೆ. ಆನ್‌ಲೈನ್ ಬ್ಯಾಂಕ್ ಮ್ಯಾನೇಜರ್ ಅವರು ಹೂಡಿಕೆ ಮಾಡಿದವರ ಖಾತೆಗೆ ಹಣ ವರ್ಗಾವಣೆ ಮಾಡುತ್ತಾರೆ ಎಂದು ತಿಳಿಸಿದ್ದಾರೆ. ಈ ಪತ್ರದಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಅವರ ಚಿತ್ರವೂ ಇದೆ.


Tweet
#PIBFactCheck
भारतीय रिज़र्व बैंक Reserve Bank of India
Date: 08/27/2021
PAYMENT GUARANTEE
ATTN : GANESH BHUMIJ
The Board, Management and Members and staff of Reserve Bank of India, hereby attest to say that this stands as a Authentic/Irrevocable Guarantee that once the Online Banking for CONVERSION,PROCESSING AND CREDITING CHARGES of Rs 12,500/- is fully paid by you, your online banking manager will transfer your fund in less than 30 minutes for Transfer of your funds of 4 Crores 62 Lakhs with our esteem Bank into your personal account.
This serves as an Agreement/Contract between Reserve Bank of India and the party involved Ganesh Bhumij any breach of contract, the other party/company shall have the Legal proceedings either in the Law court or any other means of reclaiming his/her

ಈ ಸಂದೇಶ ನಕಲಿ ಎಂದು ಪಿಐಬಿ ಫ್ಯಾಕ್ಟ್ ಚೆಕ್ ತಿಳಿಸಿದೆ. ಹಣ ಹೂಡಿದರೆ ಅದನ್ನು ದುಪ್ಪಟ್ಟು ಮಾಡುವುದಾಗಿ ವಂಚಕರು ಜನರಿಗೆ ಭರವಸೆ ನೀಡಲು ಆರಂಭಿಸಿದ್ದಾರೆ. ಸರ್ಕಾರಿ ಸಂಸ್ಥೆಗಳ ಹೆಸರಿನಲ್ಲಿ ಈ ದಂಧೆ ಮಾಡಲಾಗುತ್ತಿದೆ. ತಮ್ಮನ್ನು ಸರ್ಕಾರಿ ಅಧಿಕಾರಿಗಳು ಎಂದೇ ವಂಚಕರು ಹೇಳಿಕೊಳ್ಳುತ್ತಾರೆ ಎಂದು ಎಚ್ಚರಿಸಿದ್ದು, ಜನರು ಇಂತಹ ಮೋಸದ ಜಾಲಕ್ಕೆ ಬೀಳಬಾರದು ಎಂದು ಸಲಹೆ ನೀಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕ್ಷಣ ಅಮೃತಕ್ಷಣವಾಗುವ ಬಗೆ

ಹಿಂದಣದರುಳಿವಿರದು, ಮುಂದಣದರುಸಿರಿರದು |
ಒಂದರೆಕ್ಷಣ ತುಂಬಿ ತೋರುವುದನಂತ ||
ಒಂದೆ ಕಣ್ಣೊಂದೆ ಗುರಿಯೊಂದೆ ಮೈ ಮನಮರೆತ |
ಸುಂದರದ ಲೋಕವದು – ಮಂಕುತಿಮ್ಮ || 458 ||

ಪದ-ಅರ್ಥ: ಹಿಂದಣದರುಳಿವಿರದು = ಹಿಂದಣದರ (ಹಿಂದಾದ್ದರ) + ಉಳಿವಿರದು, ಮುಂದಣದದುಸಿರಿರದು = ಮುಂದಣದರ (ಮುಂದಾಗುವುದರ) + ಉಸಿರು + ಇರದು, ತೋರುವುದನಂತ = ತೋರುವುದು + ಅನಂತ.

ವಾಚ್ಯಾರ್ಥ: ಅನನ್ಯ ಸೌಂದರ್ಯದ ಅನುಭವದಲ್ಲಿ ಹಿಂದಿನ ಯಾವುದರ ಉಳಿವಿಲ್ಲ, ಮುಂದಾಗುವುದರ ಉಸಿರಿಲ್ಲ, ಆ ಒಂದು ಅರೆಕ್ಷಣ ಮನತುಂಬಿ ಅನಂತವಾಗುತ್ತದೆ. ಆಗ ಕಣ್ಣು, ಗುರಿಗಳೆಲ್ಲ ಒಂದಾಗಿ ಮೈಮನಗಳು ಮರೆತು ಹೋಗುತ್ತವೆ. ಆ ಲೋಕವೆ ಸುಂದರವಾದದ್ದು.

ವಿವರಣೆ: ನಮ್ಮೆಲ್ಲರ ಬದುಕಿನಲ್ಲಿ ಒಂದೆರಡು ಬಾರಿಯಾದರೂ ಅಂತಹ ಅತ್ಯಂತ ಸುಂದರ ಘಟನೆಗಳು ಬಂದೇ ಇರುತ್ತವೆ. ನನಗೊಮ್ಮೆ ಹಾಗೆ ಆಗಿತ್ತು. ನಾನು ಕಲಿತ ರಸಾಯನಶಾಸ್ತ್ರದ ಮೇರು ಶಿಖರ ಎನ್ನಿಸಿದ್ದ, ಎರಡು ಬಾರಿ ನೋಬೆಲ್ ಪಾರಿತೋಷಕ ಪಡೆದಿದ್ದ, ಡಾ. ಲೀನಸ್ ಪೌಲಿಂಗ್ ನನಗೊಂದು ದೂರದ ನಕ್ಷತ್ರ. ಅವರ ಬಗ್ಗೆ, ಅವರ ಸಂಶೋಧನೆಗಳನ್ನು ಓದಿದ್ದ ನನಗೆ ಅವರು ಅಂದು ದೈವಸ್ವರೂಪ. ಅಂಥವರನ್ನು ಒಮ್ಮೆ ಬೆಟ್ಟಿಯಾಗುವ, ಮಾತನಾಡುವ ಅವಕಾಶ ದೊರೆತಾಗ, ನಾನು ನನ್ನ ಕೈಯನ್ನೇ ಜಿಗುಟಿಕೊಂಡು, ಅದು ಸತ್ಯವೇ ಎಂದು ನೋಡಿಕೊಂಡೆ. ಅವರೊಂದಿಗೆ ಮಾತನಾಡಿದ್ದು ಕೇವಲ ಐದು ನಿಮಿಷವಿದ್ದಿರಬೇಕು. ಆದರೆ ಇಂದಿಗೂ ಅದು ನಿನ್ನೆಯೇ ಆದಂತಿದೆ. ಐದು ನಿಮಿಷ ಬದುಕಿನುದ್ದಕ್ಕೂ ಹರಡಿ ನಿಂತಿದೆ, ಅನಂತವಾಗಿದೆ. ಆ ಘಟನೆ ನಡೆದ ಕ್ಷಣದಲ್ಲಿ ನನಗೆ ಹಿಂದಿನದೆಲ್ಲ ಮರೆತು ಹೋಗಿ, ಭವಿಷ್ಯ ಕಣ್ಮರೆಯಾಗಿ, ವರ್ತಮಾನವೊಂದೇ ಯುಗವಾಗಿತ್ತು. ಅದನ್ನೇ ಕಗ್ಗ ಹೇಳುತ್ತದೆ. ಆ ಮಧುರ ಕ್ಷಣದಲ್ಲಿ ಭೂತ, ಭವಿಷ್ಯಗಳು ಮರೆಯಾಗಿ ವರ್ತಮಾನದ ಕ್ಷಣ ಮಾತ್ರ ಅಮೃತವಾಗುತ್ತದೆ, ಮೈಮನಗಳನ್ನು ಮರೆಸಿಬಿಡುತ್ತದೆ. ಅದೊಂದು ಸುಂದರ ಪ್ರಪಂಚ. ಅದರ ಸುಂದರತೆಯೇ ಬೇರೆ. ಆ ಕ್ಷಣದ ಪುನರಾವರ್ತನೆಯಾಗುವುದು ಅಪರೂಪ.

ನಾನೊಮ್ಮೆ, ನಮ್ಮ ನೆಚ್ಚಿನ ಕವಿಗಳಾದ ಕೆ.ಎಸ್. ನರಸಿಂಹಸ್ವಾಮಿಯವರ ಜೊತೆಗೆ ಮಾತನಾಡುವಾಗ, ನನಗೆ ಅವರದೊಂದು ಸುಂದರ ಹಾಡು ನೆನಪಿಗೆ ಬಂತು. ಅದೊಂದು ಜೋಗುಳದ ಹಾಡು.

"ಅತಿತ್ತ ನೋಡದಿರು, ಅತ್ತು ಹೊರಳಾಡದಿರು
ನಿದ್ದೆ ಬರುವಳು ಹೊದ್ದು ಮಲಗು ಮಗುವೆ.
ಜೋ ಜೋಜೋ ಜೋಜೋ ಜೋಜೋಜೋ.
ಬಣ್ಣ ಬಣ್ಣದ ಕನಸು ಕರಗುವುದು ಬಲುಬೇಗ;
ಹಗಲು ಬರುವನು ಬೆಳ್ಳಿ ಮುಗಿಲ ನಡುವೆ.
ಚಿನ್ನದಂಬಾರಿಯಲಿ ನಿನ್ನ ಕಳುಹುವರಾಗ
ಪಟ್ಟದಾನೆಯ ಮೇಲೆ ಪುಟ್ಟ ಮಗುವೆ".

ಆ ರೂಪಕವೇ ಅದ್ಭುತವಾದದ್ದು. ಪಟ್ಟದಾನೆ ತುಂಬ ದೊಡ್ಡದು, ಅದರ ಮೇಲೆ ಚಿನ್ನದ ಅಂಬಾರಿ. ಅದರೊಳಗೆ ಕುಳಿತದ್ದು ಪುಟ್ಟ ಮಗು! 'ಸರ್, ಪಟ್ಟದಾನೆಯ ಮೇಲೆ ಪುಟ್ಟ ಮಗು! ಇದು ಹೇಗೆ ಹೊಳೆಯಿತು?' ಎಂದು ಕೇಳಿದೆ. ಅದಕ್ಕವರು, 'ಮೇಷ್ಟ್ರೇ ಅದೊಂದು ಅಮೃತ ಕ್ಷಣ. ಮರುದಿನ ಅಲ್ಲ, ಇನ್ನೊಂದು ತಾಸು ಬಿಟ್ಟು ಬರೆದಿದ್ದರೂ ಅದೇ ಮಾತು ಬರುತ್ತಿತ್ತೋ ಇಲ್ಲವೋ ಗೊತ್ತಿಲ್ಲ' ಎಂದರು! ಇದೇ, ಕ್ಷಣ, ಅಮೃತಕ್ಷಣವಾಗುವ ಬಗೆ. ❖

ದಿನ ಭವಿಷ್ಯ

ಬುಧವಾರ ಸೆಪ್ಟೆಂಬರ್ 8, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ದ್ವಿತೀಯಾ ಗಂ. 54-3 (ರಾ. 3-52) ಬುಧವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 29-12 (ಸಾ. 5-56) ಶುಭ ನಾಮ ಯೋಗ ಗ. 51-5 ಬಾಲವ ಕರಣ ಗಂ. 25-43 ವಿಷ ಗಂ. 49-33 ಅಮೃತ ಗಂ. 10-59 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-12 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 3 5

ಮೇಷ: ಹೊಸ ಉದ್ಯಮಕ್ಕೆ ಕಾಲಿಡುವ ಧಾವಂತದಿಂದ ಕೆಲಸ ಕಾರ್ಯಗಳನ್ನು ಮಾಡಲಿದ್ದೀರಿ. ಗುರಿ ತಲುಪುವ ಹಾದಿಯಲ್ಲಿ ಸ್ನೇಹಿತರ ಸಹಾಯ ಸಹಕಾರ ದೊರಕಲಿದೆ. ಸಂಗಾತಿಯಿಂದ ಸಂತಸದ ವಿಚಾರ ಕೇಳಲಿದ್ದೀರಿ.

ವೃಷಭ: ಸ್ವತ್ತು ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದ ಮಾತುಕತೆಯಿಂದ ಲಾಭಕರವಾದ ನಿರ್ಧಾರಗಳು ಹೊರಬರಲಿವೆ. ಪಿತ್ರಾರ್ಜಿತವಾದ ಆಸ್ತಿ ನಿಮ್ಮ ಪಾಲಿಗೆ ದೊರಕುವುದು.

ಮಿಥುನ: ಕರಕುಶಲ ಕರ್ಮಿಗಳಿಗೆ ಪ್ರತಿಭಾ ಪ್ರದರ್ಶನದ ಅವಕಾಶದೊಂದಿಗೆ ಮಾರಾಟದಿಂದ ಉತ್ತಮ ಲಾಭ ದೊರಕಲಿದೆ. ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ. ಆರೋಗ್ಯ ಉತ್ತಮವಾಗಿರುವುದು.

ಕರ್ಕಾಟಕ: ನಿಮ್ಮ ಸಾತ್ವಿಕ ನಡತೆಯಿಂದ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವಿರಿ. ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುವವರಿಗೆ ಗೌರವ.

ಸಿಂಹ: ವ್ಯವಹಾರದಲ್ಲಿ ಕೌಶಲದಿಂದಾಗಿ ಹೆಚ್ಚಿನ ಲಾಭ. ಭೂ ವ್ಯವಹಾರದಲ್ಲಿ ನಿಮ್ಮ ಹಟಮಾರಿತನಕ್ಕೆ ಜಯವಾಗುವುದರಲ್ಲಿ ಅನುಮಾನವಿಲ್ಲ. ಇಚ್ಛೆಯಂತೆ ಮನೆ ಖರೀದಿ ಭಾಗ್ಯ ನಿಮ್ಮದಾಗಲಿದೆ.

ಕನ್ಯಾ: ವೈಯಕ್ತಿಕ ಜೀವನದಲ್ಲಿನ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವ ದಿಕ್ಕಿನಲ್ಲಿ ಗಣ್ಯರೊಂದಿಗೆ ಸಂಭಾಷಣೆಯನ್ನು ಮಾಡಬೇಕಾದೀತು. ದುಡುಕು ಸ್ವಭಾವದಿಂದಾಗಿ ತೊಂದರೆ ಎದುರಿಸ ಬೇಕಾದೀತು.

ತುಲಾ: ಸತ್ಕಾರ್ಯಗಳಿಗೆ ಸಹಾಯ ಕೋರಿ ಬರುವವರಿಗೆ ಸಹಾಯ ಹಸ್ತ ಚಾಚುವಿರಿ. ವೈಯಕ್ತಿಕ ವ್ಯವಹಾರದಲ್ಲಿ ಉಂಟಾದ ಹಿನ್ನಡೆಯ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಹಿತೈಷಿಗಳ ಸಹಕಾರದ ಭರವಸೆಯನ್ನು ಪಡೆದುಕೊಳ್ಳುವಿರಿ.

ವೃಶ್ಚಿಕ: ಪಾಲುದಾರಿಕೆಯಿಂದ ಅಪೂರ್ಣವಾಗಿದ್ದ ನಿಮ್ಮ ವ್ಯಾಪಾರ ಈ ದಿನ ಪ್ರಾಧಾನ್ಯತೆಯನ್ನು ಪಡೆದುಕೊಳ್ಳಲಿದ್ದು, ಲಾಭಾಂಶದಲ್ಲಿ ಹೆಚ್ಚಿನ ಭಾಗ ನಿಮ್ಮದಾಗಲಿದೆ. ವ್ಯವಹಾರಗಳ ವಿಚಾರದಲ್ಲಿ ಸ್ಪಷ್ಟ ಚಿತ್ರಣ.

ಧನು: ಮನೆಗೆ ಸೋದರ ಸಂಬಂಧಿಗಳ ಆಗಮನದಿಂದ ಹಬ್ಬದ ವಾತಾವರಣ ಮೂಡಲಿದೆ. ಮಕ್ಕಳ ಮದುವೆ ಕಾರ್ಯಕ್ಕೆ ಹೊಸ ತಿರುವು ಉಂಟಾಗಲಿದೆ. ಅಚ್ಚರಿಯಿಂದ ಕೂಡಿದ ದಿನವಾಗಿ ಪರಿಣಮಿಸುವುದು.

ಮಕರ: ನಿಮ್ಮ ವ್ಯಾಪಾರದಲ್ಲಿ ಈ ದಿನದಿಂದ ಹಣದ ಹರಿವು ಸುಗಮವಾಗಿ ವ್ಯವಹಾರದಲ್ಲಿ ಉನ್ನತಿಯತ್ತ ಸಾಗಲಿದ್ದೀರಿ. ಯಾಂತ್ರೀಕೃತ ವಾಹನ, ಯಂತ್ರೋಪಕರಣಗಳ ವ್ಯಾಪಾರಿಗಳಿಗೆ ಉತ್ತಮ ಲಾಭ.

ಕುಂಭ: ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗಿಕೊಂಡಿರುವವರಿಗೆ ಅನಿರೀಕ್ಷಿತ ಫಲಿತಾಂಶ ದೊರೆಯಲಿದೆ. ಉನ್ನತ ಅಧಿಕಾರಿಗಳಿಗೆ ಅಚ್ಚರಿ ಮೂಡಿಸುವ ಕಾರ್ಯ ಮಾಡಲಿದ್ದೀರಿ.

ಮೀನ: ಬೃಹತ್ ಯೋಜನೆಗಳಿಗೆ ಎಲ್ಲ ಸನ್ನಿವೇಶಗಳು ಅನುಕೂಲಕರವಾಗಿ ಪರಿಣಮಿಸಲಿವೆ. ಹೊಸ ಹೊಸ ಅವಕಾಶಗಳು ನಿಮ್ಮನ್ನು ಅರಸಿ ಬರಲಿವೆ. ವೈವಾಹಿಕ ಮಾತುಕತೆಯಿಂದ ತೃಪ್ತಿಕರ ಸಮಾಚಾರ ಕೇಳಿಬರಲಿದೆ.


ನಿಮ್ಮ ಜನ್ಮದಿನ 8-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಕೃಷಿ ಮತ್ತು ಹೈನೋದ್ಯಮಗಳಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ವ್ಯಾಪಾರಗಳಿಂದ ಹೇರಳ ಲಾಭವನ್ನು ನಿರೀಕ್ಷಿಸಬಹುದು. ಅವಿವಾಹಿತ ಹೆಣ್ಣು ಮಕ್ಕಳಿಗೆ ಕಂಕಣ ಭಾಗ್ಯ ಕೂಡಿಬರುವುದು. ಶೈಕ್ಷಣಿಕ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಗೌರವಾದರ ಲಭಿಸಲಿದೆ.

ಪದಬಂಧ 4713

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಚರವಲ್ಲದೆ ಸ್ತಿರವಾದುದು (3)
4.ಮನದೊಳಗಿರುವ ಮನ್ಮಥ (3)
5.ಒಳ ಹೊಕ್ಕಿರುವುದು! (4)
6.ಎಡದ ವಿರುದ್ಧವಾಗಿ ಈ ಒತ್ತಾಯವೇ? (4)
7. ಧಾನ್ಯದ ಹೊಡೆ! (2)
9.ವನದಲ್ಲಿ ತಿರುಗಿದಾಗ ಹೊಸದು ಕಂಡಿತು! (2)
13.ಸೂಕ್ಷ್ಮವಾಗಿ ನೋಡುವವನು (4)
14.ಶ್ರೀಕೃಷ್ಣನ ಸಹೋದರ (4)
15.ನಾಡಹಬ್ಬವಿಲ್ಲಿ ಉಲ್ಟಾ ಕಾಣುತ್ತಿದೆ (3)
16.ಕಣದಲ್ಲಿ ಕಾಣಿಸುತ್ತಿರುವ ಜ್ಞಾನೇಂದ್ರಿಯ (3)

ಮೇಲಿಂದ ಕೆಳಕ್ಕೆ
1.ಚಿನ್ನದ ಬಳೆಯಿದು (5)
2.ಬೇರೆಡೆ ಹೋಗದಂತೆ ತಡೆಯುವಿಕೆ (5)
3.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
5.ಕಾಣದಂತೆ ಮಾಯವಾಗುವಿಕೆ (4)
8.ಸಂಪೂರ್ಣನಾಶವನ್ನು ಹೀಗೆನ್ನಿ (4)
10.ಮಾಟ ಮಂತ್ರದಿಂದ ವಶಪಡಿಸಿಕೊಳ್ಳುವಿಕೆ (5)
11.ಬೆಳ್ಳಗಾದ ಕೂದಲು (5)
12.ರಾಜನ ದರ್ಬಾರು (3)



4712ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಹವ್ಯಾಸ 4.ಸಂದಣಿ 6.ಡಮರುಗ 8.ವಿಭಜನೆ 10.ರಜನಿ 13.ಸದ್ಗತಿ 15.ಹಸುಗೂಸು 19.ಮದಗಜ 21.ವರ್ಣನೆ 22.ಲಿಲಾವು

ಮೇಲಿಂದ ಕೆಳಕ್ಕೆ
1.ಹಣೆಗೆ 2.ಸಡಗರ 3.ನಾರು 5.ದನುಜ 7.ಗವಿ 9.ನೆರಳು 11.ನಿವಾಸ 12.ಸನ್ನಾಹ 14.ತಿಲಾಂಜಲಿ 16.ಸುಪರ್ಣ 17.ಸುಮ 18.ಚಡಾವು 20.ದಕ್ಷ

ಸುಡೊಕು 5099

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5098 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ಪಶ್ಚಿಮ ಘಟ್ಟ ಪ್ರದೇಶದ ನದಿಗಳಿಗೆ 1,400 ಕಿರು ಜಲಾಶಯ ನಿರ್ಮಾಣದ ಪ್ರಸ್ತಾಪ

‘ಕಿರು ಜಲಾಶಯದಿಂದ ಕಾಡು ಮುಳುಗುವುದಿಲ್ಲ’

ಕಾರವಾರ: ‘ರಾಜ್ಯ ಪಶ್ಚಿಮ ಘಟ್ಟದಲ್ಲಿ ಕಿಂಡಿ ಅಣೆಕಟ್ಟೆ ನಿರ್ಮಾಣದಿಂದ ಅರಣ್ಯ ಭೂಮಿ ಮುಳುಗಡೆ ಆಗುವುದಿಲ್ಲ. ನದಿಪಾತ್ರದಲ್ಲಿ ಒಂದೆರಡು ತಿಂಗಳು ನೀರು ಸಂಗ್ರಹಿಸಿ ಇಡಲು ಸಾಧ್ಯವಾಗುವಂಥ ಕಾಮಗಾರಿ ಮಾಡಲಾಗುವುದು. ಘಟ್ಟದ ಮೇಲೆ ಕಾಮಗಾರಿ ಮಾಡುತ್ತಾರೆ, ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಹಾನಿಯಾಗಲಿದೆ ಎಂಬುದು ತಪ್ಪು ಕಲ್ಪನೆ’ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.



ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನದಿಯ ಆಳಕ್ಕೆ ಅನುಗುಣವಾಗಿ ನಾಲ್ಕು ಮೀಟರ್‌ವರೆಗೆ ಎತ್ತರದ ಕಟ್ಟೆಗಳನ್ನು ಅಲ್ಲಲ್ಲಿ ನಿರ್ಮಿಸಲಾಗುತ್ತದೆ. 50 ಎಕರೆ, 100 ಎಕರೆ ಜಮೀನಿಗೆ ಪಂಪ್‌ಸೆಟ್‌ಗಳ ಮೂಲಕ ನೀರು ಹರಿಸಲು, ಅಂತರ್ಜಲ ವೃದ್ಧಿಗೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಅದು ಸಹಕಾರಿಯಾಗುತ್ತದೆ. ಪ್ರಾಮಾಣಿಕವಾಗಿ ಹೇಳ್ತೇನೆ, ಅರಣ್ಯ ಪ್ರದೇಶವನ್ನು ಎಲ್ಲೂ ಮುಳುಗಡೆ ಮಾಡಲ್ಲ’ ಎಂದು ಪ್ರತಿಪಾದಿಸಿದರು.

ಪಶ್ಚಿಮ ಘಟ್ಟ ಪ್ರದೇಶದ ನದಿಗಳಿಗೆ 1,400 ಕಿರು ಜಲಾಶಯಗಳನ್ನು ನಿರ್ಮಿಸುವ ಬಗ್ಗೆ ಸಚಿವ ಮಾಧುಸ್ವಾಮಿ ಈಚೆಗೆ ಪ್ರಸ್ತಾಪಿಸಿದ್ದರು. ಕೇಂದ್ರ ಸರ್ಕಾರದ ಸಹಾಯದೊಂದಿಗೆ ₹ 3,500 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿ ಮಾಡುವುದಾಗಿ ತಿಳಿಸಿದ್ದರು. ಆದರೆ, ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಾಮಗಾರಿ ಎಷ್ಟು ಸಮಂಜಸ ಎಂದು ಪರಿಸರವಾದಿಗಳು, ತಜ್ಞರು ಆಕ್ಷೇಪಿಸಿದ್ದಾರೆ.

ಮೈಸೂರಿನಲ್ಲಿ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಪ್ರತಿಮೆ ಸ್ಥಾಪನೆ

ಅನುಮತಿ ರದ್ದುಪಡಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರದ ಗನ್ ಹೌಸ್ ಬಳಿಯ ವೃತ್ತದಲ್ಲಿ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪ್ರತಿಮೆ ಸ್ಥಾಪಿಸಲು ರಾಜ್ಯ ಸರ್ಕಾರ ನೀಡಿದ್ದ ಅನುಮತಿಯನ್ನು ಹೈಕೋರ್ಟ್ ಮಂಗಳವಾರ ರದ್ದುಗೊಳಿಸಿದೆ.

2017ರಲ್ಲಿ ನೀಡಿರುವ ಈ ಅನುಮತಿ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಎಂದು ಪೀಠ ಹೇಳಿದೆ.



‘ಪ್ರತಿಮೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳ ಮೈಸೂರು ನಗರದ ಜನನಿಬಿಡ ಪ್ರದೇಶ ಎಂಬುದು ರಾಜ್ಯ ಸರ್ಕಾರವೇ ಸಲ್ಲಿಸಿರುವ ನಕ್ಷೆಯಿಂದ ಸ್ಪಷ್ಟವಾಗುತ್ತದೆ. ಈ ವೃತ್ತಕ್ಕೆ ಆರು ರಸ್ತೆಗಳು ಸೇರುತ್ತವೆ. ವೃತ್ತ ಕೂಡ ರಸ್ತೆಯ ಭಾಗವಾಗಿದೆ’ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

‘ಸಾರ್ವಜನಿಕ ರಸ್ತೆಗಳಲ್ಲಿ ಪ್ರತಿಮೆ ಸ್ಥಾಪಿಸಲು ಅಥವಾ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡದಂತೆ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ನಿರ್ದೇಶನ ನೀಡಿದೆ. ಆದ್ದರಿಂದ, ಸರ್ಕಾರದ ಅನುಮತಿ ಮತ್ತು ಮೈಸೂರು ಮಹಾನಗರ ಪಾಲಿಕೆ ಕೈಗೊಂಡ ನಿರ್ಣಯವನ್ನು ಪರಿಗಣಿಸಲಾಗದು’ ಎಂದು ಹೇಳಿದೆ.


ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅಖಿಲ ಭಾರತ ಕ್ಷತ್ರಿಯ ಮಹಾಸಭಾ, ‘ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಪ್ರತಿಮೆ ಸ್ಥಾಪಿಸಲು ಕೋರಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಆದೇಶ ಉಲ್ಲೇಖಿಸಿ ತಿರಸ್ಕರಿಸಿತ್ತು. ಈಗ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪ್ರತಿಮೆ ಸ್ಥಾಪನೆಗೆ ಅದೇ ಸರ್ಕಾರ ಅನುಮತಿ ನೀಡಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿತ್ತು.

‘ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ ಮತ್ತು ಇತರ ಸಾರ್ವಜನಿಕ ಉಪಯುಕ್ತ ಸ್ಥಳಗಳಲ್ಲಿ ಯಾವುದೇ ಪ್ರತಿಮೆ ನಿರ್ಮಿಸದಂತೆ ಸುಪ್ರೀಂ ಕೋರ್ಟ್ 2013ರಲ್ಲಿ ನಿರ್ದೇಶನ ನೀಡಿದೆ. ಅದನ್ನು ರಾಜ್ಯದೆಲ್ಲೆಡೆ ಜಾರಿಗೊಳಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಪೀಠ ಸೂಚಿಸಿತು.

ಬಿಜೆಪಿಯ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿಕೆ

ಬೊಮ್ಮಾಯಿ ನಾಯಕತ್ವ: ಅಸಮಾಧಾನ ಇಲ್ಲ

ಪ್ರಜಾವಾಣಿ ವಾರ್ತೆ



ಅರುಣ್ ಸಿಂಗ್

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸುವ ಕುರಿತು ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಯಿಂದ ಪಕ್ಷದಲ್ಲಿ ಯಾರಿಗೂ ಅಸಮಾಧಾನ ಆಗಿಲ್ಲ’ ಎಂದು ಬಿಜೆಪಿಯ ರಾಜ್ಯ ಉಸ್ತುವಾರಿ ವಹಿಸಿರುವ ಅರುಣ್ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಬೊಮ್ಮಾಯಿ ನಾಯಕತ್ವಕ್ಕೆ ಯಾರಾದರೂ ಏಕೆ ಅಸಮಾಧಾನಗೊಳ್ಳಬೇಕು? ಅವರು ಈಗ ಮುಖ್ಯಮಂತ್ರಿ ಆಗಿದ್ದಾರೆ. ಅವರ ನೇತೃತ್ವದಲ್ಲೇ 2023ರ ಚುನಾವಣೆಯನ್ನು ಎದುರಿಸಲಿದ್ದೇವೆ’ ಎಂದರು.

‘ಬೊಮ್ಮಾಯಿ ನಾಯಕತ್ವದಲ್ಲಿಯೇ ಚುನಾವಣೆ ಎದುರಿಸುವುದಾಗಿ ಅಮಿತ್ ಶಾ ಅವರು ಸ್ಪಷ್ಟಪಡಿಸಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಪಕ್ಷದ ಸಂಘಟನೆ ಬಲಪಡಿಸುತ್ತಾರೆ. ಬೊಮ್ಮಾಯಿ ಉತ್ತಮ ಆಡಳಿತ ನೀಡುತ್ತಾರೆ’ ಎಂದು ಅವರು ಹೇಳಿದರು.

‘ಬೊಮ್ಮಾಯಿ ಮತ್ತು ಕಟೀಲ್ ನಾಯಕತ್ವದಲ್ಲಿ ಪಕ್ಷ ಇತ್ತೀಚಿನ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ವಿಜಯದ ಯಾತ್ರೆ ನಡೆಸಿದೆ. 2023ರ ವಿಧಾನಸಭಾ ಚುನಾವಣೆಯಲ್ಲೂ ಭರ್ಜರಿ ವಿಜಯ ಸಾಧಿಸಿ, ರಾಜ್ಯದಲ್ಲಿ ಮತ್ತೆ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲಿದೆ’ ಎಂದು ಅರುಣ್ ಸಿಂಗ್ ತಿಳಿಸಿದರು.


ಸಿಂಗ್ ಭೇಟಿಯಾದ ಶೆಟ್ಟರ್: ಶಾಸಕ ಜಗದೀಶ್ ಶೆಟ್ಟರ್ ಅವರು ಅರುಣ್ ಸಿಂಗ್ ಅವರನ್ನು ಬೆಳಿಗ್ಗೆ ಭೇಟಿ ಮಾಡಿ ಚರ್ಚಿಸಿದರು.

‘ಇದೊಂದು ಸೌಜನ್ಯದ ಭೇಟಿಯಾಗಿತ್ತು. ಈಚೆಗೆ ಮುಗಿದ ಮಹಾನಗರ ಪಾಲಿಕೆ ಚುನಾವಣೆಗಳ ಬಗ್ಗೆ ಚರ್ಚಿಸಲಾಯಿತು. ರಾಜಕೀಯದ ವಿಚಾರ ಚರ್ಚಿಸಲಿಲ್ಲ’ ಎಂದು ಶೆಟ್ಟರ್ ಅವರು ಸುದ್ದಿಗಾರರಿಗೆ ಹೇಳಿದರು.

ಶೆಟ್ಟರ್ ಅವರು ಪ್ರಲ್ಹಾದ ಜೋಶಿಯವರ ಮಗಳ ಮದುವೆಯ ಆರತಕ್ಷತೆ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ಬಂದಿದ್ದರು.

ದಾವಣಗೆರೆಯಲ್ಲಿ ಅಮಿತ್ ಶಾ ಅವರು ಬೊಮ್ಮಾಯಿ ಆಡಳಿತವನ್ನು ಶ್ಲಾಘಿಸಿ, ಚುನಾವಣೆಯ ನೇತೃತ್ವದ ಬಗ್ಗೆ ಹೇಳಿಕೆ ನೀಡಿದ ಬಳಿಕ ಶೆಟ್ಟರ್ ಅವರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಹೇಳಿಕೆ ಬಗ್ಗೆ ಚರ್ಚಿಸಿದ್ದರು.

ಸಂತೋಷ್ ಭೇಟಿ ಮಾಡಿದ ಬೊಮ್ಮಾಯಿ




ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನವದೆಹಲಿಯಲ್ಲಿ ಮಂಗಳವಾರ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕಾರಣದ ಕುರಿತು ಚರ್ಚೆ ನಡೆಸಿದರು.

ಸುಮಾರು 40 ನಿಮಿಷಗಳ ಕಾಲದ ಮಾತುಕತೆಯ ಸಂದರ್ಭದಲ್ಲಿ ಬೊಮ್ಮಾಯಿ ಜತೆ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಇದ್ದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, ಇತ್ತೀಚೆಗೆ ಮುಗಿದ ಮಹಾನಗರ ಪಾಲಿಕೆಗಳ ಚುನಾವಣೆ ಫಲಿತಾಂಶ ಮತ್ತು ಪಕ್ಷದ ಸಂಘಟನೆ ಬಲಪಡಿಸುವ ಕುರಿತು ಚರ್ಚಿಸಲಾಯಿತು ಎಂದರು.

‘ಸಂಪುಟದಲ್ಲಿ ಖಾಲಿ ಉಳಿದಿರುವ ಸಚಿವ ಸ್ಥಾನಗಳನ್ನು ಭರ್ತಿ ಮಾಡುವ ಬಗ್ಗೆ ಚರ್ಚೆ ನಡೆಯಲಿಲ್ಲ’ ಎಂದೂ ಬೊಮ್ಮಾಯಿ ಹೇಳಿದರು.

ದಾರಿ ತಪ್ಪಿಸುತ್ತಿರುವ ಬಿಜೆಪಿ ನಾಯಕರು: ಸಿದ್ದರಾಮಯ್ಯ



ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯದಲ್ಲಿ ಬಿಜೆಪಿ ಸರ್ಕಾರ ಯಾವತ್ತೂ ಮುಂಬಾಗಿಲ ಮೂಲಕ ಅಧಿಕಾರ ಹಿಡಿದಿಲ್ಲ. ಇಂಥ ಸರ್ಕಾರದಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಗೌರಿ- ಗಣೇಶ ಹಬ್ಬದ ಅಂಗವಾಗಿ ಬ್ಯಾಟರಾಯನಪುರ ಕ್ಷೇತ್ರದಲ್ಲಿ ಸ್ಥಳೀಯ ಶಾಸಕ ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ದಿನಸಿ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಿಜೆಪಿಯವರು ಜನರಿಗೆ ಸುಳ್ಳು ಹೇಳಿ ಹೇಗೆ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂಬುದನ್ನು ನಾವೆಲ್ಲ ಅರ್ಥಮಾಡಿಕೊಳ್ಳಬೇಕು’ ಎಂದರು.

‘ಯಾವ ಸರ್ಕಾರ ಬಂದರೂ ಸಾಲ ಮಾಡುತ್ತವೆ. ನಾನೂ ಮಾಡಿದ್ದೆ. ನನ್ನ ಐದು ವರ್ಷಗಳ ಆಡಳಿತದಲ್ಲಿ ₹ 1.25 ಲಕ್ಷ ಕೋಟಿ ಸಾಲ ಮಾಡಿದ್ದೆ. ಆದರೆ, ಯಡಿಯೂರಪ್ಪ ಸರ್ಕಾರ ಕೇವಲ ಎರಡು ವರ್ಷಗಳಲ್ಲಿ ₹ 1.45 ಲಕ್ಷ ಕೋಟಿ ಸಾಲ ಮಾಡಿದ್ದರು. ಇಂಥ ಬಿಜೆಪಿಯವರಿಗೆ ಸರ್ಕಾರ ನಡೆಸಲು ಯಾವ ನೈತಿಕತೆ ಉಳಿದಿದೆ. ಈ ರಾಜ್ಯಕ್ಕೆ ಒಳ್ಳೆಯದಾಗಬೇಕು ಎಂದಾದರೆ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕು’ ಎಂದರು.

ರವಿ, ಕತ್ತಿ ವಿರುದ್ಧ ಕಿಡಿ

‘ಅವನು ಯಾರೋ ಸಿ.ಟಿ. ರವಿ ಅಂತ ಇದ್ದಾನೆ. ಅವನಿಗೆ ಮಾನ, ಮರ್ಯಾದೆ ಇಲ್ಲ. ಇಂದಿರಾ ಗಾಂಧಿ ಗರೀಬಿ ಹಟಾವೋ ಆಂದೋಲನ ಮಾಡಿದ್ದರು ಎನ್ನುವುದು ಗೊತ್ತಿಲ್ಲ. ಒಬ್ಬರಿಗೆ ನಾಲ್ಕು ಕೆಜಿ ಅಕ್ಕಿ ಸಾಕು ಎಂದು ಆಹಾರ ಸಚಿವ ಕತ್ತಿ ಹೇಳ್ತಾನೆ. ಅವನಿಗೇನೊ ಸಕ್ಕರೆ ಕಾಯಿಲೆ ಇರಬಹುದು. ಬೇರೆಯವರಿಗೆ ನಾಲ್ಕು ಕೆಜಿ ಸಾಲುತ್ತಾ’ ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ಗ್ರಾಮಕ್ಕೆ ಬಂದ ಬಸ್: ವಿದ್ಯಾರ್ಥಿಗಳ ಸಂತಸ

ವರದಿ ಫಲಶ್ರುತಿ

ಅಳವಂಡಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಅಳವಂಡಿ ಹೋಬಳಿಯ ಮೋರನಾಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳ ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯು ಬಸ್ ಆರಂಭಿಸಿದ್ದು, ಇದು ವಿದ್ಯಾರ್ಥಿಗಳ ಸಂತಸಕ್ಕೆ ಕಾರಣವಾಗಿದೆ.

ಈ ಕುರಿತು ‘ಪ್ರಜಾವಾಣಿ’ಯಲ್ಲಿ ವರದಿ ಪ್ರಕಟವಾಗಿತ್ತು. ಈ ಕಾರಣ ಕೊಪ್ಪಳ ವಿಭಾಗೀಯ ಸಂಚಾರ ನಿಯಂತ್ರಣಾಧಿಕಾರಿ ಎಂ.ಎ.ಮುಲ್ಲಾ, ವ್ಯವಸ್ಥಾಪಕ ಬಸವರಾಜ್, ಸಿಬ್ಬಂದಿ ನಾಗರಾಜ್ ಅವರು ಅಳವಂಡಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು.

ಮುಂಡರಗಿ ಸಮೀಪದ, ತಾಲ್ಲೂಕಿನ ಕೊನೆಯ ಭಾಗದ ಹಳ್ಳಿಯಾದ ಇಲ್ಲಿ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಿತ್ಯ ಅಳವಂಡಿಯ ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಬರುತ್ತಾರೆ. ಎರಡು ವರ್ಷದಿಂದ ಸಂಚಾರ ರದ್ದು ಮಾಡಿದ್ದರಿಂದ ಬಸ್‌ಗಳು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿತ್ತು. ಪತ್ರಿಕೆಯ ವರದಿಯನ್ನು ನೋಡಿದ ಅಧಿಕಾರಿಗಳು ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳು ಮತ್ತು ಮುಖ್ಯ ಶಿಕ್ಷಕ ಸುರೇಂದ್ರಗೌಡ ಪಾಟೀಲ ಅವರೊಂದಿಗೆ ಚರ್ಚೆ ನಡೆಸಿದರು.

ನಂತರ ಮಾತನಾಡಿದ ಮುಲ್ಲಾ, ‘ಕೊಪ್ಪಳ- ಮುಂಡರಗಿ ಮಾರ್ಗವಾಗಿ ಈಗಾಗಲೇ ಕೆಲವು ಬಸ್‌ಗಳು ಸಂಚಾರಿಸುತ್ತಿವೆ. ವಿದ್ಯಾರ್ಥಿಗಳು ಶಾಲೆಯ ಸಮಯಕ್ಕೆ ಬಸ್ ಓಡಿಸಲು ಮನವಿ ಮಾಡಿದ್ದಾರೆ. ಮೋರನಾಳ ಗ್ರಾಮಕ್ಕೂ ಭೇಟಿ ನೀಡಿ ಅಲ್ಲಿನ ಜನರ ಸಮಸ್ಯೆ ಆಲಿಸಿದ್ದೇವೆ. ಬೆಳಿಗ್ಗೆ 9 ಮತ್ತು ಮಧ್ಯಾಹ್ನ 1, ಸಂಜೆ 5ಕ್ಕೆ ಬಸ್ ಆರಂಭಿಸಿದ್ದೇವೆ' ಎಂದು ಹೇಳಿದರು.

‘ಪ್ರಜಾವಾಣಿ ವರದಿಯಿಂದ ವಿದ್ಯಾರ್ಥಿಗಳ ಸಮಸ್ಯೆ ಪರಿಹಾರವಾಯಿತು’ ಎಂದು ಗ್ರಾಮಸ್ಥರ ಹನಮಂತಪ್ಪ ಮೋರನಾಳ ತಿಳಿಸಿದರು.

‘ಬೆಲೆ ಏರಿಕೆ, ಆರ್ಥಿಕ ಪರಿಸ್ಥಿತಿ, ಎನ್‌ಇಪಿ ಅಸ್ತ್ರ’

ಬೆಂಗಳೂರು: ಬೆಲೆ ಏರಿಕೆ, ಕುಸಿದಿರುವ ಕಾನೂನು ಸುವ್ಯವಸ್ಥೆ, ಅಧೋಗತಿಗೆ ಇಳಿದಿರುವ ಆರ್ಥಿಕ ಪರಿಸ್ಥಿತಿ ಮತ್ತಿತರ ವಿಷಯಗಳನ್ನು ಅಸ್ತ್ರವಾಗಿ ಮಾಡಿಕೊಂಡು ವಿಧಾನ ಮಂಡಲದ ಉಭಯ ಸದನಗಳಲ್ಲಿ ಹೋರಾಟ ನಡೆಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ನಿರ್ಧರಿಸಿದೆ.

ಸದನದಲ್ಲಿ ಚರ್ಚೆಗೆ ಎತ್ತಿಕೊಳ್ಳಬೇಕಾದ ವಿಷಯಗಳ ಬಗ್ಗೆ ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಸಮಾಲೋಚನೆ ನಡೆಯಿತು.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ. ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ಪ್ರಕರಣಗಳು ನಿತ್ಯ ವರದಿಯಾಗುತ್ತಿದೆ. ಮೈಸೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ. ಇತ್ತೀಚೆಗೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವೇ ಇದಕ್ಕೆ ಸಾಕ್ಷಿ. ಭ್ರಷ್ಟಾಚಾರ ಮಿತಿ ಮೀರಿದೆ. ಜನರ ನೋವಿಗೆ ಸದನದಲ್ಲಿ ಧ್ವನಿಯಾಗಬೇಕು' ಎಂದು ಪಕ್ಷದ ಶಾಸಕರಿಗೆ ಸಿದ್ದರಾಮಯ್ಯ ತಿಳಿಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್, ಆರ್. ಧ್ರುವ ನಾರಾಯಣ, ಮುಖಂಡರಾದ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ, ಕೆ.ಆರ್. ರಮೇಶ್ ಕುಮಾರ್ ಇತರರು ಇದ್ದರು.

ನಿಧನ ಸುದ್ದಿ

ಮಾಜಿ ಸಚಿವ ಎ.ಕೆ. ಅಬ್ದುಲ್ ಸಮದ್



ರಾಮನಗರ: ಮಾಜಿ ಸಚಿವ ಎ.ಕೆ. ಅಬ್ದುಲ್ ಸಮದ್ (86) ಮಂಗಳವಾರ ಬೆಂಗಳೂರಿನ ಬೆನ್ಸನ್ ಟೌನ್ ನಿವಾಸದಲ್ಲಿ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.

ಕಾಂಗ್ರೆಸ್‌ನ ನಾಯಕರಾಗಿದ್ದ ಅಬ್ದುಲ್ ಸಮದ್ 1978ರಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಆರ್. ಗುಂಡೂರಾವ್ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು. 1983ರ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡ ಬಳಿಕ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು.

ಕಲ್ಯಾಣ ಕರ್ನಾಟಕ, ಕರಾವಳಿಯಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಮಂಗಳೂರು/ಮಡಿಕೇರಿ: ಕಲ್ಯಾಣ ಕರ್ನಾಟಕ, ಕರಾವಳಿ ಜಿಲ್ಲೆಗಳು ಹಾಗೂ ಕೊಡಗಿನಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ.

ಮಹಾರಾಷ್ಟ್ರದ ಹಲವೆಡೆ ಭಾರಿ ಮಳೆ ಸುರಿಯುತ್ತಿರುವುದರಿಂದ ಭೀಮಾ ನದಿ ತುಂಬಿ ಹರಿಯುತ್ತಿದೆ. ಮಂಗಳವಾರ 95 ಸಾವಿರ ಕ್ಯುಸೆಕ್ ನೀರನ್ನು ಸನ್ನತಿ ಬ್ರಿಜ್ ಕಂ ಬ್ಯಾರೇಜ್‌ನಿಂದ ಭೀಮಾ ನದಿಗೆ ಹರಿಸಲಾಗುತ್ತಿದೆ.

ಯಾದಗಿರಿ ಜಿಲ್ಲೆಯ ಭೀಮಾ ನದಿ ಸೇತುವೆ ಬಳಿ ಇರುವ ಕಂಗಳೇಶ್ವರ ಹಾಗೂ ವಿರಾಂಜನೇಯ ದೇಗುಲಗಳು ಜಲಾವೃತವಾಗಿವೆ. ಯಾದಗಿರಿ ನಗರ ಸೇರಿದಂತೆ ಜಿಲ್ಲೆಯ ಶಹಾಪುರ, ಸುರಪುರ, ಯಾದಗಿರಿ, ಗುರುಮಠಕಲ್, ವಡಗೇರಾ, ಹುಣಸಗಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಕಲಬುರ್ಗಿ ನಗರ ಸೇರಿದಂತೆ ಆಳಂದ, ಚಿಂಚೋಳಿ, ಕಾಳಗಿ, ಯಡ್ರಾಮಿ, ಸೇಡಂ, ಚಿತ್ತಾಪುರ ತಾಲ್ಲೂಕಿನ ಹಲವೆಡೆ ಮಳೆಯಾಗಿದೆ. ಚಿಂಚೋಳಿ ತಾಲ್ಲೂಕಿನ 20 ಕೆರೆಗಳು ಈಚೆಗೆ ಸುರಿದ ಮಳೆಯಿಂದಾಗಿ ಭರ್ತಿಯಾಗಿವೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕಾರಂಜಾ ಜಲಾಶಯ, ಬಸವಕಲ್ಯಾಣ ತಾಲ್ಲೂಕಿನ ಚುಳಕಿನಾಲಾ, ಮೇಲ್ದಂಡೆ ಮುಲ್ಲಾಮರಿ ಜಲಾಶಯ ಭರ್ತಿಯಾಗಿದ್ದು, ಹೆಚ್ಚುವರಿ ನೀರನ್ನು ಹರಿಯ ಬಿಡಲಾಗುತ್ತಿದೆ.



ಬೀದರ್ ಜಿಲ್ಲೆ ಕಮಲನಗರ ತಾಲ್ಲೂಕಿನ ಸೋನಾಳ ಗ್ರಾಮದ ಹೊಲದಲ್ಲಿನ ತೊಗರಿ, ಸೋಯಾ ಬೆಳೆಯಲ್ಲಿ ನೀರು ನಿಂತಿರುವುದು

ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಬೆಳೆಗಳು ನೀರಿನಲ್ಲಿ ಮುಳುಗಿವೆ. ಮಳೆ ಕಾರಣ ಬೆಳೆ ಸಮೀಕ್ಷೆಗೆ ತೊಡಕಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕರಾವಳಿಯಲ್ಲಿ ಉತ್ತಮ ಮಳೆ: ಕರಾವಳಿ ಜಿಲ್ಲೆಗಳಲ್ಲಿ ನಿರಂತರ ಮಳೆ ಮುಂದುವರಿದಿದ್ದು, ಒಂದು ಮನೆಗೆ ಭಾಗಶಃ ಹಾನಿಯಾಗಿದೆ. 4 ವಿದ್ಯುತ್ ಕಂಬಗಳು ಹಾಗೂ 200 ಮೀಟರ್ ವಿದ್ಯುತ್ ಮಾರ್ಗಕ್ಕೆ ಹಾನಿಯಾಗಿದೆ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಣಿಯಲ್ಲಿ 10.9 ಸೆಂ.ಮೀ ಮಳೆಯಾಗಿದೆ. ಬೈಂದೂರು ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಮರಬಿದ್ದು ಮನೆಗೆ ಹಾನಿಯಾಗಿದೆ. ಸೆ.12ರವರೆಗೆ ಕರಾವಳಿಯಾದ್ಯಂತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ವ್ಯಕ್ತಿ ಸಾವು (ಶಿವಮೊಗ್ಗ ವರದಿ): ಸಂತೇಬೆನ್ನೂರು ಸಮೀಪದ ದೊಡ್ಡಮಲ್ಲಾಪುರ ಗ್ರಾಮದಲ್ಲಿ ಸೋಮವಾರ ತಡರಾತ್ರಿ ಮನೆಗೋಡೆ ಕುಸಿದು ದೇವೇಂದ್ರಪ್ಪ (65) ಸಾವನ್ನಪ್ಪಿದ್ದಾರೆ.

ಕೊಡಗಿನ ವಿವಿಧೆಡೆ ಧಾರಾಕಾರ ಮಳೆ: ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ಮಾದಾಪುರ, ಸುಂಟಿಕೊಪ್ಪ, ಗರ್ವಾಲೆ, ಸೂರ್ಲಬ್ಬಿ ಭಾಗದಲ್ಲಿ ಮಂಗಳವಾರ ದಿನವಿಡೀ ಧಾರಾಕಾರ ಮಳೆಯಾಗಿದೆ. ಜಿಲ್ಲೆಯಲ್ಲಿ ಮತ್ತೆ ಬಿರುಸಿನ ಮಳೆಯಾಗುತ್ತಿದ್ದು ನದಿಗಳಲ್ಲಿ ನೀರಿನಮಟ್ಟ ಏರಿಕೆ ಕಂಡು ಬಂದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)


ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	115.98	10,479	10,786
ಹಾರಂಗಿ	2,859	2,857.89	2,899	3,553
ಕಬಿನಿ	2284.00	2,279.81	4,554	700
ಹೇಮಾವತಿ	2,922	2,915	2,300	5,270
ಲಿಂಗನಮಕ್ಕಿ	1,819	1,813.20	12,748	-
ಸೂಪಾ (ಮೀ)	564	555.12	8,857	1,933
ಮಾಣಿ	594	586.50	1,648	-
ತುಂಗಭದ್ರಾ	1,633	1,632.86	11,856	14,940
ಮಲಪ್ರಭಾ	2079.5	2,078.70	1,394	1,394
ಘಟಪ್ರಭಾ	2175	2,175.00	1,579	1,579
ಭದ್ರಾ	186	185.40	3,751	3,751
ಆಲಮಟ್ಟಿ (ಮೀ)	519.6	519.60	5,432	5,432
ನಾರಾಯಣಪುರ (ಮೀ)	492.25	491.79	8,800	4,600

* ನೆಲಮಟ್ಟದಿಂದ

ಸ್ಪರ್ಧಾತ್ಮಕ ಪರೀಕ್ಷೆ ಆಕಾಂಕ್ಷಿಗಳಿಗೆ ಯೂಟ್ಯೂಬ್ ಮೂಲಕ ಪಾಠ

ಅಂಧ ವಿದ್ಯಾರ್ಥಿನಿಯ ಚಿನ್ನದ ಸಾಧನೆ

ಪ್ರಜಾವಾಣಿ ವಾರ್ತೆ



ಎಚ್.ಎನ್.ಲತಾ

ಮೈಸೂರು: ‘ಅಪ್ಪ-ಅಮ್ಮ ಓದಲಿಲ್ಲ. ಆದರೆ ಕೂಲಿ ಮಾಡಿ ನನ್ನನ್ನು ಸಾಕಿ ಈ ಹಂತಕ್ಕೆ ತಂದ ಅವರಿಗೆ ಈ ಪದಕವನ್ನು ಅರ್ಪಿಸುವೆ. ಇನ್ನು ಮುಂದೆ ಅವರ ಹೊಣೆ ನನ್ನದು’ ಎಂದು ಧನ್ಯತೆಯಿಂದ ನಕ್ಕರು ಅಂಧ ವಿದ್ಯಾರ್ಥಿನಿ ಎಚ್.ಎನ್. ಲತಾ.

-ನಗರದಲ್ಲಿ ಮಂಗಳವಾರ ನಡೆದ ಮೈಸೂರು ವಿಶ್ವವಿದ್ಯಾಲಯದ 101ನೇ ಘಟಿಕೋತ್ಸವದಲ್ಲಿ, ಎಂ.ಎ. ಕನ್ನಡದಲ್ಲಿ ಚಿನ್ನದ ಪದಕ ಪಡೆದ ಅವರು ಪೋಷಕರ ಶ್ರಮವನ್ನು ಸ್ಮರಿಸಿದರು.

ಕನ್ನಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುವವರಿಗಾಗಿ ಅವರು ‘ನುಡಿತೋರಣ’ ಎಂಬ ಯೂಟ್ಯೂಬ್ ಚಾನಲ್ ಆರಂಭಿಸಿದ್ದಾರೆ. ವ್ಯಾಕರಣ, ಸಾಹಿತ್ಯ ಸೇರಿದಂತೆ ಕನ್ನಡದ ವಿಚಾರಗಳ ಕುರಿತು ಪಾಠ ಮಾಡಿ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಿದ್ದಾರೆ.


‘ಸ್ನಾತಕೋತ್ತರ ಪದವಿಯಲ್ಲಿ ಬ್ರೈಲ್ ಲಿಪಿ ಪಠ್ಯ ಇಲ್ಲ. ಹೀಗಾಗಿ, ಪಠ್ಯಗಳನ್ನು ತಂಗಿ ಹಾಗೂ ಸ್ನೇಹಿತರು ರೆಕಾರ್ಡ್ ಮಾಡಿಕೊಟ್ಟರು. ಕೋವಿಡ್ ಸಮಯದಲ್ಲಿ ತುಂಬಾ ಕಷ್ಟವಾಯಿತು. ಕಂಪ್ಯೂಟರ್‌ನಲ್ಲಿ ನುಡಿ ತಂತ್ರಾಂಶ ಬಳಸಿ ಪ್ರಬಂಧ ಬರೆದೆ. ನಮ್ಮಂಥವರಿಗೆ ತಂತ್ರಜ್ಞಾನ ನೆರವಿಗೆ ಬಂದಿದೆ. ಚಿನ್ನದ ಪದಕ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಎನ್‌ಇಟಿ, ಕೆ-ಸೆಟ್ ಪರೀಕ್ಷೆ ಪಾಸ್ ಮಾಡಿದ್ದು, ಶಿಕ್ಷಕಿಯಾಗಿ ಕೆಲಸ ಮಾಡುತ್ತೇನೆ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಪಿರಿಯಾಪಟ್ಟಣತಾಲ್ಲೂಕಿನಹಂಡಿತವಳ್ಳಿಯ ಅವರು ಮಹಾರಾಣಿ ಕಾಲೇಜಿನಲ್ಲಿ ಪದವಿ, ಶಾರದಾ ವಿಲಾಸ ಕಾಲೇಜಿನಲ್ಲಿ ಬಿ.ಇಡಿ ಪದವಿ ಪಡೆದಿದ್ದಾರೆ.

ರೈತನ ಪುತ್ರಿಗೆ 10 ಪದಕ: ಚಾಮರಾಜನಗರ ಜಿಲ್ಲೆಯ ತಮ್ಮಡಹಳ್ಳಿ ರೈತ ಕುಟುಂಬದ ಟಿ.ಎಸ್. ಮಾದಲಾಂಬಿಕೆ (ಕನ್ನಡ ಎಂ.ಎ) 10 ಚಿನ್ನದ ಪದಕ ಹಾಗೂ 4 ದತ್ತಿ ಬಹುಮಾನ ಪಡೆದರು.

‘ಕೆಲವು ವರ್ಷದ ಹಿಂದೆ, ಪಕ್ಕದ ಊರಿನ ವಿದ್ಯಾರ್ಥಿಯೊಬ್ಬರು ಪದಕ ಗಳಿಸಿದ್ದನ್ನು ಹೇಳಿದ್ದ ತಂದೆ ನನ್ನಲ್ಲೂ ಮಹತ್ವಾಕಾಂಕ್ಷೆಯನ್ನು ಚಿಗುರಿಸಿದ್ದರು. ಅವರು ಈಗ ಬದುಕಿಲ್ಲ. ಆದರೆ, ಅವರ ಕನಸನ್ನು ನನಸು ಮಾಡಿದ ಖುಷಿ ಇದೆ. ನಾವು ನಾಲ್ವರು ಹೆಣ್ಣು ಮಕ್ಕಳು. ನಾನೇ ಕಿರಿಯವಳು. ತಾಯಿಯನ್ನು ಸಾಕುವ ಜವಾಬ್ದಾರಿಯೂ ನನ್ನ ಮೇಲಿದೆ’ ಎಂದರು.

ಮಗಳ ಜೊತೆ ತಂದೆ ಸಂಭ್ರಮ




ಮೀನಾಕ್ಷಿ

ಬೀದರ್ ಜಿಲ್ಲೆಯ ಶಹಾಪುರ ಗ್ರಾಮದ ಮೀನಾಕ್ಷಿ (ಎಂ.ಎ ತತ್ವಶಾಸ್ತ್ರ) 6 ಪದಕ, 3 ದತ್ತಿ ಬಹುಮಾನಕ್ಕೆ ಪಾತ್ರರಾದರು. ಕಾರ್ಮಿಕ ತಂದೆ ಭೀಮಾಶಂಕರ್ ಕೂಡ ಮಗಳ ಜೊತೆಗಿದ್ದು ಖುಷಿಪಟ್ಟರು. ಕ್ರಾಫರ್ಡ್ ಭವನದ ಮುಂದೆ ಚಿನ್ನದ ಪದಕ ಹಿಡಿದು ಫೋಟೊ ತೆಗೆಸಿಕೊಂಡರು.

‘ಬಿಬಿಎಂ ಓದಿದ್ದೆ. ಆದರೆ, ತತ್ವಶಾಸ್ತ್ರದಲ್ಲಿ ಆಸಕ್ತಿ ಬಂತು. ಬಡತನವಿದ್ದರೂ, ಕಷ್ಟಗಳು ಎದುರಾದರೂ ವ್ಯಾಸಂಗಕ್ಕೆ ಪೋಷಕರು ಅಡ್ಡಿ ಮಾಡಲಿಲ್ಲ. ನಾಲ್ವರು ಸಹೋದರಿಯರು, ಅಣ್ಣನನ್ನು ಚೆನ್ನಾಗಿ ಓದಿಸಿದ್ದಾರೆ. ನಮ್ಮಿಂದ ಪೋಷಕರಿಗೆ ಉತ್ತಮ ಬದುಕು ಸಿಗಬೇಕೆಂಬುದು ನನ್ನ ಮಹದಾಸೆ’ ಎಂದು ಮೀನಾಕ್ಷಿ ತಿಳಿಸಿದರು.

‘ಬುರ್ಖಾ ಸಂಸ್ಕೃತಿ ಬೆಂಬಲಿಸುವವರು ತಾಲಿಬಾನಿಗಳು’



ಸೊಗಡು ಶಿವಣ್ಣ


ತುಮಕೂರು: ‘ಬುರ್ಖಾ ಧರಿಸುವುದು ನಮ್ಮ ಸಂಸ್ಕೃತಿಯಲ್ಲ. ಅದನ್ನು ಬೆಂಬಲಿಸುವವರು ತಾಲಿಬಾನ್ ಉಗ್ರಗಾಮಿಗಳು. ದೇಶದಲ್ಲಿ ಬುರ್ಖಾ ಧರಿಸುವುದನ್ನು ನಿಷೇಧಿಸಬೇಕು’ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ಸೊಗಡು ಶಿವಣ್ಣ ಒತ್ತಾಯಿಸಿದ್ದಾರೆ.

‘ಸಮಾಜದಲ್ಲಿ ಹೆಣ್ಣು ಮಕ್ಕಳು ಮುಕ್ತವಾಗಿ ಬದುಕಲು ಅವಕಾಶ ಮಾಡಿಕೊಡಬೇಕು. ಬುರ್ಖಾ ಧರಿಸುವುದನ್ನು ನಿಲ್ಲಿಸುವ ಕೆಲಸ ಮಾಡಬೇಕು. ತಾಲಿಬಾನ್ ಸಂಸ್ಕೃತಿಯನ್ನು ಮನುಕುಲ ಖಂಡಿಸಬೇಕು. ಪಾಕಿಸ್ತಾನದ ಜತೆಗಿನ ಸಂಬಂಧಗಳನ್ನು ಕಡಿದುಕೊಳ್ಳಬೇಕು’ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

‘ದೇಶದಲ್ಲಿ ಸಮಾನ ನಾಗರಿಕ ಕಾನೂನು ಜಾರಿಗೆ ತರುವ ಮೂಲಕ ಎಲ್ಲರೂ ಸಮಾನರು ಎಂಬ ವಾತಾವರಣ ಮೂಡಿಸುವ ಕೆಲಸವನ್ನು ಪ್ರಧಾನಿ ಮೋದಿ ಮಾಡಬೇಕು’ ಎಂದರು.

ವಿದ್ಯಾರ್ಥಿಗಳ ಅನಿಸಿಕೆ


ನೆರವು ಮರೆಯುವುದಿಲ್ಲ



ತಾಯಿಯ ಸಂಪಾದನೆಯಲ್ಲೇ ನನ್ನ ಮತ್ತು ತಮ್ಮನ ಶಿಕ್ಷಣ ಸಾಗಬೇಕು. ಇಬ್ಬರ ಶೈಕ್ಷಣಿಕ ವೆಚ್ಚಕ್ಕೆ ಹಣ ಹೊಂದಿಸುವುದು ತಾಯಿಗೆ ತುಂಬಾ ಕಷ್ಟವಾಗಿತ್ತು. ಪಿಯುಸಿಗೆ ಒಳ್ಳೆಯ ಕಾಲೇಜಿಗೆ ಸೇರಬೇಕೆಂದು ಬಯಸಿದ್ದೆ. ಆದರೆ, ಮನೆಯ ಹಣಕಾಸು ಪರಿಸ್ಥಿತಿ ನೆನೆದು ಶಿಕ್ಷಣ ಮುಂದುವರಿಸುವುದು ಹೇಗೆಂದು ಚಿಂತೆಯಾಗಿತ್ತು. ಆಗ ‘ಪ್ರಜಾವಾಣಿ’ ಶೈಕ್ಷಣಿಕ ನೆರವು ನಿಧಿಯು ನನ್ನ ಶಿಕ್ಷಣಕ್ಕೆ ಸಹಾಯಹಸ್ತ ಚಾಚಿತು. ಪತ್ರಿಕೆ ನೀಡಿದ ಆರ್ಥಿಕ ನೆರವಿನಲ್ಲಿ ಕಾಲೇಜಿನ ಪ್ರವೇಶ ಶುಲ್ಕ ಪಾವತಿಸಿದೆ. ಕಷ್ಟ ಕಾಲದಲ್ಲಿ ನೆರವಾದ ಪತ್ರಿಕೆಯ ಸಾಮಾಜಿಕ ಕಾಳಜಿ ಎಂದಿಗೂ ಮರೆಯುವುದಿಲ್ಲ.

ಎಂ.ಎನ್.ಸುಮನಾ, ಕೋಲಾರ

ಸಮಾಜಮುಖಿ ಪ್ರಯತ್ನ




‘ಪ್ರಜಾವಾಣಿ’ ಪತ್ರಿಕೆಯ ಶೈಕ್ಷಣಿಕ ನೆರವು ನಿಧಿಯು ನನ್ನ ಶೈಕ್ಷಣಿಕ ಬದುಕಿಗೆ ಆಧಾರ ಸ್ತಂಭವಾಯಿತು.

ಶೈಕ್ಷಣಿಕ ನಿಧಿ ಹಣದಲ್ಲಿ ಬಸ್ ಪಾಸ್ ಶುಲ್ಕ ಪಾವತಿಸಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಬಡತನದ ಕಾರಣಕ್ಕೆ ಶಿಕ್ಷಣ ಮೊಟಕುಗೊಳಿಸುವ ಪರಿಸ್ಥಿತಿಯಿದೆ. ಅಂತಹ ಪ್ರತಿಭಾವಂತರನ್ನು ಗುರುತಿಸಿ ಅವರ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುತ್ತಿರುವ ಪತ್ರಿಕೆಯ ಸಮಾಜಮುಖಿ ಪ್ರಯತ್ನ ಶ್ಲಾಘನೀಯ.

ಕೆ.ಚರಣ್, ಕೋಲಾರ

ಮುಸ್ಲಿಮರ ಮತ ನಿರೀಕ್ಷೆ ಮಾಡಲ್ಲ: ಶಾಸಕರ ಹೇಳಿಕೆಗೆ ಆಕ್ಷೇಪ



ಮಹಾದೇವಪ್ಪ ಯಾದವಾಡ

ರಾಮದುರ್ಗ (ಬೆಳಗಾವಿ ಜಿಲ್ಲೆ): ‘ಮುಸ್ಲಿಮರು ಯಾವುದೇ ಕಾರಣಕ್ಕೂ ಬಿಜೆಪಿಗೆ ಮತ ನೀಡುವುದಿಲ್ಲ. ಅವರ ಮತಗಳ ನಿರೀಕ್ಷೆಯನ್ನೂ ನಾವು ಮಾಡುವುದಿಲ್ಲ’ ಎಂದು ರಾಮದುರ್ಗ ಶಾಸಕ ಮಹಾದೇವಪ್ಪ ಯಾದವಾಡ ಹೇಳಿದ್ದು ಆಕ್ರೋಶಕ್ಕೆ ಕಾರಣವಾಯಿತು.

ತೊರಗಲ್ ಗ್ರಾಮದಲ್ಲಿ ಮಂಗಳವಾರ ಪ್ರಾಥಮಿಕ ಶಾಲಾ ಕೊಠಡಿಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಅಲ್ಲಿದ್ದ ಕೆಲವರು ಶಾಸಕರ ಈ ಮಾತಿಗೆ ಆಕ್ರೋಶ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗುತ್ತಿದ್ದಂತೆ ಇನ್ನುಳಿದ ಮುಸ್ಲಿಮರು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ನಂತರ ತೊರಗಲ್ ಗಚ್ಚಿನಮಠದ ಚನ್ನಮಲ್ಲ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ‘ಹಿಂದೂ-ಮುಸ್ಲಿಮರು ಒಂದೇ ಕುಟುಂಬದ ಸದಸ್ಯರಂತೆ ಇಲ್ಲಿ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಕಿಡಿ ಹೊತ್ತಿಸುವ ಹೇಳಿಕೆ ನೀಡುವುದು ಸೂಕ್ತವಲ್ಲ’ ಎಂದರು.

‘ತೊರಗಲ್ ಗ್ರಾಮದಲ್ಲಿ ಬಹುತೇಕ ಮುಸ್ಲಿಮರೇ ಇದ್ದಾರೆ. ಈ ಬಾರಿ ಬಿಜೆಪಿಗೆ ಹೆಚ್ಚಿನ ಮತಗಳು ಲಭ್ಯವಾಗಿವೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕರು ಮುಸ್ಲಿಮರ ಮನಸ್ಸು ನೋಯಿಸಿದ್ದಾರೆ’ ಎಂದು ತೊರಗಲ್ ಗ್ರಾ.ಪಂ. ಸದಸ್ಯ ಇರ್ಫಾನ್ ತಹಶೀಲ್ದಾರ್ ಆಕ್ರೋಶ ವ್ಯಕ್ತಪಡಿಸಿದರು.

ಪಂಜ್‌ಶಿರ್ ಮೇಲೆ ತಾಲಿಬಾನ್ ಪರವಾಗಿ ವಾಯುದಾಳಿ ನಡೆಸಿದ ಆರೋಪ

ಪಾಕ್ ವಿರುದ್ಧ ಅಫ್ಗನ್ನರ ಪ್ರತಿಭಟನೆ

ಕಾಬೂಲ್/ಪೆಷಾವರ (ಪಿಟಿಐ): 'ಅಫ್ಗಾನಿಸ್ತಾನದ ಆಂತರಿಕ ವಿಚಾರದಲ್ಲಿ, ಸರ್ಕಾರ ರಚನೆಯಲ್ಲಿ ಪಾಕಿಸ್ತಾನ ಹಸ್ತಕ್ಷೇಪ ಮಾಡುತ್ತಿದೆ' ಎಂದು ಆರೋಪಿಸಿ ಅಫ್ಗಾನಿಸ್ತಾನದ ಪ್ರಜೆಗಳು ಮಂಗಳವಾರ ಪಾಕಿಸ್ತಾನದ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಈ ಪ್ರತಿಭಟನೆಯನ್ನು ಹತ್ತಿಕ್ಕಲು ತಾಲಿಬಾನ್ ಗಾಳಿಯಲ್ಲಿ ಗುಂಡು ಹಾರಿಸಿದೆ.

'ಪಂಜ್‌ಶಿರ್ ಪ್ರಾಂತ್ಯದ ಮೇಲೆ ದಾಳಿ ನಡೆಸಲು ತಾಲಿಬಾನ್‌ಗೆ ಪಾಕಿಸ್ತಾನ ನೆರವು ನೀಡಿದೆ. ತಾಲಿಬಾನ್ ಪರವಾಗಿ ಪಾಕಿಸ್ತಾನದ ವಾಯುಪಡೆಯು ಪಂಜ್‌ಶಿರ್ ಪ್ರಾಂತದ ಮೇಲೆ ವಾಯುದಾಳಿ ನಡೆಸಿದೆ' ಎಂದು ಆರೋಪಿಸಿ ಅಫ್ಗನ್ ಪ್ರಜೆಗಳು ಮಂಗಳವಾರ ಕಾಬೂಲ್‌ನಲ್ಲಿನ ಪಾಕಿಸ್ತಾನ ರಾಯಭಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಲಿಬಾನ್ ವಿರುದ್ಧ ಹೋರಾಟ ನಡೆಸುತ್ತಿರುವ ಪಂಜ್‌ಶಿರ್ ಪ್ರಾಂತದ ನಾಯಕ ಮತ್ತು ತಾಲಿಬಾನ್ ಪ್ರತಿರೋಧ ಪಡೆಯ ಮುಖಂಡ ಅಹ್ಮದ್ ಮಸೂದ್ ಅವರು ಮಂಗಳವಾರ ಬೆಳಿಗ್ಗೆ ಆಡಿಯೊ ಕ್ಲಿಪ್ ಅನ್ನು ಬಿಡುಗಡೆ ಮಾಡಿದ್ದರು. 'ನಮ್ಮ ಆಂತರಿಕ ವಿಚಾರದಲ್ಲಿ ಪಾಕಿಸ್ತಾನ ಹಸ್ತಕ್ಷೇಪ ಮಾಡುತ್ತಿದೆ. ಇದನ್ನು ತಡೆಗಟ್ಟಿ' ಎಂದು ಕರೆ ನೀಡಿದ್ದರು. ಈ ಆಡಿಯೊ ಕ್ಲಿಪ್ ವೈರಲ್ ಆದ ಬೆನ್ನಲ್ಲೇ ಸಾವಿರಾರು ಅಫ್ಗನ್ನರು ಕಾಬೂಲ್‌ನಲ್ಲಿ ಪ್ರತಿಭಟನೆಗೆ ಮುಂದಾದರು. ಮಹಿಳೆಯರು, ಮಕ್ಕಳು ಸಹ ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಿದರು.



ಕಾಬೂಲ್‌ನಲ್ಲಿ ಪ್ರತಿಭಟನನಿರತ ಮಹಿಳೆಯತ್ತ ಬಂದೂಕು ಗುರಿ ಮಾಡಿ ತಾಲಿಬಾನ್ ಸೈನಿಕರ ಬೆದರಿಕೆ ಒಡ್ಡಿದ ರೀತಿ ರಾಯಿಟರ್ಸ್ ಚಿತ್ರ

ವಾಯುದಾಳಿ ದೃಢಪಡಿಸಿದ ಇರಾನ್

ಪಂಜ್‌ಶಿರ್ ಪ್ರಾಂತದ ಮೇಲೆ ವಾಯುದಾಳಿ ನಡೆದಿದೆ ಎಂಬುದನ್ನು ಇರಾನ್ ದೃಢಪಡಿಸಿದೆ.

'ಪಂಜ್‌ಶಿರ್ ಪ್ರಾಂತದ ಮೇಲೆ ಭಾನುವಾರ ಮತ್ತು ಸೋಮವಾರ ವಾಯುದಾಳಿ ನಡೆದಿದೆ. ಹತ್ತಾರು ಯುದ್ಧವಿಮಾನಗಳ ಮೂಲಕ ಈ ದಾಳಿ ನಡೆಸಲಾಗಿದೆ. ತಾಲಿಬಾನ್ ಬಳಿ ಯುದ್ಧವಿಮಾನಗಳು ಇಲ್ಲ. ಅಫ್ಗನ್ ಸೇನೆಯ ಯುದ್ಧವಿಮಾನಗಳನ್ನು ಹಾರಾಟ ನಡೆಸಲು ತಾಲಿಬಾನಿಗಳಿಂದ ಸಾಧ್ಯವಿಲ್ಲ. ವಿದೇಶವೊಂದು ತಾಲಿಬಾನಿಗಳ ಪರವಾಗಿ ಈ ದಾಳಿ ನಡೆಸಿದೆ' ಎಂದು ಇರಾನ್ ಹೇಳಿದೆ. 'ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮುಖಂಡ ಲೆಫ್ಟಿನೆಂಟ್ ಜನರಲ್ ಫೈಜ್ ಹಮೀದ್ ಈಚೆಗೆ ಕಾಬೂಲ್‌ಗೆ ಭೇಟಿ ನೀಡಿದ್ದರು. ತಾಲಿಬಾನ್ ನಾಯಕ ಮುಲ್ಲಾ ಅಬ್ದುಲ್ ಘನಿ ಬರದರ್ ಜತೆ ಮಾತುಕತೆ ನಡೆಸಿದ್ದರು. ಪಾಕಿಸ್ತಾನವೇ ತಾಲಿಬಾನ್ ಪರವಾಗಿ ಈ ದಾಳಿ ನಡೆಸಿದೆ' ಎಂದು ಅಫ್ಘಾನಿಸ್ತಾನದ ಹಲವು ಮಾಧ್ಯಮಗಳು ವರದಿ ಮಾಡಿವೆ. ಈ ಬಗ್ಗೆ ತಾಲಿಬಾನ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಈ ಆರೋಪವನ್ನು ಪಾಕಿಸ್ತಾನ ನಿರಾಕರಿಸಿದೆ.

'ನೆರವು ನೀಡಿ'

ಜಿನೀವಾ (ರಾಯಿಟರ್ಸ್): 'ಅಫ್ಗಾನಿಸ್ತಾನದಲ್ಲಿ ಮೂಲಭೂತ ಸೇವೆಗಳು ನೆಲಕಚ್ಚುತ್ತಿವೆ. ಆಹಾರ ಮತ್ತು ವೈದ್ಯಕೀಯ ಸೇವೆಯ ಕೊರತೆ ಉಂಟಾಗಿದೆ. ಜಾಗತಿಕ ಸಮುದಾಯವು ಅಫ್ಗನ್ನರ ನೆರವಿಗೆ ಧಾವಿಸಬೇಕು' ಎಂದು ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ಸಮನ್ವಯ ಸಂಸ್ಥೆ ಕರೆ ನೀಡಿದೆ.

'ಅಫ್ಗಾನಿಸ್ತಾನದಲ್ಲಿ ಈಗ ಎಲ್ಲಾ ಸೇವೆಯೂ ಕುಸಿದು ಬೀಳುತ್ತಿದೆ. ವೈದ್ಯಕೀಯ ಪರಿಕರಗಳು ಮತ್ತು ಔಷಧಗಳು ಖಾಲಿಯಾಗುತ್ತಿವೆ. ಆಹಾರ ಧಾನ್ಯಗಳ ಕೊರತೆಯಾಗಿದೆ. ಬರದ ಪರಿಸ್ಥಿತಿ ಇರುವ ಕಾರಣ ಜನರು ಆಹಾರವಿಲ್ಲದೆ ಸಾಯುವ ಸ್ಥಿತಿ ಬರಬಹುದು' ಎಂದು ಸಂಸ್ಥೆಯು ಕಳವಳ ವ್ಯಕ್ತಪಡಿಸಿದೆ.

'ದೇಶದ 1.1 ಕೋಟಿ ಜನರು ಕೆಲವೇ ದಿನಗಳಲ್ಲಿ ಸಮಸ್ಯೆಗೆ ಸಿಲುಕಲಿದ್ದಾರೆ. ಆ ಜನರಿಗೆ ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ನೀಡಬೇಕಿದೆ. ಇದಕ್ಕಾಗಿ 60 ಕೋಟಿ ಅಮೆರಿಕನ್ ಡಾಲರ್ (ಅಂದಾಜು ₹4,410 ಕೋಟಿ) ಮೊತ್ತದ ಅವಶ್ಯಕತೆ ಇದೆ' ಎಂದು ಸಂಸ್ಥೆಯು ಹೇಳಿದೆ.

'ತಾಲಿಬಾನ್‌ಗೆ ಮಾನ್ಯತೆ: ಆತುರ ಬೇಡ'

ಕಾದು ನೋಡುವ ತಂತ್ರ ಅನುಸರಿಸೋಣ: ಟರ್ಕಿ ಸಲಹೆ

ಇಸ್ತಾಂಬುಲ್ (ರಾಯಿಟರ್ಸ್/ಎಎಫ್‌ಪಿ/ಎಪಿ): 'ಅಫ್ಗಾನಿಸ್ತಾನದ ಆಡಳಿತಗಾರನಾಗಿ ತಾಲಿಬಾನ್‌ಗೆ ಮಾನ್ಯತೆ ನೀಡುವಲ್ಲಿ ಆತುರ ತೋರುವ ಅವಶ್ಯಕತೆ ಇಲ್ಲ. ಈ ವಿಚಾರದಲ್ಲಿ ಕಾದುನೋಡುವ ತಂತ್ರವನ್ನು ಅನುಸರಿಸಬೇಕು' ಎಂದು ಟರ್ಕಿ ಪ್ರತಿಪಾದಿಸಿದೆ. ಟರ್ಕಿಯು ಇನ್ನೂ ಕಾಬೂಲ್‌ನಲ್ಲಿ ತನ್ನ ರಾಯಭಾರ ಕಚೇರಿಯನ್ನು ನಡೆಸುತ್ತಿದೆ.

ಕಾಬೂಲ್ ವಿಮಾನ ನಿಲ್ದಾಣವನ್ನು ನಿರ್ವಹಣೆ ಮಾಡುವ ಸಂಬಂಧ ತಾಲಿಬಾನ್ ನೀಡಿರುವ ಆಹ್ವಾನವನ್ನು ಪರಿಶೀಲಿಸಲಾಗುತ್ತಿದೆ. ಈ ಸಂಬಂಧ ಅಮೆರಿಕ ಮತ್ತು ಕತಾರ್ ಜತೆಗೆ ಮಾತುಕತೆ ನಡೆಯುತ್ತಿದೆ ಎಂದು ಟರ್ಕಿಯು ಮಂಗಳವಾರ ಹೇಳಿದೆ.

'ತಾಲಿಬಾನ್‌ಗೆ ಮಾನ್ಯತೆ ನೀಡುವ ಸಂಬಂಧ ಐರೋಪ್ಯ ದೇಶಗಳು ಕಾದು ನೋಡುವ ತಂತ್ರದ ಮೊರೆ ಹೋಗಿವೆ. ಮೂಲಭೂತವಾದಿ ಸಂಘಟನೆಯಾದ ತಾಲಿಬಾನ್‌ಗೆ ಅಂತರರಾಷ್ಟ್ರೀಯ ಸಮುದಾಯವು ತಕ್ಷಣವೇ ಅಧಿಕೃತ ಸರ್ಕಾರದ ಮಾನ್ಯತೆ ನೀಡುವುದು ಅಪಾಯಕಾರಿ. ತಾಲಿಬಾನ್ ಸರ್ಕಾರದ ಮಂತ್ರಿಮಂಡಲದಲ್ಲಿ ಮಹಿಳೆಯರು, ಅಫ್ಗಾನಿಸ್ತಾನದ ಎಲ್ಲಾ ಸಾಂಸ್ಕೃತಿಕ ಸಮುದಾಯಗಳಿಗೂ ಪ್ರಾತಿನಿಧ್ಯವಿರಬೇಕು. ಎಲ್ಲರನ್ನೂ ಒಳಗೊಂಡ ಸರ್ಕಾರ ರಚಿಸಿದರೆ ಮಾತ್ರವೇ ತಾಲಿಬಾನ್‌ಗೆ ಮಾನ್ಯತೆ ನೀಡುವುದನ್ನು ಪರಿಗಣಿಸಬಹುದು' ಎಂದು ಟರ್ಕಿ ಹೇಳಿದೆ.

'ಯಾವ ದೇಶವೂ ತಾಲಿಬಾನ್‌ಗೆ ತಕ್ಷಣವೇ ಮಾನ್ಯತೆ ನೀಡಬಾರದು. ಇದನ್ನು ನಾವು ಬಹಳ ಎಚ್ಚರಿಕೆಯಿಂದ ಹೇಳುತ್ತಿದ್ದೇವೆ. ಈ ವಿಚಾರದಲ್ಲಿ ಅಂತರಾರಾಷ್ಟ್ರೀಯ ಸಮುದಾಯ ತಪ್ಪೆಸಗಬಾರದು. ನಾವೆಲ್ಲರೂ ಒಗ್ಗಟ್ಟಾಗಿರಬೇಕು' ಎಂದು ಟರ್ಕಿ ಪ್ರತಿಪಾದಿಸಿದೆ.



ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಂದಹಾರ್‌ನಿಂದ ಮಂಗಳವಾರ ಬಂದಿಳಿದ ವಿಮಾನಕ್ಕೆ ತಾಲಿಬಾನ್ ಸೈನಿಕರು ಭದ್ರತೆ ನೀಡಿದ್ದರು–ರಾಯಿಟರ್ಸ್ ಚಿತ್ರ

'ಸದ್ಯಕ್ಕೆ ವಿಮಾನಯಾನ ಸಾಧ್ಯವಿಲ್ಲ'

'ಕಾಬೂಲ್ ವಿಮಾನ ನಿಲ್ದಾಣದಿಂದ ತಕ್ಷಣವೇ ವಿಮಾನಯಾನ ಸಾಧ್ಯವಿಲ್ಲ' ಎಂದು ಟರ್ಕಿ ಹೇಳಿದೆ.

'ವಿಮಾನ ನಿಲ್ದಾಣದ ಹೊರಗೆ ತಾಲಿಬಾನ್ ಅಥವಾ ಅಫ್ಗನ್ ಸೇನೆ ಭದ್ರತೆ ಒದಗಿಸಬಹುದು. ಆದರೆ ವಿಮಾನ ನಿಲ್ದಾಣದ ಒಳಗೆ ಪ್ರಬಲ ಸೇನೆಯೇ ಭದ್ರತೆ ಒದಗಿಸಬೇಕು. ಆ ಸೇನೆಯನ್ನು ಅಂತರರಾಷ್ಟ್ರೀಯ ಸಮುದಾಯ, ವಿಮಾನಯಾನ ಕಂಪನಿಗಳು ಮತ್ತು ವಿಮಾ ಕಂಪನಿಗಳು ನಂಬಬೇಕು' ಎಂದು ಟರ್ಕಿ ಪ್ರತಿಪಾದಿಸಿದೆ.

'ಈಗ ನಾವು ವಿಮಾನಯಾನ ಆರಂಭಿಸಿದರೂ, ವಿಮೆ ನೀಡಲು ವಿಮಾ ಕಂಪನಿಗಳು ಒಪ್ಪುತ್ತಿಲ್ಲ. ಹೀಗಾಗಿ ವಾತಾವರಣ ತಿಳಿಯಾದ ನಂತರವಷ್ಟೇ ವಿಮಾನಯಾನ ಆರಂಭಿಸಲು ಸಾಧ್ಯ. ವಿಮಾನ ನಿಲ್ದಾಣ ನಿರ್ವಹಣೆಯ ಹೊಣೆ ಹೊರಲು ಸಾಧ್ಯ' ಎಂದು ಟರ್ಕಿ ಹೇಳಿದೆ.

ಕಾಬೂಲ್ ವಿಮಾನ ನಿಲ್ದಾಣದಿಂದ ವಿಮಾನಯಾನ ಸ್ಥಗಿತವಾಗಿರುವ ಕಾರಣ ಅಫ್ಗಾನಿಸ್ತಾನಕ್ಕೆ ಆಹಾರ ಮತ್ತು ವೈದ್ಯಕೀಯ ಪರಿಕರಗಳನ್ನು ಹೊತ್ತ ವಿಮಾನಗಳು ಬರಲು ಸಾಧ್ಯವಾಗುತ್ತಿಲ್ಲ.

'ಅಫ್ಗನ್ನರನ್ನು ತೆರವು ಮಾಡಲು ಯತ್ನಿಸುತ್ತೇವೆ'

ದೋಹಾ (ಎಎಫ್‌ಪಿ): 'ಅಫ್ಗನ್ನರು ದೇಶ ತೊರೆಯಲು ತಾಲಿಬಾನ್ ಅವಕಾಶ ನೀಡುವುದಾಗಿ ಭರವಸೆ ನೀಡಿದೆ. ಅಫ್ಗನ್ನರನ್ನು ಕರೆತರಲು ವಿಶೇಷ ವಿಮಾನದ ವ್ಯವಸ್ಥೆ ಮಾಡಲು ಸಿದ್ಧತೆ ನಡೆಸಲಾಗಿದೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ.

'ದೇಶ ತೊರೆಯಲು ಸಿದ್ಧರಾಗಿದ್ದ ಸಾವಿರಾರು ಜನರನ್ನು ಅಲ್ಲಿಯೇ ಬಿಟ್ಟು ಅಮೆರಿಕ ಪರಾರಿಯಾಗಿದೆ. ಅಫ್ಗನ್ನರಿಗೆ ಅಮೆರಿಕವು ದ್ರೋಹ ಬಗೆದಿದೆ' ಎಂದು ಹಲವು ದೇಶಗಳು, ಮಾನವ ಹಕ್ಕುಗಳ ರಕ್ಷಣಾ ಸಂಘಟನೆಗಳು ಆರೋಪಿಸಿದ್ದವು. ಹೀಗಾಗಿ ಅಫ್ಗನ್ನರನ್ನು ಕರೆತರುವ ಸಂಬಂಧ ಅಮೆರಿಕವು ತಾಲಿಬಾನಿಗಳ ಜತೆ ಮಾತುಕತೆ ನಡೆಸಿತ್ತು.

ಅಗತ್ಯ ದಾಖಲೆ ಪತ್ರಗಳನ್ನು ಹೊಂದಿರುವ ಅಫ್ಗನ್ನರು ದೇಶ ತೊರೆಯಲು ಯಾವುದೇ ರೀತಿಯಲ್ಲಿ ಅಡ್ಡಿಪಡಿಸುವುದಿಲ್ಲ. ಅವರು ದೇಶ ತೊರೆಯಬಹುದು
ತಾಲಿಬಾನ್

ಕಾಬೂಲ್ ವಿಮಾನ ನಿಲ್ದಾಣದಲ್ಲಿ ಇನ್ನೂ ಸಾವಿರಾರು ಜನರು ಇದ್ದಾರೆ. ತೆರವು ಕಾರ್ಯಾಚರಣೆ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ
ಕತಾರ್

ಮತ್ತೆ ತೆರವು ಕಾರ್ಯಾಚರಣೆ ಆರಂಭಿಸುವ ಸಂಬಂಧ ಕತಾರ್ ಜತೆಗೆ ಅಮೆರಿಕವು ಮಾತುಕತೆ ನಡೆಸುತ್ತಿದೆ. 'ಕೆಲವೇ ಮಂದಿ ಅಫ್ಗಾನಿಸ್ತಾನದಲ್ಲಿ ಉಳಿದಿದ್ದಾರೆ. ಅವರನ್ನು ಶೀಘ್ರವೇ ತೆರವು ಮಾಡಲು ಎಲ್ಲಾ ರೀತಿಯ ಕ್ರಮ ತೆಗೆದುಕೊಳ್ಳಲಾಗುತ್ತದೆ' ಎಂದು ಅಮೆರಿಕ ಹೇಳಿದೆ.

ಕಾಬೂಲ್‌ನಿಂದ 1.20 ಲಕ್ಷಕ್ಕೂ ಹೆಚ್ಚು ಜನರನ್ನು ಕತಾರ್‌ನ ದೋಹಾ ವಿಮಾನ ನಿಲ್ದಾಣದ ಮೂಲಕ ತೆರವು ಮಾಡಲಾಗಿದೆ.

ತಾಲಿಬಾನ್ ತನ್ನ ಭರವಸೆಗೆ ಬದ್ಧವಾಗಿರುತ್ತದೆ ಎಂದು ಅಂತರರಾಷ್ಟ್ರೀಯ ಸಮುದಾಯವು ಕಾದು ನೋಡುತ್ತಿದೆ. ನಾವೂ ನಮ್ಮ ಮಾತಿಗೆ ಬದ್ಧರಾಗಿರುತ್ತೇವೆ
ಆ್ಯಂಟನಿ ಬ್ಲಿಂಕನ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

ಅಫ್ಘಾನಿಸ್ತಾನ ಸರ್ಕಾರದ ಮುಖ್ಯಸ್ಥ ಮುಲ್ಲಾ ಅಕುಂದ್

ಕಾಬೂಲ್ (ಎಎಫ್‌ಪಿ): ವಿಶ್ವ ಸಂಸ್ಥೆಯು ನಿಷೇಧ ಹೇರಿರುವ ಮುಲ್ಲಾ ಮೊಹಮ್ಮದ್ ಹಸನ್ ಅಕುಂದ್ ಅವರನ್ನು ಅಫ್ಗಾನಿಸ್ತಾನದ ಹೊಸ ಸರ್ಕಾರದ ಮುಖ್ಯಸ್ಥ ಎಂದು ತಾಲಿಬಾನ್ ಮಂಗಳವಾರ ಘೋಷಿಸಿದೆ. ತಾಲಿಬಾನ್‌ನಲ್ಲಿ ಸಕ್ರಿಯರಾಗಿರುವ ಹಲವರನ್ನು ಸರ್ಕಾರದ ಪ್ರಮುಖ ಹುದ್ದೆಗಳಿಗೆ ನೇಮಿಸಿದೆ.

ಅಕುಂದ್ ಕಂದಹಾರ್‌ನವರು. 1990ರ ದಶಕದಲ್ಲಿ ತಾಲಿಬಾನ್ ಆಳ್ವಿಕೆ ಇದ್ದಾಗ ಅವರು ಪ್ರಮುಖ ಪ್ರಾಂತ್ಯವೊಂದರ ಗವರ್ನರ್ ಅಗಿದ್ದರು. ವಿದೇಶಾಂಗ ಖಾತೆಯ ಉಪಸಚಿವರೂ ಆಗಿದ್ದರು. ತಾಲಿಬಾನ್‌ನ ಸಹ ಸಂಸ್ಥಾಪಕ ಮುಲ್ಲಾ ಉಮರ್‌ನ ನಿಕಟವರ್ತಿ ಎಂದು ಹೇಳಲಾಗಿದೆ.

ತಾಲಿಬಾನ್‌ನ ಸಹ ಸಂಸ್ಥಾಪಕ ಅಬ್ದುಲ್ ಘನಿ ಬರದರ್ ಮತ್ತು ಅಬ್ದುಲ್ ಸಲಾಂ ಹನಫಿ ಅವರು ಸರ್ಕಾರದ ಉಪ ನಾಯಕರಾಗಿರುತ್ತಾರೆ. ಹನಫಿ ಅವರು ಕತಾರ್‌ನ ದೋಹಾದಲ್ಲಿರುವ ತಾಲಿಬಾನ್ ರಾಜಕೀಯ ಕಚೇರಿಯ ಸದಸ್ಯ. ಮುಲ್ಲಾ ಉಮರ್ ಅವರ ಮಗ ಮುಲ್ಲಾ ಯಾಕೂಬ್ ಅವರು ರಕ್ಷಣಾ ಸಚಿವರಾಗಲಿದ್ದಾರೆ. ಭಯೋತ್ಪಾದನೆಗೆ ಕುಖ್ಯಾತವಾದ ಹಖ್ಖಾನಿ ಗುಂಪಿನ ನಾಯಕ ಸಿರಾಜುದ್ದೀನ್ ಹಖ್ಖಾನಿಯು ಗೃಹ ಸಚಿವರಾಗಲಿದ್ದಾರೆ. ಈ ವ್ಯಕ್ತಿಯು ತಾಲಿಬಾನ್‌ನ ಉಪ ನಾಯಕನೂ ಹೌದು. ಹಖ್ಖಾನಿಯ ಬಂಧನಕ್ಕೆ ನೆರವಾಗುವ ಮಾಹಿತಿ ಕೊಡುವವರಿಗೆ ಭಾರಿ ಮೊತ್ತದ ಬಹುಮಾನವನ್ನು ಅಮೆರಿಕದ ಘೋಷಿಸಿದೆ.

ಪೆಗಾಸಸ್ ಪ್ರಕರಣ: ಕೇಂದ್ರಕ್ಕೆ ಕಾಲಾವಕಾಶ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಪ್ರಕರಣವನ್ನು ಸ್ವತಂತ್ರವಾಗಿ ತನಿಖೆ ನಡೆಸಲು ಒತ್ತಾಯಿಸಿ ಸಲ್ಲಿಸಿದ್ದ ಅರ್ಜಿಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಇನ್ನಷ್ಟು ಕಾಲಾವಕಾಶ ನೀಡಿದ್ದು, ವಿಚಾರಣೆಯನ್ನು ಸೆಪ್ಟೆಂಬರ್ 13ಕ್ಕೆ ಮುಂದೂಡಿದೆ.

ಸ್ವತಂತ್ರ ತನಿಖೆಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗಳಿಗೆ ಪ್ರತಿಕ್ರಿಯೆ ನೀಡುವಂತೆ ಮುಖ್ಯ ನ್ಯಾಯಮೂರ್ತಿ ಎನ್. ರಮಣ ನೇತೃತ್ವದ ತ್ರಿಸದಸ್ಯ ನ್ಯಾಯಮೂರ್ತಿಗಳ ಪೀಠ ಆಗಸ್ಟ್ 17ರಂದು ಕೇಂದ್ರಕ್ಕೆ ನೋಟಿಸ್ ನೀಡಿತ್ತು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಅನಿರುದ್ಧ ಬೋಸ್ ಅವರನ್ನೊಳಗೊಂಡ ಪೀಠದ ಎದುರು ಮಂಗಳವಾರ ಈ ಅರ್ಜಿ ವಿಚಾರಣೆಗೆ ಬಂದಿತು.

'ಅಫ್ಗನ್ ನಿರಾಶ್ರಿತರಿಗಾಗಿ ಹೊಸ ಶಿಬಿರ ಸ್ಥಾಪಿಸುವುದಿಲ್ಲ'

ಇಸ್ಲಾಮಾಬಾದ್ (ಪಿಟಿಐ): 'ಅಫ್ಗಾನಿಸ್ತಾನದ ನಿರಾಶ್ರಿತರಿಗಾಗಿ ಹೊಸ ಶಿಬಿರವನ್ನು ಸ್ಥಾಪಿಸುವುದಿಲ್ಲ' ಎಂದು ಪಾಕಿಸ್ತಾನದ ಗೃಹ ಸಚಿವ ಶೇಖ್ ರಶೀದ್ ಅಹ್ಮದ್ ಅವರು ಹೇಳಿದ್ದಾರೆ.

'ಈಗಾಗಲೇ ಪಾಕಿಸ್ತಾನದಲ್ಲಿ 30 ಲಕ್ಷ ಅಫ್ಗನ್ ನಿರಾಶ್ರಿತರು ಇದ್ದಾರೆ. ಅಲ್ಲದೆ ಪಾಕಿಸ್ತಾನಕ್ಕೆ ಪ್ರವೇಶಿಸಲು ಗಡಿ ಬಳಿ ಜನರು ಗುಂಪುಗೂಡಿದ್ದಾರೆ' ಎಂದು ವರದಿಯೊಂದು ಹೇಳಿತ್ತು.

ಇದರ ಬೆನ್ನಲ್ಲೇ ಅಫ್ಗಾನೊಂದಿಗಿನ ಟಾರ್ಕಮ್ ಗಡಿ ಪ್ರದೇಶಕ್ಕೆ ರಶೀದ್ ಅವರು ಭಾನುವಾರ ಭೇಟಿ ನೀಡಿದರು. ಆ ಬಳಿಕ ಮಾತನಾಡಿದ ಅವರು,' ಟಾರ್ಕಮ್ ಗಡಿ ಪ್ರದೇಶದಲ್ಲಿ ಯಾವುದೇ ಅಫ್ಗನ್ ನಿರಾಶ್ರಿತರಿಲ್ಲ. ನಾವು ಇಲ್ಲಿ ಹೊಸ ಶಿಬಿರವನ್ನು ಸ್ಥಾಪಿಸಿಲ್ಲ' ಎಂದು ಹೇಳಿದ್ದಾರೆ. ಈ ಬಗ್ಗೆ ಬಿಸಿನೆಸ್ ರೆಕಾರ್ಡರ್ ಪತ್ರಿಕೆ ವರದಿ ಮಾಡಿದೆ.

'ಪಾಕಿಸ್ತಾನದಲ್ಲಿ ಅರ್ಧದಷ್ಟು ಅಫ್ಗನ್ ನಿರಾಶ್ರಿತರು ಕಾನೂನು ಬಾಹಿರವಾಗಿ ವಾಸವಾಗಿದ್ದಾರೆ. ಅವರು ಈವರೆಗೆ ದೇಶದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿಲ್ಲ. ಅಧಿಕೃತವಾಗಿ ನೊಂದಾಯಿಸಿಕೊಂಡಿರುವ 15 ಲಕ್ಷ ಜನರು ಮಾತ್ರ ಇಲ್ಲಿ ಉಳಿಯಲು, ಓಡಾಡಲು ಮತ್ತು ವ್ಯವಹಾರ ನಡೆಸುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹೊಂದಿದ್ದಾರೆ' ಎಂದು ಪಾಕಿಸ್ತಾನದ ಅಧಿಕಾರಿಯೊಬ್ಬರು ತಿಳಿಸಿದರು.

'ಅಫ್ಗಾನಿಸ್ತಾನದಲ್ಲಿ ಬಿಕ್ಕಟ್ಟು ನಿಯಂತ್ರಣಕ್ಕೆ ಬರುತ್ತಿದೆ. ಹಾಗಾಗಿ ಇನ್ನು ಮುಂದೆ ನಾವು ಅಫ್ಗನ್ ನಿರಾಶ್ರಿತರಿಗೆ ನಾವು ಅವಕಾಶ ನೀಡುವುದಿಲ್ಲ' ಎಂದು ಪಾಕಿಸ್ತಾನ ಹೇಳಿತ್ತು. ಆದರೆ, ಸಚಿವರುಗಳು ಅಫ್ಗನ್ ನಿರಾಶ್ರಿತರಿಗೆ ಉಳಿಯಲು ಅವಕಾಶ ನೀಡುವುದಕ್ಕೆ ಸಂಬಂಧಿಸಿದಂತೆ ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಅಧ್ಯಕ್ಷನ ವಿರುದ್ಧ ಪ್ರತಿಭಟನೆ ನಡೆಸಿದ್ದಕ್ಕೆ ಕಠಿಣ ಶಿಕ್ಷೆ

ಬೆಲಾರಸ್ ವಿಪಕ್ಷ ನಾಯಕಿಗೆ 11 ವರ್ಷ ಜೈಲು

ಮಾಸ್ಕೊ (ಎಎಫ್‌ಪಿ): ಬೆಲಾರಸ್‌ನ ಪ್ರಮುಖ ವಿರೋಧ ಪಕ್ಷದ ನಾಯಕಿಯರಿಗೆ ದೀರ್ಘಕಾಲದ ಜೈಲುಶಿಕ್ಷೆ ವಿಧಿಸಿ ಬೆಲಾರಸ್ ನ್ಯಾಯಾಲಯವು ಆದೇಶಿಸಿದೆ. 2020ರಲ್ಲಿ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ವಿರುದ್ಧ ಪ್ರತಿಭಟನೆ ನಡೆಸಿದ್ದ ಮರಿಯಾ ಕೊಲೆಸ್ನಿಕೋವಾ ಮತ್ತು ಮ್ಯಾಕ್ಸಿಮಾ ಜ್ನಾಕ್ ಅವರಿಗೆ ಕ್ರಮವಾಗಿ 11 ಮತ್ತು 10 ವರ್ಷ ಜೈಲುಶಿಕ್ಷೆ ವಿಧಿಸಲಾಗಿದೆ.

ಬೆಲಾರಸ್‌ನ ಈ ಕ್ರಮದ ವಿರುದ್ಧ ಅಂತರರಾಷ್ಟ್ರೀಯ ಸಮುದಾಯವು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಅಧ್ಯಕ್ಷ ಅಲೆಕ್ಸಾಂಡರ್ ಅವರು 1994ರಿಂದಲೂ ಅಧಿಕಾರದಲ್ಲಿದ್ದಾರೆ. ತಮ್ಮ ಅವಧಿ ಮುಗಿದ ನಂತರವೂ ಚುನಾವಣೆ ನಡೆಯಲು ಅವಕಾಶ ನೀಡದೆ, ಅಧಿಕಾರದಲ್ಲಿ ಮುಂದುವರಿದಿದ್ದಾರೆ. ಅವರ ವಿರುದ್ಧ ಧ್ವನಿ ಎತ್ತಿದ ವಿರೋಧ ಪಕ್ಷಗಳ ನಾಯಕರನ್ನು ಈ ಹಿಂದೆಯೂ ಜೈಲಿಗೆ ಕಳುಹಿಸಲಾಗಿದೆ ಮತ್ತು ಗಡೀಪಾರು ಮಾಡಲಾಗಿದೆ. ಅಲೆಕ್ಸಾಂಡರ್ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಬೇಕು ಎಂದು 2020ರಲ್ಲಿ ಮರಿಯಾ ಚಳವಳಿ ಆರಂಭಿಸಿದ್ದರು.

ಸರ್ಕಾರದ ವಿರುದ್ಧ ಕ್ರಾಂತಿ ನಡೆಸಿದ ಮತ್ತು ಅಕ್ರಮವಾಗಿ ಅಧಿಕಾರ ಕಸಿದುಕೊಳ್ಳಲು ಯತ್ನಿಸಿದ ಆರೋಪದಲ್ಲಿ ಮರಿಯಾ ಅವರನ್ನು ಬಂಧಿಸಲಾಗಿತ್ತು. 2020ರಲ್ಲೇ ಅವರನ್ನು ದೇಶದಿಂದ ಗಡಿಪಾರು ಮಾಡಲು ಬಲವಂತವಾಗಿ ಉಕ್ರೇನ್ ಗಡಿಗೆ ಕರೆದೊಯ್ಯಲಾಗಿತ್ತು. ಆಗ ಮರಿಯಾ ಅವರು ತಮ್ಮ ಪಾಸ್‌ಪೋರ್ಟ್ ಅನ್ನು ಹರಿದುಹಾಕಿದ್ದರು. ಹೀಗಾಗಿ ಅವರ ಪ್ರವೇಶವನ್ನು ಉಕ್ರೇನ್ ನಿರಾಕರಿಸಿತ್ತು.



ಮರಿಯಾ ಕೊಲೆಸ್ನಿಕೋವಾ ಅವರು ಶಿಕ್ಷೆ ಪ್ರಕಟವಾದ ನಂತರ ತಮ್ಮ ತುಟಿಗೆ ಲಿಪ್‌ಸ್ಟಿಕ್ ಹಚ್ಚಿ, ನಗುಬೀರಿ ಪ್ರತಿಭಟಿಸಿದರು –ಎಎಫ್‌ಪಿ ಚಿತ್ರ

ಇದು ಖಂಡನೀಯ ಕ್ರಮ. ಮಾನವ ಹಕ್ಕುಗಳ ಮತ್ತು ರಾಜಕೀಯ ಹಕ್ಕುಗಳನ್ನು ಬೆಲಾರಸ್ ಸರ್ಕಾರ ಹತ್ತಿಕ್ಕುತ್ತಿದೆ. ಇದು ಬೆಲಾರಸ್ ಜನರ ಮೇಲಿನ ದಬ್ಬಾಳಿಕೆಯೇ ಹೌದು
ಪೋಲೆಂಡ್

ಇದು ಬೆಲಾರಸ್ ಪ್ರಜಾಪ್ರಭುತ್ವದ ರಕ್ಷಕರ ಮೇಲೆ ಅಲ್ಲಿನ ಸರ್ಕಾರ ನಡೆಸಿದ ದಾಳಿ. ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಅಲೆಕ್ಸಾಂಡರ್ ಸರ್ಕಾರ ಹತ್ತಿಕ್ಕುತ್ತಿದೆ
ಬ್ರಿಟನ್

ಪಾಸ್ವಾನ್ ಪುಣ್ಯತಿಥಿಗೆ ಭಾರಿ ಕಾರ್ಯಕ್ರಮಕ್ಕೆ ಚಿರಾಗ್ ಸಿದ್ಧತೆ

ನವದೆಹಲಿ (ಪಿಟಿಐ): ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್ ಅವರು ತಮ್ಮ ತಂದೆ ಹಾಗೂ ದಲಿತ ನಾಯಕ ರಾಮ್ ವಿಲಾಸ್ ಪಾಸ್ವಾನ್ ಅವರ ಮೊದಲ ಪುಣ್ಯ ತಿಥಿಯ ಅಂಗವಾಗಿ ಬೃಹತ್ ಕಾರ್ಯಕ್ರಮವನ್ನು ನಡೆಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಇನ್ನೂ ಅನೇಕ ಉನ್ನತ ನಾಯಕರಿಗೆ ಸೆಪ್ಟೆಂಬರ್ 12ರಂದು ಪಟ್ನಾದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿರುವುದಾಗಿ ಚಿರಾಗ್ ಮಂಗಳವಾರ ಹೇಳಿದ್ದಾರೆ.

ತಮ್ಮ ಚಿಕ್ಕಪ್ಪ ಹಾಗೂ ಕೇಂದ್ರ ಸಚಿವ ಪಶುಪತಿ ಕುಮಾರ್ ಪಾರಸ್ ಅವರೊಂದಿಗೆ ಚಿರಾಗ್ ವಿರೋಧ ಹೊಂದಿರುವ ಈ ಸಮಯದಲ್ಲಿ ಈ ಘಟನೆಯು ರಾಜಕೀಯ ಮಹತ್ವ ಪಡೆದುಕೊಂಡಿದೆ. ಪಾರಸ್ ಅವರಿಗೂ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ್ದಾರೆ.

ರಾಮ್ ವಿಲಾಸ್ ಪಾಸ್ವಾನ್ ಅವರ ದೆಹಲಿಯ ನಿವಾಸದಲ್ಲಿ ಅವರ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ಈ ನಿವಾಸವನ್ನು ಪಕ್ಷವು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಬಯಸುತ್ತಿದೆ ಎಂಬ ಆರೋಪವನ್ನು ತಳ್ಳಿ ಹಾಕಿದರು. ಒಬ್ಬ ಸಂಸದನಾಗಿ ಕಾನೂನು ಉಲ್ಲಂಘಿಸುವ ಯಾವುದನ್ನಾದರೂ ತಾವು ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

'ಇಲ್ಲಿ ಉಳಿಯಲು ಸರ್ಕಾರವು ಇಲ್ಲಿಯವರೆಗೂ ನನಗೆ ಅನುಮತಿ ನೀಡಿದೆ. ಪ್ರತಿಮೆಯು ದಿವಂಗತ ನಾಯಕನಿಗೆ ಪಕ್ಷವು ನೀಡುತ್ತಿರುವ ಗೌರವದ ಸಂಕೇತವಾಗಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಿದಾಗ ಅದನ್ನು ಸ್ಥಳಾಂತರಿಸಲಾಗುತ್ತದೆ' ಎಂದು ಅವರು ಹೇಳಿದರು.



ಶಿಕ್ಷಕ ಪರ್ವ: ಹಲವು ಕಾರ್ಯಕ್ರಮಗಳಿಗೆ ಪ್ರಧಾನಿ ಉದ್ಘಾಟನೆ

ಸಂಜ್ಞೆ ಭಾಷೆ ನಿಘಂಟುಗೆ ಚಾಲನೆ

ನವದೆಹಲಿ (ಪಿಟಿಐ): ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯನ್ನು ನಿರಂತರವಾಗಿ ಪುನರ್ ವ್ಯಾಖ್ಯಾನಿಸಬೇಕು ಹಾಗೂ ದೇಶದ ಶಿಕ್ಷಣ ಕ್ಷೇತ್ರವನ್ನು ವಿಶ್ವ ದರ್ಜೆಗೇರಿಸಲು ಮರುವಿನ್ಯಾಸಗೊಳಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರತಿಪಾದಿಸಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ 'ಶಿಕ್ಷಕ ಪರ್ವ' ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರಧಾನಿ, ಭಾರತೀಯ ಸಂಜ್ಞೆ ಭಾಷೆ ನಿಘಂಟು (ಯುನಿವರ್ಸಲ್ ಡಿಸೈನ್ ಆಫ್ ಲರ್ನಿಂಗ್‌ಗೆ ಅನುಗುಣವಾಗಿ ಶ್ರವಣ ದೋಷವುಳ್ಳವರಿಗಾಗಿ ರೂಪಿಸಲಾದ ಆಡಿಯೊ–ಪಠ್ಯ ಎಂಬೆಡೆಡ್ ಸಂಜ್ಞೆ ಭಾಷೆ ವಿಡಿಯೊ), ಟಾಕಿಂಗ್ ಬುಕ್ (ದೃಷ್ಟಿದೋಷವುಳ್ಳವರಿಗಾಗಿ ಆಡಿಯೊ ಪುಸ್ತಕ), ನಿಪುಣ್ ಭಾರತ್ ಮತ್ತು ವಿದ್ಯಾಂಜಲಿ ಪೋರ್ಟಲ್‌ಗೆ ಚಾಲನೆ ನೀಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಕೈಗೊಳ್ಳುತ್ತಿರುವ


ಮೋದಿ

ರೂಪಾಂತರಗಳು ಕೇವಲ ನೀತಿ ಆಧಾರಿತವಲ್ಲದೆ ಭಾಗವಹಿಸುವಿಕೆ ಆಧಾರಿತವಾಗಿವೆ' ಎಂದರು.

'ಈ ಕಾರ್ಯಕ್ರಮಗಳು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವುದಲ್ಲದೇ ಯುವ ಸಮುದಾಯದ ಭವಿಷ್ಯವನ್ನು ರೂಪಿಸಲಿದೆ. ಇದು ದೇಶವನ್ನು ರೂಪಿಸುವಲ್ಲಿಯೂ ಪ್ರಮುಖ ಪಾತ್ರವಹಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ವೇಗವಾಗಿ ಬದಲಾಗುತ್ತಿರುವ ಯುಗದಲ್ಲಿ, ನಮ್ಮ ಶಿಕ್ಷಕರು ಕೂಡ ಹೊಸ ವ್ಯವಸ್ಥೆಗಳು ಮತ್ತು ತಂತ್ರಗಳ ಬಗ್ಗೆ ವೇಗವಾಗಿ ಕಲಿಯಬೇಕು. ಈ ಬದಲಾವಣೆಗಳಿಗೆ ದೇಶವು ತನ್ನ ಶಿಕ್ಷಕರನ್ನು ಸಿದ್ಧಪಡಿಸುತ್ತಿದೆ' ಎಂದು ಅವರು ಹೇಳಿದರು.

ಎನ್‌ಇಪಿ ಬಗ್ಗೆ ಮೆಚ್ಚುಗೆ: 'ನಾವು ಪರಿವರ್ತನೆಯ ಕಾಲದಲ್ಲಿದ್ದೇವೆ. ಅದೃಷ್ಟವಶಾತ್, ನಾವು ಅದಕ್ಕೆ ಪೂರಕವಾಗಿ ಆಧುನಿಕ ಮತ್ತು ಭವಿಷ್ಯದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಹೊಂದಿದ್ದೇವೆ. ಶಿಕ್ಷಣ ವಲಯದಲ್ಲಿನ ಈ ಬದಲಾವಣೆಗಳು ಕೇವಲ ನೀತಿ ಆಧಾರಿತವಲ್ಲ, ಭಾಗವಹಿಸುವಿಕೆ ಆಧಾರಿತವಾಗಿದೆ' ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ ರಚನೆ ಮತ್ತು ಅದರ ಅನುಷ್ಠಾನದ ಪ್ರತಿ ಹಂತದಲ್ಲೂ ಶಿಕ್ಷಣ ತಜ್ಞರು, ತಜ್ಞರು ಮತ್ತು ಶಿಕ್ಷಕರ ಕೊಡುಗೆಯನ್ನು ಪ್ರಧಾನಿ ಶ್ಲಾಘಿಸಿದರು.

'ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರವು ಹಲವು ಸವಾಲುಗಳನ್ನು ಸಮರ್ಪಕವಾಗಿ ಎದುರಿಸಿದ್ದನ್ನು ನಾವೆಲ್ಲ ನೋಡಿದ್ದೇವೆ. ಆನ್‌ಲೈನ್ ತರಗತಿಗಳು, ಗುಂಪು ವಿಡಿಯೊ ಕಾಲ್‌ಗಳೂ, ಆನ್‌ಲೈನ್ ಪರೀಕ್ಷೆಗಳು... ಇಂಥದ್ದನ್ನು ಹಿಂದೆ ಬಹುತೇಕರು ಕೇಳಿರಲಿಲ್ಲ' ಎಂದು ಅವರು ಹೇಳಿದರು.

'ಪ್ರತಿಭಟನೆ ನಿಲ್ಲಿಸಲು ಯತ್ನಿಸಿ'

ನವದೆಹಲಿ: ಕೇಂದ್ರದ ಮೂರು ಕೃಷಿ ಕಾಯ್ದೆಗಳಿಗೆ ಸಂಬಂಧಿಸಿ ರೈತರು ಒಂಬತ್ತು ತಿಂಗಳಿಂದ ನಡೆಸುತ್ತಿರುವ ಪ್ರತಿಭಟನೆಯನ್ನು ಕೊನೆಗೊಳಿಸಲು ಕೇಂದ್ರ ಸರ್ಕಾರವು ಯತ್ನಿಸಬೇಕು ಎಂದು ಆರ್‌ಎಸ್‌ಎಸ್‌ನ ಅಂಗ ಸಂಸ್ಥೆ ಭಾರತೀಯ ಕಿಸಾನ್ ಸಂಘವು (ಬಿಕೆಎಸ್) ಹೇಳಿದೆ.

ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಪ್ರತಿಭಟನೆಯ ರೀತಿಯ ಬಗ್ಗೆ ಒಪ್ಪಿಗೆ ಇಲ್ಲ. ಈ ಪ್ರತಿಭಟನೆಯು ರಾಜಕೀಯ ಸ್ವರೂಪದ್ದಾಗಿದೆ ಎಂದು ಬಿಕೆಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬದ್ರಿ ನಾರಾಯಣ ಚೌಧರಿ ಹೇಳಿದ್ದಾರೆ. 'ಎಸ್‌ಕೆಎಂನ ಪ್ರತಿಭಟನೆಯ ಹಕ್ಕನ್ನು ನಾವು ಪ್ರಶ್ನಿಸುತ್ತಿಲ್ಲ. ಅನಿರ್ದಿಷ್ಟಾವಧಿ ಪ್ರತಿಭಟನೆಗಾಗಿ ಯಾವ ರೈತನೂ ತನ್ನ ಹೊಲವನ್ನು ಬಿಟ್ಟು ಬರಲು ಸಾಧ್ಯವಿಲ್ಲ. ಶ್ರೀಮಂತ ರೈತರಿಗೆ ಇದು ಅನ್ವಯ ಆಗದು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಐಎಎಸ್ ಅಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯ; ಜಿಲ್ಲಾಡಳಿತದ ಜೊತೆ ಮಾತುಕತೆ ವಿಫಲ

ಹರಿಯಾಣ: ರೈತರ ಆಕ್ರೋಶ


ಹರಿಯಾಣದ ಕರ್ನಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ರೈತ ಮಹಾಪಂಚಾಯಿತಿಯಲ್ಲಿ ಸಾವಿರಾರು ರೈತರು ಭಾಗಿಯಾಗಿದ್ದರು–ಪಿಟಿಐ ಚಿತ್ರ

ಕರ್ನಾಲ್ (ಹರಿಯಾಣ) (ಪಿಟಿಐ): ರೈತರ ವಿರುದ್ಧ 'ತಲೆ ಉರುಳಿಸುವ' ಹೇಳಿಕೆ ನೀಡಿದ್ದ ಐಎಎಸ್ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ನೇತೃತ್ವದಲ್ಲಿ ಮಂಗಳವಾರ ಇಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಜಿಲ್ಲಾಡಳಿತ ಕಚೇರಿಯನ್ನು ವಶಕ್ಕೆ ತೆಗೆದುಕೊಳ್ಳುವುದಾಗಿ ರೈತರು ಎಚ್ಚರಿಸಿದರು. ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸುತ್ತಿದ್ದ ರೈತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು.

ಇದಕ್ಕೂ ಮುನ್ನ ರೈತ ಸಂಘಟನೆಗಳು ಮಹಾಪಂಚಾಯಿತಿ ಹಮ್ಮಿಕೊಂಡಿದ್ದವು. ರೈತರು ಸಮಾವೇಶ ಸ್ಥಳದಲ್ಲಿ ಒಟ್ಟುಗೂಡುತ್ತಿದ್ದಂತೆಯೇ ರೈತ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಲಾಯಿತು. ಆದರೆ, ಕರ್ನಾಲ್ ಸ್ಥಳೀಯಾಡಳಿತದ ಜೊತೆಗಿನ ಮಾತುಕತೆ ಮುರಿದುಬಿದ್ದಿದೆ ಎಂದು ರೈತ ನಾಯಕರು ತಿಳಿಸುತ್ತಿದ್ದಂತೆಯೇ, ಸಾವಿರಾರು ರೈತರು ಇಲ್ಲಿನ ಜಿಲ್ಲಾ ಕಚೇರಿಯತ್ತ ಸಂಜೆ ಮೆರವಣಿಗೆ ಆರಂಭಿಸಿದರು.

ಆಗಸ್ಟ್ 28ರಂದು ಕರ್ನಾಲ್‌ನಲ್ಲಿ ಪ್ರತಿಭಟನಕಾರರ ಮೇಲೆ ಲಾಠಿಪ್ರಹಾರ ನಡೆಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರೈತರು ಬೇಡಿಕೆ ಇಟ್ಟಿದ್ದರು. ಐಎಎಸ್ ಅಧಿಕಾರಿ ಆಯುಷ್ ಸಿನ್ಹಾ ಅವರು ನೀಡಿದ್ದ 'ತಲೆ ಉರುಳಿಸುವ' ಹೇಳಿಕೆಯ ವಿರುದ್ಧ ಕೊಲೆ ಪ್ರಕರಣ ದಾಖಲಿಸಬೇಕು' ಎಂದು ಸಂಘಟನೆಗಳು ಒತ್ತಾಯಿಸಿವೆ.

'ಈ ಸಂಬಂಧ ಚರ್ಚಿಸಲು 11 ಸದಸ್ಯರ ನಿಯೋಗವನ್ನು ಸ್ಥಳೀಯಾಡಳಿತವು ಆಹ್ವಾನಿಸಿತ್ತು. ಅಧಿಕಾರಿಗಳು ನಮ್ಮ ಬೇಡಿಕೆಗಳಿಗೆ ಒಪ್ಪದ ಕಾರಣ ಮಾತುಕತೆ ವಿಫಲವಾಯಿತು' ಎಂದು ಹಿರಿಯ ರೈತ ನಾಯಕ ಜೋಗಿಂದರ್ ಸಿಂಗ್ ಉಗ್ರನ್ ಹೇಳಿದರು.

> **ರೈತರ ತಲೆ ಒಡೆಯುವಂತೆ ಐಎಎಸ್ ಅಧಿಕಾರಿ ಆದೇಶ ಹೊರಡಿಸಲು ಯಾವ ಸಂವಿಧಾನ ಅಥವಾ ಯಾವ ಕಾನೂನಿನಲ್ಲಿ ಅವಕಾಶವಿದೆ**
> **ಯೋಗೇಂದ್ರ ಯಾದವ್,** ರೈತ ಮುಖಂಡ

ಜಿಲ್ಲಾಧಿಕಾರಿ ನಿಶಾಂತ್ ಕುಮಾರ್ ಯಾದವ್, ಐಜಿಪಿ ಮಮತಾ ಸಿಂಗ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಂಗಾರಾಮ್ ಪುನಿಯಾ ಅವರು ರೈತ ಮುಖಂಡರೊಂದಿಗೆ ನಡೆದ ಮಾತುಕತೆಯಲ್ಲಿ ಭಾಗವಹಿಸಿದ್ದರು.

ಮಾತುಕತೆ ವಿಫಲವಾಗಿದ್ದರಿಂದ ಸಚಿವಾಲಯದ ಕಡೆಗೆ ಶಾಂತಿಯುತವಾಗಿ ಮೆರವಣಿಗೆ ನಡೆಸುವಂತೆ ರೈತ ನಾಯಕರು ಕರೆಕೊಟ್ಟರು. ಮೆರವಣಿಗೆ ವೇಳೆ ಪೊಲೀಸರ ಜೊತೆ ಯಾವುದೇ ಕಾರಣಕ್ಕೂ ಸಂಘರ್ಷಕ್ಕೆ ಇಳಿಯಬಾರದು ಹಾಗೂ ಪೊಲೀಸರು ತಡೆ ಒಡ್ಡಿದ ಜಾಗದಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಬೇಕು ಎಂದು ತಿಳಿಸಲಾಯಿತು. ಸಾವಿರಾರು ಪ್ರತಿಭಟನಕಾರರು ರೈತ ಸಂಘದ ಧ್ವಜಗಳನ್ನು ಹಿಡಿದು ಹೆಜ್ಜೆಹಾಕಿದರು. ಈ ಮಾರ್ಗದಲ್ಲಿ ಹಲವಾರು ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.

ಇದಕ್ಕೂ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ರೈತ ನಾಯಕ ರಾಕೇಶ್ ಟಿಕಾಯತ್, ಪ್ರತಿಭಟನನಿರತ ರೈತರ ಮೇಲೆ ಹಲ್ಲೆ ಮಾಡಲು ಪೊಲೀಸರಿಗೆ ಸೂಚನೆಗಳನ್ನು ನೀಡಿದ್ದ ಐಎಎಸ್ ಅಧಿಕಾರಿಯನ್ನು ಅಮಾನತು ಮಾಡುವಂತೆ ಒತ್ತಾಯಿಸಿದ್ದರು.

ರಾಕೇಶ್ ಟಿಕಾಯತ್, ಬಲಬೀರ್ ಸಿಂಗ್ ರಾಜೇವಾಲ್, ಜೋಗಿಂದರ್ ಸಿಂಗ್ ಉಗ್ರನ್, ದರ್ಶನ್ ಪಾಲ್ ಮತ್ತು ಯೋಗೇಂದ್ರ ಯಾದವ್ ಸೇರಿದಂತೆ ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಹಿರಿಯ ನಾಯಕರು ಸಮಾವೇಶಕ್ಕಾಗಿ ಮಂಗಳವಾರ ಕರ್ನಾಲ್‌ಗೆ ಬಂದಿದ್ದರು. ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ನಡೆದ ಬೃಹತ್ ಮಹಾಪಂಚಾಯಿತಿ ಬಳಿಕ ಈ ಸಭೆಯನ್ನು ಆಯೋಜಿಸಲಾಗಿತ್ತು.

ಹಿಂಸಾತ್ಮಕವಾಗಿ ಲಾಠಿ ಪ್ರಹಾರ ನಡೆಸಿ ರೈತರನ್ನು ಗಾಯಗೊಳಿಸಲು ಯಾವ ಕಾನೂನಿನಲ್ಲಿ ಅವಕಾಶವಿದೆ ಎಂದು ರೈತ ಮುಖಂಡ ಯೋಗೇಂದ್ರ ಯಾದವ್ ಪ್ರಶ್ನಿಸಿದ್ದಾರೆ.

ಆಗಸ್ಟ್ 28ರಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿಪಡಿಸಿದ ರೈತರ ಗುಂಪಿನ ಮೇಲೆ ಹರಿಯಾಣ ಪೊಲೀಸರು ಲಾಠಿ ಪ್ರಹಾರ ಮಾಡಿದ್ದರು. ಘಟನೆಯಲ್ಲಿ 10ಕ್ಕೂ ಹೆಚ್ಚು ಪ್ರತಿಭಟನಕಾರರು ಗಾಯಗೊಂಡಿದ್ದರು. ಆದರೆ ಯಾವ ರೈತರೂ ಲಾಠಿ ಪ್ರಹಾರದಿಂದ ಮೃತಪಟ್ಟಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಮೆಹಬೂಬಾಗೆ ಗೃಹ ಬಂಧನ

ಶ್ರೀನಗರ (ಪಿಟಿಐ): 'ನನ್ನನ್ನು ಗೃಹ ಬಂಧನದಲ್ಲಿ ಇರಿಸಲಾಗಿದೆ' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಮಂಗಳವಾರ ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಮೆಹಬೂಬಾ, ತಮ್ಮ ಗುಪ್ಕರ್ ನಿವಾಸದ ಮುಖ್ಯ ದ್ವಾರವನ್ನು ಭದ್ರತಾ ಪಡೆಯ ವಾಹನ ತಡೆದಿರುವ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

'ನನ್ನನ್ನು ಮಂಗಳವಾರ ಗೃಹಬಂಧನಕ್ಕೆ ಒಳಪಡಿಸಲಾಗಿದೆ. ಕಾಶ್ಮೀರದಲ್ಲಿ ಪರಿಸ್ಥಿತಿಯು ಸಾಮಾನ್ಯಕ್ಕಿಂತ ಬಹಳ ಭಿನ್ನವಾಗಿದೆ. ಇದು ಆಡಳಿತದ ಸಹಜ ಸ್ಥಿತಿಯ ನಕಲಿ ಪ್ರತಿಪಾದನೆಯನ್ನು ಬಹಿರಂಗಪಡಿಸಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಕೇಂದ್ರವು ಅಫ್ಗಾನಿಸ್ತಾನದ ಜನರ ಹಕ್ಕುಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದೆ. ಆದರೆ, ಅದೇ ಹಕ್ಕುಗಳನ್ನು ಕಾಶ್ಮೀರದವರಿಗೆ ನಿರಾಕರಿಸುತ್ತಿದೆ' ಎಂದೂ ಹೇಳಿದ್ದಾರೆ.

ಬೋಧನಾ ಕೆಲಸಕ್ಕೆ ಮರಳಿದ ಜಿಲ್ ಬೈಡನ್

ವಾಷಿಂಗ್ಟನ್ (ಎಪಿ): ಅಮೆರಿಕದ ಪ್ರಥಮ ಮಹಿಳೆ ಜಿಲ್ ಬೈಡನ್ ಮಂಗಳವಾರ ತಮ್ಮ ಬೋಧನಾ ವೃತ್ತಿಗೆ ಮರಳಿದ್ದಾರೆ.

ಕೋವಿಡ್ ಪಿಡುಗು ಕಾರಣಕ್ಕಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಇದುವರೆಗೆ ಆನ್‌ಲೈನ್‌ನಲ್ಲಿ ಪಾಠ ಮಾಡಿದ್ದ ಜಿಲ್ ಅವರು, ಮಂಗಳವಾರ ಉತ್ತರ ವರ್ಜೀನಿಯಾದ ಸಮುದಾಯ ಕಾಲೇಜಿಗೆ ಖುದ್ದಾಗಿ ಹಾಜರಾದರು. ಪ್ರತಿ ಮಂಗಳವಾರ ಮತ್ತು ಗುರುವಾರದಂದು ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುತ್ತಾರೆ.

2009ರಿಂದ ಈ ಕಾಲೇಜಿನಲ್ಲಿ ಬೋಧಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ ಬೈಡನ್, 'ಕೆಲವು ವಿಷಯಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ನಾನು ನನ್ನ ವಿದ್ಯಾರ್ಥಿಗಳನ್ನು ಕಾಣಲು ತರಗತಿಗೆ ಮರಳಲು ಬಯಸುತ್ತೇನೆ, ಇನ್ನು ಕಾಯಲು ಸಾಧ್ಯವಿಲ್ಲ'ಎಂದು ಇತ್ತೀಚೆಗಷ್ಟೇ 'ಗುಡ್ ಹೌಸ್ ಕೀಪಿಂಗ್'ಗೆ ನೀಡಿದ್ದ ಸಂದರ್ಶನವೊಂದರಲ್ಲಿ ತಿಳಿಸಿದ್ದರು.

ಶ್ವೇತಭವನ ತೊರೆದು ಪೂರ್ಣಕಾಲಿಕ ವೃತ್ತಿಯಲ್ಲಿ ತೊಡಗಿರುವ ಅಮೆರಿಕದ ಪ್ರಥಮ ಮಹಿಳೆ ಎನ್ನುವ ಖ್ಯಾತಿ ಜಿಲ್ ಬೈಡನ್ ಅವರದ್ದು.

ಓವೈಸಿಯ ಪಕ್ಷ ಸೇರಿದ ಅತೀಕ್ ದಂಪತಿ


ಲಖನೌ (ಪಿಟಿಐ): ಜೈಲಿನಲ್ಲಿರುವ ಪಾತಕಿ ಮತ್ತು ಮಾಜಿ ಸಂಸದ ಅತೀಕ್ ಅಹ್ಮದ್ ಹಾಗೂ ಅವರ ಪತ್ನಿ ಶೈಸ್ತಾ ಪರ್ವೀನ್ ಮಂಗಳವಾರ ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಪಕ್ಷ ಸೇರಿದ್ದಾರೆ.

ಸಮಾಜವಾದಿ ಪಕ್ಷದ ಮಾಜಿ ನಾಯಕ ಅತೀಕ್ ಅವರ ಪತ್ನಿ ಶೈಸ್ತಾ ಪರ್ವೀನ್ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅತೀಕ್ ಅಹ್ಮದ್ ಅವರ ಗೈರುಹಾಜರಿಯಲ್ಲಿ ಓವೈಸಿಯವರ ಪಕ್ಷ ಸೇರ್ಪಡೆಯಾದರು. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿ 'ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಉತ್ತರ ಪ್ರದೇಶದಲ್ಲಿ ಜಿನ್ನಾ ಜಿಹಾದಿ ಮನಸ್ಥಿತಿ ಅರಳಲು ಆಸ್ಪದ ನೀಡುವುದಿಲ್ಲ' ಎಂದಿದೆ.

ಮಮ್ಮೂಟ್ಟಿಗೆ 70ರ ಸಂಭ್ರಮ: ಶುಭಾಶಯಗಳ ಮಹಾಪೂರ

ತಿರುವನಂತಪುರ (ಪಿಟಿಐ): ಮಾಲಿವುಡ್‌ನ ಮೆಗಾಸ್ಟಾರ್ ಮಮ್ಮೂಟ್ಟಿ ಮಂಗಳವಾರ 70ನೇ ವರ್ಷಕ್ಕೆ ಕಾಲಿಟ್ಟಿದ್ದು, ಮಲಯಾಳಂ ಚಿತ್ರರಂಗ, ರಾಜಕಾರಣಿಗಳು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಗಣ್ಯರು ಸೇರಿದಂತೆ ಅವರ ಅಭಿಮಾನಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಶುಭಾಶಯಗಳ ಮಳೆಯನ್ನೇ ಹರಿಸಿದ್ದಾರೆ.

ಕೇರಳದ ಪ್ರಮುಖ ದಿನಪತ್ರಿಕೆಗಳು ಮಮ್ಮೂಟ್ಟಿ ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ಇಡೀ ಪುಟವನ್ನು ಮೀಸಲಿಟ್ಟರೆ, ಖಾಸಗಿ ವಾಹಿನಿಗಳು ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದವು.


ಮಮ್ಮೂಟ್ಟಿ

ಫೇಸ್‌ಬುಕ್‌ನಲ್ಲಿ ಹುಟ್ಟುಹಬ್ಬದ ಶುಭಾಶಯ ಕೋರಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಮಮ್ಮೂಟ್ಟಿ ಅವರನ್ನು 'ಅನನ್ಯ ಪ್ರತಿಭೆ'ಎಂದು ಶ್ಲಾಘಿಸಿದ್ದಾರೆ. ನಂತರ ದೂರವಾಣಿ ಕರೆ ಮಾಡಿ ಶುಭಾಶಯ ಕೋರಿದರು. ವಿರೋಧಪಕ್ಷದ ನಾಯಕ ವಿ.ಡಿ. ಸತೀಶನ್ ಕೂಡಾ ಶುಭ ಹಾರೈಸಿದರು. ಚಿತ್ರರಂಗದ ಹಿರಿಯರು ಸೇರಿದಂತೆ ಯುವನಟರು ಶುಭಾಶಯ ಕೋರಿದ್ದಾರೆ.

ತೆಲಂಗಾಣ: ಮುಂದುವರಿದ ಮಳೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಹಲವು ಜಿಲ್ಲೆಗಳಲ್ಲಿ ಮೂರನೇ ದಿನವಾದ ಮಂಗಳವಾರವೂ ಭಾರಿ ಮಳೆ ಮುಂದುವರಿದಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಹಲವೆಡೆ ರಸ್ತೆ ಸಂಪರ್ಕ ಸ್ಥಗಿತಗೊಂಡಿದೆ.

ವಾರಂಗಲ್ ಗ್ರಾಮಾಂತರ ಜಿಲ್ಲೆಯ ನಾಡಿಕುಡದಲ್ಲಿ 38.8 ಸೆಂ.ಮೀ ಮಳೆಯಾಗಿದ್ದು, ಕರೀಂನಗರ, ಜಯಶಂಕರ್ ಭೂಪಾಲಪಲ್ಲೆ, ವಾರಂಗಲ್ ನಗರ, ರಾಜಣ್ಣ ಸಿರ್ಸಿಲ್ಲಾ, ಭದ್ರಾದ್ರಿ–ಕೊತ್ತಗುಡೆಂ ಜಿಲ್ಲೆಗಳಲ್ಲಿಯೂ ಭಾರೀ ಮಳೆ ಸುರಿದಿದೆ.

ಭಾರೀ ಮಳೆಯಿಂದಾಗಿ ಈ ಭಾಗದ ಜಿಲ್ಲೆಗಳಲ್ಲಿನ ನದಿಗಳು ಮತ್ತು ಇತರ ಜಲಮೂಲಗಳು ತುಂಬಿವೆ. ಕೆಲವೆಡೆ ರಸ್ತೆಗಳಲ್ಲಿಯೂ ನೀರು ಹರಿಯುತ್ತಿರುವುದರಿಂದ ರಸ್ತೆ ಸಂಪರ್ಕ ಅಸ್ತವ್ಯಸ್ತಗೊಂಡಿದೆ.

ಹವಾಮಾನ ಇಲಾಖೆಯು ಬುಧವಾರವು ಭಾರಿ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದೆ.

ನವದೆಹಲಿಗೆ ಭೇಟಿ ನೀಡಿರುವ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿ ಸೋಮೇಶ್ ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳೂ ಸೇರಿದಂತೆ ರಾಜ್ಯದ ಎಲ್ಲ ಆಡಳಿತ ವ್ಯವಸ್ಥೆ ಎಚ್ಚರವಾಗಿದ್ದು ಕಾರ್ಯ ನಿರ್ವಹಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಜೈಲಿನಲ್ಲೇ ಬಿ.ಎ ಮಾಡಿದ ಗ್ಯಾಂಗ್‌ಸ್ಟರ್

ನಾಗ್ಪುರ (ಪಿಟಿಐ): 'ಕೊಲೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನಾಗ್ಪುರ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಗ್ಯಾಂಗ್‌ಸ್ಟರ್, ರಾಜಕಾರಣಿ ಅರುಣ್ ಗಾವ್ಳಿ, ಮಹಾ ರಾಷ್ಟ್ರದ ಮುಕ್ತ ವಿಶ್ವವಿದ್ಯಾಲಯದಿಂದ ಕಲಾ ವಿಭಾಗದಲ್ಲಿ ಪದವಿ ಪಡೆಯಲಿದ್ದಾರೆ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'2017ರಲ್ಲಿ ಎನ್‌ಜಿಒವೊಂದು ಆಯೋಜಿಸಿದ್ದ 'ಗಾಂಧಿ ಚಿಂತನೆ' ಪರೀಕ್ಷೆಯಲ್ಲಿ ಅರುಣ್ ಉನ್ನತ ಶ್ರೇಣಿ ಪಡೆದಿದ್ದರು. 2019ರಲ್ಲಿ ನಾಸಿಕ್‌ನ ಯಶವಂತರಾವ್ ಚವಾಣ್ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾಲಯದಲ್ಲಿ (ವೈಸಿಎಂಒಯು) ಬಿಎ ಪದವಿಗೆ ಸೇರಿದ್ದ ಅವರೀಗ ಪದವೀಧರರಾಗುತ್ತಿದ್ದಾರೆ' ಎಂದು ಜೈಲಿನ ಅಧೀಕ್ಷಕ ಅನೂಪ್ ಕುಮ್ರೆ ಮಾಹಿತಿ ನೀಡಿದ್ದಾರೆ.

'ಬಿ.ಎ ಮೊದಲ ಮತ್ತು ಎರಡನೆ ವರ್ಷದಲ್ಲಿ ಒಂದು ವಿಷಯದಲ್ಲಿ ಅರುಣ್ ಅನುತ್ತೀರ್ಣರಾಗಿದ್ದರು. ಆದರೆ, ಅಂತಿಮ ಪದವಿಯಲ್ಲಿ ಅವರಿಗೆ ಪರೀಕ್ಷೆ ಬರೆಯಲು ಅವಕಾಶ ದೊರೆಯಿತು.' ಎಂದಿದ್ದಾರೆ. ಶಿವಸೇನಾದ ಕಾರ್ಪೊರೇಟರ್ ಕಮಲಾಕರ್ ಜಮ್ಸಂದೇಕರ್ ಅವರ ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿರುವ ಅರುಣ್ ಗಾವ್ಳಿ 2008ರಿಂದ ಜೈಲಿನಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಂಗಳನಲ್ಲಿ ಕಲ್ಲು ಸಂಗ್ರಹಿಸಿದ ನಾಸಾದ ರೋವರ್

ವಾಷಿಂಗ್ಟನ್ (ಎಎಫ್‌ಪಿ): ಮಂಗಳ ಗ್ರಹದ ನೆಲದಲ್ಲಿ ಸಂಚರಿಸುತ್ತಿರುವ ನಾಸಾದ ಪರ್ಸಿವರೆನ್ಸ್ ರೋವರ್, ಇದೇ ಮೊದಲ ಬಾರಿಗೆ ಯಶಸ್ವಿಯಾಗಿ ಅಲ್ಲಿನ ಕಲ್ಲಿನ ಮಾದರಿ ಸಂಗ್ರಹಿಸಿರುವುದು ಖಚಿತ ಪಟ್ಟಿದೆ. ಮುಂಬರುವ ಮಂಗಳಯಾನ ಯೋಜನೆಗಳಲ್ಲಿ ಆ ಕಲ್ಲಿನ ಮಾದರಿಯನ್ನು ಭೂಮಿಗೆ ಹೊತ್ತುತರಲು ಉದ್ದೇಶಿಸಲಾಗಿದೆ.

ಇದೇ ಮೊದಲ ಬಾರಿಗೆ ಅನ್ಯಗ್ರಹದಲ್ಲಿ ಬಂಡೆಯನ್ನು ಕೊರೆದು ಅದರ ಮಾದರಿಯನ್ನು ಸಂಗ್ರಹಿಸಿರುವ ಕಾರ್ಯಾಚರಣೆ ನಡೆಸಲಾಗಿದೆ.

ಮ್ಯಾನ್ಮಾರ್: ಸೇನಾ ಸರ್ಕಾರದ ವಿರುದ್ಧ ದಂಗೆಗೆ ಕರೆ

ಬ್ಯಾಂಕಾಕ್: ಮ್ಯಾನ್ಮಾರ್‌ನ ಮಿಲಿಟರಿ ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ದಂಗೆ ಏಳುವಂತೆ 'ನ್ಯಾಷನಲ್ ಯೂನಿಟಿ ಗವರ್ನ್‌ಮೆಂಟ್'(ಎನ್‌ಯುಜಿ) ಮಂಗಳವಾರ ಕರೆ ನೀಡಿದೆ.

'ದೇಶದ ಪ್ರತಿಯೊಂದು ಗ್ರಾಮ, ಪಟ್ಟಣ, ನಗರದಲ್ಲಿ ಏಕಕಾಲದಲ್ಲಿ ದಂಗೆ ಏಳಬೇಕು ಎಂದು ಕರೆ ನೀಡಿರುವ ಎನ್‌ಯುಜಿ ಹಂಗಾಮಿ ಅಧ್ಯಕ್ಷ ದುವಾ ಲಶಿ ಲಾ ಅವರು, ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಇದರೊಂದಿಗೆ ಅವರ ಭಾಷಣದ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ.

ಫಿಲಿಪ್ಪಿನ್ಸ್‌ನಲ್ಲಿ ಭಾರಿ ಚಂಡಮಾರುತ

ಮನಿಲಾ (ಎಪಿ): ಪ್ರಬಲ ಕ್ಯಾನ್ಸನ್ ಚಂಡಮಾರುತ ಮಂಗಳವಾರ ಪೂರ್ವ ಫಿಲಿಪ್ಪಿನ್ಸ್ ಅನ್ನು ಅಪ್ಪಳಿಸಿದೆ. ತೀವ್ರಗಾಳಿಯಿಂದ ಇಲ್ಲಿನ ಹಲವಾರು ಪ್ರಾಂತ್ಯಗಳಲ್ಲಿ ವಿದ್ಯುತ್ ಕಡಿತ ಸಂಭವಿಸಿದೆ.

ಮಾರುತವು ಗಂಟೆಗೆ 120ರಿಂದ 150 ಕಿ.ಮೀ ವೇಗವಾಗಿ ಬೀಸುತ್ತಿದ್ದು, ಮಂಗಳವಾರ ಮುಂಜಾನೆ ಪೂರ್ವ ಸಮಾರ್ ಪ್ರಾಂತ್ಯದ ಕರಾವಳಿ ಪಟ್ಟಣ ಹೆರ್ನಾನಿಗೆ ಅಪ್ಪಳಿಸಿದೆ.

ಇಲ್ಲಿನ ಹಲವೆಡೆ ಭಾರಿ ಗಾಳಿ ಸಹಿತ ಮಳೆಯಾಗುವ ಮುನ್ಸೂಚನೆಯನ್ನು ಸ್ಥಳೀಯ ಹವಾಮಾನ ಇಲಾಖೆ ನೀಡಿದೆ.

ಫಿಲಿಪ್ಪಿನ್ಸ್‌ನಲ್ಲಿ ಮುಂಗಾರು ಮಳೆಯನ್ನು ಹೊರತುಪಡಿಸಿ ಪ್ರತಿ ವರ್ಷ ಸುಮಾರು 20 ಚಂಡಮಾರುತಗಳು ಅಪ್ಪಳಿಸುತ್ತವೆ. 'ಪೆಸಿಫಿಕ್ ರಿಂಗ್ ಆಫ್ ಫೈರ್' ಎಂದು ಕರೆಯುವ ಈ ದೇಶದಲ್ಲಿ ಭೂಕಂಪ ಮತ್ತು ಜ್ವಾಲಾಮುಖಿ ಸ್ಫೋಟಗಳು ಸಂಭವಿಸುತ್ತಲೇ ಇರುತ್ತವೆ.

ಛತ್ತೀಸಗಡ ಸಿ.ಎಂ ತಂದೆ ವಿರುದ್ಧ ಪ್ರಕರಣ, ಬಂಧನ


ರಾಯಪುರ (ಪಿಟಿಐ): ನಿರ್ದಿಷ್ಟ ಸಮುದಾಯದ ವಿರುದ್ಧ ಅವಹೇಳನಕಾರಿ ಪದ ಬಳಸಿದ ಆರೋಪದಡಿ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ತಂದೆ ನಂದಕುಮಾರ್ ಬಘೇಲ್ ಅವರನ್ನುಮಂಗಳವಾರ ಇಲ್ಲಿ ಬಂಧಿಸಲಾಗಿದೆ.

ತಮ್ಮ ತಂದೆ, 86 ವರ್ಷದ ತಂದೆ ಬಳಸಿದ ಪದ ಕುರಿತು ಮುಖ್ಯಮಂತ್ರಿ ಕೂಡಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯಾರೊಬ್ಬರೂ ಕಾನೂನಿಗಿಂತ ದೊಡ್ಡವರಲ್ಲ ಎಂದು ಮುಖ್ಯ ಮಂತ್ರಿ ಹೇಳಿದ್ದಾರೆ.

ಅವರನ್ನು ಸ್ಥಳೀಯ ಕೋರ್ಟ್‌ನಲ್ಲಿ ಹಾಜರುಪಡಿಸಲಾಗಿದೆ. ಅವರ ವಿರುದ್ಧ ಸರ್ವ ಬ್ರಾಹ್ಮಣ ಸಮಾಜ ದೂರು ನೀಡಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದು, ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದ್ದಾರೆ.

ಅವರ ವಿರುದ್ಧ ಭಿನ್ನ ಸಮುದಾಯಗಳ ಮಧ್ಯೆ ವೈಷಮ್ಯ ಉಂಟು ಮಾಡಿದ್ದಕ್ಕೆ ಸಂಬಂಧಿತ ಐಪಿಸಿ 153 (ಎ) ಅನ್ವಯ ಪ್ರಕರಣ ದಾಖಲಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,377
ಇಂದಿನ ಅಂತ್ಯ	17,362
▼	15
ದಿನದ ಗರಿಷ್ಠ	17,429

ವಿನಿಮಯ ದರ

$ ಡಾಲರ್	73.42
£ ಪೌಂಡ್	101.44
€ ಯುರೊ	87.11
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1390(1395)
ಸೂರ್ಯಕಾಂತಿ(ರಿಫೈನ್ಡ್)	₹1440(1450)
ಪಾಮೋಲಿನ್	₹1255 (1256)

ಯೋಜನೆಗಳ ಅನುಷ್ಠಾನಕ್ಕೆ ಸಿಎಂ ಮನವಿ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ನಬಾರ್ಡ್ ಮತ್ತು ಸಿಡ್ಬಿ (ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್) ನಿರ್ವಹಿಸುತ್ತಿರುವ 'ಒಂದು ಜಿಲ್ಲೆ, ಒಂದು ಉತ್ಪನ್ನ'ದಂತಹ ಯೋಜನೆಗಳನ್ನು ರಾಜ್ಯದಲ್ಲಿ ವ್ಯಾಪಕವಾಗಿ ಅನುಷ್ಠಾನಕ್ಕೆ ತರಬೇಕು ಎಂದು ಮನವಿ ಮಾಡಿದರು.

'ಈ ವಿಚಾರವಾಗಿ ನಬಾರ್ಡ್ ಹಾಗೂ ಸಿಡ್ಬಿ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು, ಯೋಜನೆಗಳನ್ನು ರಾಜ್ಯದಲ್ಲಿ ಪೂರ್ತಿಯಾಗಿ ಅನುಷ್ಠಾನಕ್ಕೆ ತಂದ ಬಳಿಕ ರಾಜ್ಯಕ್ಕೆ ತಾವು ಭೇಟಿ ನೀಡುವುದಾಗಿ ನಿರ್ಮಲಾ ಅವರು ನನಗೆ ಭರವಸೆ ನೀಡಿದ್ದಾರೆ' ಎಂದು ಬೊಮ್ಮಾಯಿ ಸಭೆಯ ನಂತರ ತಿಳಿಸಿದರು. ಕೌಶಲ ಅಭಿವೃದ್ಧಿಯಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಹಾಗೂ ಸ್ವಸಹಾಯ ಸಂಘಗಳ ಸದಸ್ಯರಿಗೆ ಉದ್ಯೋಗಾವಕಾಶ ಸೃಷ್ಟಿಯಲ್ಲಿ ಈ ಯೋಜನೆಗಳು ಮಹತ್ವದ್ದಾಗುತ್ತವೆ ಎಂದರು. ರಾಜ್ಯದಲ್ಲಿನ ಜಿಎಸ್‌ಟಿ ಸಂಗ್ರಹ ಹಾಗೂ ರಾಜ್ಯಕ್ಕೆ ಬರಬೇಕಿರುವ ಪರಿಹಾರ ಮೊತ್ತದ ಬಗ್ಗೆಯೂ ನಿರ್ಮಲಾ ಜೊತೆ ಚರ್ಚಿಸಿದರು.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಹರ್ಷ, ಊರುಬೇಡ

- **ಪ್ರಶ್ನೆ: ಎಂಎನ್‌ಸಿಯಲ್ಲಿ ಕೆಲಸ. ತಿಂಗಳ ಸಂಬಳ ₹ 1.25 ಲಕ್ಷ. ವಯಸ್ಸು 27 ವರ್ಷ. ಅವಿವಾಹಿತ. ನನ್ನ ಖರ್ಚು ಕಳೆದು ಕನಿಷ್ಠ ₹ 80 ಸಾವಿರ ಉಳಿಸಬಹುದು. ಕಳೆದ ಎರಡು ವರ್ಷಗಳಿಂದ ನಾನು ನೌಕರಿಯಲ್ಲಿದ್ದು, ಏನೂ ಉಳಿತಾಯ ಮಾಡಿಲ್ಲ. ತೆರಿಗೆ ಉಳಿಸಲು, ನನ್ನ ಭವಿಷ್ಯಕ್ಕೆ ಮಾರ್ಗದರ್ಶನ ಮಾಡಿ.**

ಉತ್ತರ: ತೆರಿಗೆ ಉಳಿಸಲು ಜೀವವಿಮೆ, ಪಿಪಿಎಫ್ ಹಾಗೂ 5 ವರ್ಷಗಳ ಬ್ಯಾಂಕ್ ಠೇವಣಿ ಆರಿಸಿಕೊಳ್ಳಿ. ಸೆಕ್ಷನ್ 80ಸಿ ಆಧಾರದ ಮೇಲೆ ಇಲ್ಲಿ ಉಳಿಸಿದ ಗರಿಷ್ಠ ₹ 1.50 ಲಕ್ಷವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಸೆಕ್ಷನ್ 80ಸಿ ಹೊರತುಪಡಿಸಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಎನ್‌ಪಿಎಸ್‌ನಲ್ಲಿ ಗರಿಷ್ಠ ₹ 50 ಸಾವಿರ ಹೂಡಿಕೆ ಮಾಡಿದರೆ ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ಸೆಕ್ಷನ್ 16(1ಎ) ಸ್ಟ್ಯಾಂಡರ್ಡ್ ಡಿಡಕ್ಷನ್‌ನಲ್ಲಿ ₹ 50 ಸಾವಿರ ವಿನಾಯಿತಿ, ಇವೆಲ್ಲವುಗಳಿಂದ ₹ 2.50 ಲಕ್ಷಗಳತನಕ ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ಜೀವ ವಿಮೆ ನಿಮ್ಮ ಆದಾಯದ ಶೇಕಡ 10–15ರಷ್ಟು ಇರಲಿ. ಪಿಪಿಎಫ್ ಗರಿಷ್ಠ ಮಿತಿ ₹ 1.50 ಲಕ್ಷ. ಇಲ್ಲಿ ಬರುವ ಬಡ್ಡಿಗೆ ತೆರಿಗೆ ಇಲ್ಲವಾದ್ದರಿಂದ ಉಳಿತಾಯಕ್ಕೆ ಉತ್ತಮ ಮಾರ್ಗ. ನಿಮ್ಮ ಮುಂದಿನ ಗುರಿ, ನಿವೇಶನ ಕೊಂಡು ಮನೆ ಕಟ್ಟಿಸುವುದು ಅಥವಾ ಕಟ್ಟಿದ ಮನೆ ಕೊಳ್ಳುವುದಾಗಿರಲಿ. ಇದಕ್ಕೆ ಪೂರಕವಾಗಿ ಕನಿಷ್ಠ ₹ 30 ಸಾವಿರ ಆರ್.ಡಿ.ಯನ್ನು 5 ವರ್ಷಗಳ ಅವಧಿಗೆ ಮಾಡಿರಿ. ಮದುವೆ ತನಕ ಪ್ರತೀ ವರ್ಷ ಕನಿಷ್ಠ 20 ಗ್ರಾಂ ಬಂಗಾರದ ನಾಣ್ಯ ಕೊಳ್ಳಿ. ಮುಖ್ಯವಾಗಿ ಉಳಿತಾಯ ಖಾತೆಯಲ್ಲಿ ₹ 1 ಲಕ್ಷಕ್ಕೂ ಹೆಚ್ಚಿನ ಹಣ ಇರಿಸದಿರಿ. ಹೆಚ್ಚಿನ ಹಣವನ್ನು ಅವಧಿ ಠೇವಣಿಗೆ ವರ್ಗಾಯಿಸುತ್ತಾ ಬನ್ನಿ. ಇನ್ನೂ ಹೆಚ್ಚಿನ ಮಾಹಿತಿಗೆ ನನಗೆ ಕರೆ ಮಾಡಿ.

ಮಲ್ಲಪ್ಪ ಶರಣಪ್ಪ ಉದಮಾರ, ಬಾಗಲಕೋಟೆ

- **ಪ್ರಶ್ನೆ: ಪಟ್ಟಣ ಸಹಕಾರ ಬ್ಯಾಂಕ್ ಹಾಗೂ ಸಹಕಾರ ಸಂಘಗಳು (ಸೊಸೈಟಿ) ಠೇವಣಿ ಸ್ವೀಕರಿಸಿ ಸಾಲ ನೀಡುತ್ತವೆ. ಜನರು ಸೊಸೈಟಿಗಳನ್ನು ಬ್ಯಾಂಕ್ ಎಂದೇ ನಂಬಿದ್ದಾರೆ. ಕೆಲವೊಮ್ಮೆ ಪತ್ರಿಕೆಗಳು ಹಾಗೂ ಟಿ.ವಿ. ಮಾಧ್ಯಮಗಳು ಸೊಸೈಟಿಗಳನ್ನು ಬ್ಯಾಂಕ್ ಎಂದೇ ವಿವರಿಸುತ್ತವೆ. ದಯಮಾಡಿ ಇವುಗಳ ನಡುವಿನ ವ್ಯತ್ಯಾಸ, ಭದ್ರತೆ ಮೇಲ್ವಿಚಾರಣೆ ವಿಚಾರದಲ್ಲಿ ವಿವರವಾಗಿ ತಿಳಿಸಿ.**

ಉತ್ತರ: ಕರ್ನಾಟಕದಲ್ಲಿ 265 ಪಟ್ಟಣ ಸಹಕಾರಿ ಬ್ಯಾಂಕ್‌ಗಳು ಹಾಗೂ ಕೃಷಿಯೇತರ 5,500 ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ನೀವು ತಿಳಿಸಿದಂತೆ ಗ್ರಾಹಕರಿಂದ ಠೇವಣಿ ಸ್ವೀಕರಿಸಿ ಈ ಎರಡೂ ಸಂಸ್ಥೆಗಳು ಸಾಲ ನೀಡುತ್ತವೆ. ಹೊರನೋಟಕ್ಕೆ ವ್ಯತ್ಯಾಸ ಕಾಣದಿದ್ದರೂ ಸೊಸೈಟಿಗಳನ್ನು ಬ್ಯಾಂಕ್‌ಗಳು ಎಂದು ಎಂದಿಗೂ ಪರಿಗಣಿಸಲಾಗುವುದಿಲ್ಲ. ಪಟ್ಟಣ ಸಹಕಾರ ಬ್ಯಾಂಕ್‌ಗಳು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತವೆ. ಜೊತೆಗೆ ರಾಜ್ಯ ಸರ್ಕಾರದ ಸಹಕಾರ ಇಲಾಖೆಯಿಂದ ಬೈಲಾ ಮಂಜೂರಾತಿ ಪಡೆಯುತ್ತವೆ. ರಾಜ್ಯ ಸರ್ಕಾರ ಹಾಗೂ ಆರ್‌ಬಿಐ ಪಟ್ಟಣ ಸಹಕಾರ ಬ್ಯಾಂಕ್‌ಗಳನ್ನು ನಿಯಂತ್ರಿಸುತ್ತವೆ. ಸಹಕಾರ ಸಂಘಗಳನ್ನು ರಾಜ್ಯ ಸರ್ಕಾರದ ಸಹಕಾರ ಇಲಾಖೆ ಮಾತ್ರ ನಿಯಂತ್ರಿಸುತ್ತದೆ. ಇವುಗಳಿಗೆ ಆರ್‌ಬಿಐ ನಿಯಂತ್ರಣ ಇರುವುದಿಲ್ಲ. ಎಲ್ಲಕ್ಕೂ ಮುಖ್ಯವಾಗಿ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ತೊಡಗಿಸಿದ ₹ 5 ಲಕ್ಷದವರೆಗಿನ ಠೇವಣಿಗೆ ವಿಮಾ ಸವಲತ್ತು ಇರುತ್ತದೆ. ಬ್ಯಾಂಕ್‌ಗಳು ತೊಂದರೆಗೀಡಾದರೆ ಗ್ರಾಹಕರು ₹ 5 ಲಕ್ಷದವರೆಗೆ ವಿಮೆ ಮೂಲಕ ಪಡೆಯುವ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿದೆ. ಸೊಸೈಟಿ ಠೇವಣಿಗಳಿಗೆ ಈ ಸವಲತ್ತು ಇರುವುದಿಲ್ಲ. ಭದ್ರತೆಯ ವಿಚಾರದಲ್ಲಿ, ರಾಜ್ಯದಲ್ಲಿ ಬಹಳಷ್ಟು ಸೊಸೈಟಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ ಸೊಸೈಟಿಗಳನ್ನು ಬ್ಯಾಂಕ್ ಎಂದು ಪರಿಗಣಿಸಲಾಗದು.

ವೀರಪ್ಪ, ಊರುಬೇಡ

- **ಪ್ರಶ್ನೆ: ನಾನು ₹ 66 ಲಕ್ಷವನ್ನು ಕಿಸಾನ್ ವಿಕಾಸ ಪತ್ರದಲ್ಲಿ ತೊಡಗಿಸಿದ್ದೇನೆ. ಈ ಠೇವಣಿಗೆ ತೆರಿಗೆ ವಿನಾಯಿತಿ ಇದೆಯೇ ಹಾಗೂ ವಾರ್ಷಿಕ ಬಡ್ಡಿಗೆ ತೆರಿಗೆ ಸಲ್ಲಿಸಬೇಕೇ?**

ಉತ್ತರ: ಸೆಕ್ಷನ್ 80ಸಿ ಆಧಾರದ ಮೇಲೆ ಓರ್ವ ವ್ಯಕ್ತಿ ವಿಮಾ ಕಂತು ಪಿಎಫ್, ಪಿಪಿಎಫ್, ಎನ್‌ಎಸ್‌ಸಿ, ಇಬ್ಬರು ಮಕ್ಕಳ ಟ್ಯೂಷನ್ ಶುಲ್ಕ, ಗೃಹ ಸಾಲದ ಕಂತು, 5 ವರ್ಷಗಳ ಬ್ಯಾಂಕ್ ಠೇವಣಿ (ಠೇವಣಿ ಶೆಡ್ಯೂಲ್ ಬ್ಯಾಂಕ್‌ಗಳಲ್ಲಿ ಮಾತ್ರ ಮಾಡಬಹುದು), 5 ವರ್ಷಗಳ ಅಂಚೆ ಕಚೇರಿ ಅವಧಿ ಠೇವಣಿ ಹಾಗೂ ಸೀನಿಯರ್ ಸಿಟಿಜನ್ ಠೇವಣಿ ಇವುಗಳಲ್ಲಿ ಗರಿಷ್ಠ ₹ 1.50 ಲಕ್ಷ ಹೂಡಿಕೆ ಮಾಡಿ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಆದರೆ, ಕಿಸಾನ್ ವಿಕಾಸ ಪತ್ರ ಈ ವ್ಯಾಪ್ತಿಗೆ ಬರುವುದಿಲ್ಲ. ಕಿಸಾನ್ ವಿಕಾಸ ಪತ್ರದಿಂದ ಬರುವ ಬಡ್ಡಿ ನಿಮ್ಮ ಒಟ್ಟು ಆದಾಯಕ್ಕೆ ಸೇರಿಸಿ ತೆರಿಗೆ ಕೊಡಬೇಕಾಗುತ್ತದೆ. ಸೆಕ್ಷನ್ 10(II) ಆಧಾರದ ಮೇಲೆ ಪಿಎಫ್, ಪಿಪಿಎಫ್ ಹೊರತುಪಡಿಸಿ ಬೇರಾವ ಠೇವಣಿಗಳಿಂದ ಬರುವ ಬಡ್ಡಿ ವರಮಾನಕ್ಕೆ ತೆರಿಗೆ ವಿನಾಯಿತಿ ಇರುವುದಿಲ್ಲ.

ತಿದ್ದುಪಡಿ: ಹಿಂದಿನ ವಾರ ಭಾಗ್ಯಲಕ್ಷ್ಮಿ, ಎಚ್‌ಆರ್‌ಬಿಆರ್ ಲೇಔಟ್, ಬೆಂಗಳೂರು ಅವರ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಎನ್‌ಎಚ್‌ಎಐ–ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸುವ ಗರಿಷ್ಠ ಮೊತ್ತವು ₹ 50 ಸಾವಿರ ಎಂದಾಗಿತ್ತು ಅದನ್ನು ₹ 5 ಲಕ್ಷ ಎಂದು ಓದಿಕೊಳ್ಳಬೇಕು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ವಾಹನ ವಿತರಕರ ಸಂಘಟನೆಗಳ ಒಕ್ಕೂಟ ಮಾಹಿತಿ

ಪ್ರಯಾಣಿಕ ವಾಹನ ರಿಟೇಲ್ ಮಾರಾಟ ಶೇ 39 ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟವು 2020ರ ಆಗಸ್ಟ್‌ಗೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ಶೇಕಡ 39ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಮಂಗಳವಾರ ತಿಳಿಸಿದೆ.

2020ರ ಆಗಸ್ಟ್‌ನಲ್ಲಿ 1.82 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. ಮಾರಾಟದ ಸಂಖ್ಯೆಯು ಈ ವರ್ಷದ ಆಗಸ್ಟ್‌ನಲ್ಲಿ 2.53 ಲಕ್ಷಕ್ಕೆ ಏರಿಕೆ ಕಂಡಿದೆ.

ದ್ವಿಚಕ್ರ ವಾಹನಗಳ ಮಾರಾಟವು ಶೇ 7ರಷ್ಟು ಹೆಚ್ಚಾಗಿದ್ದು 9.76 ಲಕ್ಷಕ್ಕೆ ತಲುಪಿದೆ. ವಾಣಿಜ್ಯ ವಾಹನಗಳ



ಮಾರಾಟ ಶೇ 98ರಷ್ಟು ಹೆಚ್ಚಾಗಿದ್ದು, 26,851ರಿಂದ 53,150ಕ್ಕೆ ಏರಿಕೆ ಆಗಿದೆ.

ತ್ರಿಚಕ್ರ ವಾಹನಗಳ ಮಾರಾಟ ಶೇ 80ರಷ್ಟು ಹೆಚ್ಚಾಗಿದೆ. ಎಲ್ಲಾ ವಿಭಾಗಗಳನ್ನೂ ಒಳಗೊಂಡ ಒಟ್ಟಾರೆ ಮಾರಾಟವು 12.09 ಲಕ್ಷದಿಂದ 13.84 ಲಕ್ಷಕ್ಕೆ, ಅಂದರೆ ಶೇ 14ರಷ್ಟು ಏರಿಕೆಯಾಗಿದೆ ಎಂದು ಅದು ಮಾಹಿತಿ ನೀಡಿದೆ.

ಹಬ್ಬದಲ್ಲಿ ಮಾರಾಟ ಇಳಿಕೆ ಸಂಭವ: ಸೆಮಿಕಂಡಕ್ಟರ್ ಕೊರತೆಯು ಹಬ್ಬದ ಋತುವಿನಲ್ಲಿ ಪ್ರಯಾಣಿಕ ವಾಹನ ಮಾರಾಟದ ಮೇಲೆ ಪರಿಣಾಮ ಬೀರುವ ಸಂಭವ ಇದೆ ಎಂದು ಎಫ್‌ಎಡಿಎ ಎಚ್ಚರಿಕೆ ನೀಡಿದೆ.

ಹಬ್ಬದ ಋತುವಿನಲ್ಲಿ ಅತ್ಯಂತ ಬೇಗನೆ ಮಾರಾಟ ಆಗುವ ಆವೃತ್ತಿಗಳ ಕೊರತೆ ಇರುವುದು ಹಾಗೂ ದಾಸ್ತಾನು ಮಟ್ಟವು ಕನಿಷ್ಠ ಮಟ್ಟದಲ್ಲಿ ಇರುವ ಕಾರಣಗಳಿಂದಾಗಿ ಪ್ರಯಾಣಿಕ ವಾಹನ ಮಾರಾಟ ಕಡಿಮೆ ಆಗಬಹುದು ಎಂದು ಅದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

7-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1355 (1355)
ಪಾಮ್ ವಾರದ ಡೆಲಿವರಿ	1253 (1254)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,300 (47,300)
ಬೆಳ್ಳಿ ಕೆ.ಜಿ 64,200 (64,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಂತರ ಕಾಯ್ದುಕೊಳ್ಳಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-47000
ಹಳತು	42500-50500
ಪುತ್ತೂರು	
ಕೋಕ	10500-26000
ಹೊಸತು	32000-46500
ಸಿದ್ದಾಪುರ	
ಬಿಳಿಗೋಟು	31699-37999
ಚಾಲಿ	41099-44669
ಕೋಕ	28689-37312
ಕೆಂಪುಗೋಟು	31689-37689
ರಾಶಿ	47099-51109
ತಟ್ಟಿಬೆಟ್ಟೆ	36509-47609
ಶಿರಸಿ	
ಬೆಟ್ಟೆ	32116-48889
ಬಿಳಿಗೋಟು	26099-39289
ಚಾಲಿ	40069-44298
ರಾಶಿ	21099-52269
ಯಲ್ಲಾಪುರ	
ಬಿಳಿಗೋಟು	31899-38699
ಚಾಲಿ	39462-45000
ಕೋಕ	24312-36329
ಕೆಂಪುಗೋಟು	30212-36999
ರಾಶಿ	48819-52388
ತಟ್ಟಿಬೆಟ್ಟೆ	42090-48419
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	52000-58419
ಗೊರಬಲು	20000-43869
ನ್ಯೂ ವೆರೈಟಿ	45509-55099
ರಾಶಿ	44000–58099
ಸರಕು	50099-77050
ಸಾಗರ	
ಬಿಳಿಗೋಟು	25819-36199
ಚಾಲಿ	43299-44099
ಕೋಕ	39799-39799
ಕೆಂಪುಗೋಟು	34299-39799
ರಾಶಿ	41009-57049
ಸಿಪ್ಪೆಗೋಟು	12349-25300
ರಾಮನಗರ ರೇಷ್ಮೆ	
ಮಿಶ್ರ ತಳಿ	247-478
ದ್ವಿತಳಿ	277-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಪ್ಲಾಂಟರ್ಸ್	ಹಾಸನ ಅಲ್ಲಾನಾ	ನ್ಯೂಯಾರ್ಕ್
ಎಪಿ	14100	---	13100	--- ಸೆಂಟ್ಸ್
ಎಸಿ	6300	---	5275	
ಆರ್‌ಪಿ	6250	---	6275	ಲಂಡನ್
ಆರ್‌ಸಿ	3560	---	3640	--- ಡಾಲರ್ಸ್

ರಾಜ್ಯಮಟ್ಟದ ಸೀನಿಯರ್ ಹಾಗೂ 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟ

ಆಳ್ವಾಸ್ ಸ್ಪೋರ್ಟ್ಸ್‌ಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ:ಮೂಡುಬಿದಿರೆಯ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ ಅಜ್ಜರಕಾಡು ಕ್ರೀಡಾಂಗಣದಲ್ಲಿ ಮಂಗಳವಾರ ಮುಕ್ತಾಯವಾದ ರಾಜ್ಯಮಟ್ಟದ ಸೀನಿಯರ್ ಹಾಗೂ 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ ತಂಡವು ಒಟ್ಟು 175 ಅಂಕಗಳನ್ನು ಗಳಿಸಿತು. ಇದೇ ಕ್ಲಬ್‌ನ ಪುರುಷರ ತಂಡವು 33 ಮತ್ತು ಮಹಿಳೆಯರ ಬಳಗವು 56 ಅಂಕಗಳನ್ನು ಗಳಿಸಿ ತಂಡ ವಿಭಾಗದ ಪ್ರಶಸ್ತಿಗಳನ್ನೂ ಜಯಿಸಿದರು.

23 ವರ್ಷದೊಳಗಿನವರ ವಿಭಾಗದಲ್ಲಿ ಧಾರವಾಡದ ಪುರುಷರ ತಂಡವು 23 ಅಂಕ, ಮಹಿಳೆಯರ ವಿಭಾಗದಲ್ಲಿ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ 63 ಅಂಕಗಳೊಂದಿಗೆ ತಂಡ ವಿಭಾಗದ ಪ್ರಶಸ್ತಿಗಳನ್ನೂ ತನ್ನದಾಗಿಸಿಕೊಂಡಿದೆ.

ಪುರುಷರ ವಿಭಾಗದ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಟ್ರ್ಯಾಕ್ ಅಂಡ್ ಫೀಲ್ಡ್‌ನ ರಾಧಾಕೃಷ್ಣ 954 ಪಾಯಿಂಟ್ಸ್ ಹಾಗೂ ಮಹಿಳೆಯರ ಕೆನರಾ ಬ್ಯಾಂಕ್‌ನ ಇಂಚರಾ 1,024 ಪಾಯಿಂಟ್ಸ್‌ನೊಂದಿಗೆ ಉತ್ತಮ ಅಥ್ಲೀಟ್ ಪ್ರಶಸ್ತಿ ಗೌರವ ಗಳಿಸಿದರು.

ಫಲಿತಾಂಶ: ಮಹಿಳೆಯರ 800 ಮೀಟರ್ಸ್ ಓಟ: ದೀಕ್ಷಾ (ಆಳ್ವಾಸ್)–1 ಕಾಲ: 2 ನಿ 23 ಸೆ, ಸಹನಾ(ಹಾಸನ)–2 ಕಾಲ:2 ನಿ 36.4 ಸೆ, ಅರ್ಪಿತಾ (ಆರ್.ಟ್ರ್ಯಾಕ್ ಫೀಲ್ಡ್) ಕಾಲ:2 ನಿ 37.7ಸೆ. 5000 ಮೀಟರ್ಸ್: ಕೆ.ಎಂ. ಲಕ್ಷ್ಮಿ (ಆಳ್ವಾಸ್)–1 ಕಾಲ: 17 ನಿ, ಎಲ್.ಡಿ.ಪ್ರಿಯಾ(ಆಳ್ವಾಸ್)–2 ಕಾಲ: 20 ನಿ 41.4 ಸೆ, ಬಿ.ಮಾಲಾಶ್ರೀ (ಆಳ್ವಾಸ್)–1 ಕಾಲ: 21 ನಿ 32.2 ಸೆ. ಟ್ರಿಪಲ್ ಜಂಪ್: ಕೃತಿ ಜಿ.ಶೆಟ್ಟಿ (ಆಳ್ವಾಸ್)–1 ಅಂತರ: 10.81 ಮೀ, ಯಾಸ್ಮಿನ್ (ಆಳ್ವಾಸ್)–2 ಅಂತರ: 10.52 ಮೀ, ಲಾವಣ್ಯ (ಧಾರವಾಡ)–3 ಅಂತರ: 9.53ಮೀ. ಶಾಟ್‌ಪಟ್: ಅನುಶ್ರೀ (ಶಿವಮೊಗ್ಗ)–1 ಅಂತರ 10.01, ಪಿ.ರೋಷನಿ (ಚಾಮರಾಜನಗರ) ಅಂತರ: 9.2, ಚೈತ್ರಾ (ದಕ್ಷಿಣ ಕನ್ನಡ)–3 ಅಂತರ: 9.2.

ಹ್ಯಾಮರ್ ಥ್ರೋ: ಅನನ್ಯ ಪೂಜಾರಿ (ಕಾರವಾರ)-1 ಅಂತರ: 36.79 ಮೀ, ನಿವೇದಿತಾ ಸಾವಂತ್ (ಕಾರವಾರ)-2 ಅಂತರ: 34.58 ಮೀ, ಪ್ರಗ್ಯಾ (ದಕ್ಷಿಣ ಕನ್ನಡ)-3 ಅಂತರ: 33.99 ಮೀ. 3000 ಎಸ್‌ಸಿ: ಶ್ವೇತಾ (ಧಾರವಾಡ)–1.

ಪುರುಷರ ವಿಭಾಗ: 800 ಮೀಟರ್ಸ್ ಓಟ: ದೇವಯ್ಯ (ಆಳ್ವಾಸ್)–1 ಕಾಲ:1 ನಿ 54.5 ಸೆ, ಬಿ.ಕೆ.ಕುಮಾರಸ್ವಾಮಿ(ಕೆಎಸ್‌ಪಿ)–2 ಕಾಲ: 1 ನಿ 55.4 ಸೆ, ರಕ್ಷಿತ್ (ಆಳ್ವಾಸ್)–3 ಕಾಲ: 1 ನಿ 58.7 ಸೆ, 5000 ಮೀಟರ್ಸ್: ಸುನೀಲ್ (ಧಾರವಾಡ)–1 ಕಾಲ: 15 ನಿ 18.5 ಸೆ, ಸಿ.ಎಸ್.ಲಕ್ಷ್ಮೀಶ (ಮೈಸೂರು)–2 ಕಾಲ: 15 ನಿ 48.8 ಸೆ, ನಿತಿನ್ ಕುಮಾರ್ (ಕೊಡಗು)–3 ಕಾಲ: 15 ನಿ 52.1ಸೆ.

ಲಾಂಗ್‌ಜಂಪ್: ಆರ್.ರಾಧಾಕೃಷ್ಣ (ಕ್ಯಾಪ್ಟನ್ಸ್ ಟಿ ಅಂಡ್ ಎಫ್)–1 ಅಂತರ: 7.15 ಮೀ, ಹಸನ್ (ಉಡುಪಿ)–2 ಅಂತರ: 6.82 ಮೀ,ವಿಜಯ್ ಕುಮಾರ್ (ಧಾರವಾಡ)–3 ಅಂತರ: 6.73 ಮೀ, ಪೋಲ್ ವಾಲ್ಟ್: ರಾಥೋಡ್ ಲೋಕೇಶ್ ದಾಮು (ಮೈಸೂರು)–1, ಅಂತರ: 3.20 ಮೀ, ಸಿದ್ದರಾಮ ಮಲ್ಲಿ (ಕೆಎಸ್‌ಪಿ)–2, ಅಂತರ: 2.60, ಥ್ರಿಪಲ್ ಜಂಪ್: ಕಾರ್ತಿಕ್ (ಆಳ್ವಾಸ್)–1, ಅಂತರ 14.48 ಮೀ, ಸಂದೇಶ್ (ಆಳ್ವಾಸ್)–2, ಅಂತರ 13.69 ಮೀ.

ಶಾಟ್‌ಪಟ್: ಮೋಹನ್ ಕುಮಾರ್ (ಮೈಸೂರು)–1, ಅಂತರ: 14.69 ಮೀ, ಎಸ್.ಕೆ.ಕೆವಿನ್ (ಚಾಮರಾಜನಗರ)–2 ಅಂತರ: 11.68 ಮೀ, ಅನಂತ್ ಕುಮಾರ್ (ಬೆಳಗಾವಿ)–3, ಅಂತರ: 11.21 ಮೀ, ಡಿಸ್ಕಸ್ ಥ್ರೋ: ಎಸ್.ಕೆ.ಕೆವಿನ್ (ಚಾಮರಾಜನಗರ)–1, ಅಂತರ: 32.92ಮೀ, ಹ್ಯಾಮರ್ ಥ್ರೋ: ಬಾಲಚಂದ್ರ (ಧಾರವಾಡ)–1 ಅಂತರ 50.39 ಮೀ, ಗವಿಸ್ವಾಮಿ (ಆಳ್ವಾಸ್)–2, ಅಂತರ: 43.92 ಮೀ, ಸಚಿನ್ ತುಕಾರಾಂ (ಎಸ್‌ಡಿಎಂ ಸ್ಪೋರ್ಟ್ಸ್) ಅಂತರ: 39.73 ಮೀ, 110 ಮೀ ಹರ್ಡಲ್ಸ್: ಶ್ರೀಕಾಂತ್ ಮಧ್ಯಸ್ಥ (ಆಳ್ವಾಸ್)–1, ಕಾಲ: 15 ಸೆ, ಶ್ರವನ್ ಎಸ್.ಉಲ್ಲಾಳ್ (ದಕ್ಷಿಣ ಕನ್ನಡ)–2, ಕಾಲ 15.4 ಸೆ, ಹರೀಶ (ಬೆಂಗಳೂರು)–3, ಕಾಲ: 16.5 ಸೆ, 400 ಮೀ ಹರ್ಡಲ್ಸ್: ಭಕ್ಷಿತ್ ಸಾಲಿಯಾನ್ (ದಕ್ಷಿಣ ಕನ್ನಡ)–1, ಕಾಲ: 55.7, ನವೀನ್ (ಡಿವೈಇಎಸ್)–2, ಕಾಲ: 56.9 ಸೆ, ಕಾರ್ತಿಕ್ (ದಕ್ಷಿಣ ಕನ್ನಡ)–3, ಕಾಲ: 59.5, 3000 ಎಸ್‌ಸಿ: ಡಿ.ನರೇಂದ್ರ (ಕೆಎಸ್‌ಪಿ)–1, ಕಾಲ: 9 ನಿ, 42.7ಸೆ, ಧೀರಜ್ ಕರಂಬಯ್ಯ (ಮೈಸೂರು)–2 ಕಾಲ: 9 ನಿ 53.4 ಸೆ, ಗುರುಪ್ರಸಾದ್ (ಕೆಎಸ್‌ಪಿ) ಕಾಲ: 10 ನಿ 05.8 ಸೆ.

ಪುರುಷರ 200 ಮೀ ಓಟ: ಕೃಷಿಕ್ (ತುಮಕೂರು)–1 ಕಾಲ: 22.1 ಸೆ, ವಿನಾಯಕ್ (ಧಾರವಾಡ)–2, ಕಾಲ: 22.2ಸೆ, ರಿನ್ಸ್ ಜೋಸೆಫ್(ಆಳ್ವಾಸ್)–3, ಕಾಲ: 22.3 ಸೆ, 800 ಮೀಟರ್ಸ್: ನಾಗರಾಜ್ (ಧಾರವಾಡ)–1, ಕಾಲ: 1ನಿ 57.4ಸೆ, ಎಂ.ಸಿ.ಮಿಲನ್(ದ.ಕ)–2, ಕಾಲ: 1 ನಿ 59.1ಸೆ, ಯಶ್ವಂತ್ (ಬೆಂಗಳೂರು)–3, ಕಾಲ: 2ನಿ 00.2ಸೆ,

5000 ಮೀಟರ್ಸ್: ರೋಹಿತ್(ಕ್ಯಾಪ್ಟನ್ಸ್ ಟ್ರಾಕ್ ಅಂಡ್ ಫೀಲ್ಡ್ ಬೆಂಗಳೂರು)–1, ಕಾಲ: 15 ನಿ 30.1ಸೆ, ಆರ್.ಸಿ.ರಾಘವೇಂದ್ರ (ಬೆಂಗಳೂರು)–2 ಕಾಲ: 15 ನಿ 35.2, ನರಸಿಂಗ್ ಪಟೇಲ್(ಬೆಂಗಳೂರು ನಗರ)–3, ಕಾಲ: 15 ನಿ 53.9ಸೆ, ಲಾಂಗ್‌ಜಂಪ್: ಪುರಷೋತ್ತಮ್(-ಹಾಸನ)–1, ಅಂತರ: 6.93ಮೀ, ಆರ್ಯ (ನ್ಯಾಷನಲ್ ಅಕಾಡೆಮಿ)–2, ಅಂತರ: 6.92 ಮೀ, ಅಂಥೋನಿ ಡೆನ್ಸಿಲ್ (ಶಿವಮೊಗ್ಗ)–3, ಅಂತರ: 6.88 ಮೀ,

ಪೋಲ್ ವಾಲ್ಟ್: ಗೋಪಾಲಕೃಷ್ಣ (ಆಳ್ವಾಸ್)–1 ಅಂತರ: 3.10 ಮೀ, ಜಿ.ಯೋಗೇಶ್ (ಆಳ್ವಾಸ್)–2 ಅಂತರ: 2.70 ಮೀ, ಥ್ರಿಪಲ್ ಜಂಪ್: ಮಹಂತ್ (ಮಂಡ್ಯ)–2 ಅಂತರ: 14.82 ಮೀ, ಪ್ರಭಾಕರನ್ (ಶಿವಮೊಗ್ಗ)–2, ಅಂತರ: 14.42ಮೀ, ಪ್ರೀತಮ್ ರೈ (ದ.ಕ)–3 ಅಂತರ: 13.92 ಮೀ. ಶಾಟ್‌ಪಟ್:ಬಿ. ಮಾನುಷ್ (ಮೈಸೂರು)–1 ಅಂತರ: 16.12 ಮೀ, ಯಶಸ್ ಅಯ್ಯಪ್ಪ (ನ್ಯಾಷನಲ್ ಅಕಾಡೆಮಿ)–2, ಅಂತರ: 15.51ಮೀ, ರಾಹುಲ್ ಕಶ್ಯಪ್ (ಮೈಸೂರು)–3, ಅಂತರ: 14.88ಮೀ, ಹ್ಯಾಮರ್ ಥ್ರೋ: ಆಂಜನೇಯ (ಕಾರವಾರ)–1 ಅಂತರ: 48.85 ಮೀ, ಸಚಿನ್ (ಕೊಪ್ಪಳ)–2 ಅಂತರ: 45.35 ಮೀ, ರಾಹುಲ್ ರಾಮ್ (ಆಳ್ವಾಸ್)–3, ಅಂತರ: 40.60 ಮೀ, 400 ಮೀ ಹರ್ಡಲ್ಸ್:ರಕ್ಷಿತ್ (ಉಡುಪಿ)–1 ಕಾಲ: 54.4ಸೆ, ಆರ್ಯನ್ ಪ್ರಜ್ವಲ್ ಕಶ್ಯಪ್ (ಮೈಸೂರು)–2 , ಕಾಲ: 56 ಸೆ, ಸೂರಜ್ (ಬೆಳಗಾವಿ)–3, ಕಾಲ: 56.8 ಸೆ, 3000 ಎಸ್‌ಸಿ: ಮುಹ್ಯುದ್ದಿನ್ ಅಜ್ಮಲ್ (ರೋರರ್ಸ್ ಟ್ರಾಕ್ ಅಂಡ್ ಫೀಲ್ಡ್ ಅಕಾಡೆಮಿ)–1 ಕಾಲ: 10 ನಿ 14.4ಸೆ, ಪ್ರಣೀತ್ (ರೋರರ್ಸ್ ಟ್ರಾಕ್ ಅಂಡ್ ಫೀಲ್ಡ್ ಅಕಾಡೆಮಿ)–2 ಕಾಲ: 10 ನಿ 22.4ಸೆ, ಅಶುತೋಷ್ ಪ್ರಣೀಶ್ (ಮೈಸೂರು)–3 ಕಾಲ: 10 ನಿ 34ಸೆ.



ಇಲ್ಲಿನ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಮುಕ್ತಾಯವಾದ ರಾಜ್ಯಮಟ್ಟದ ಹಿರಿಯರ ಹಾಗೂ 23 ವರ್ಷದೊಳಗಿನ ಮಹಿಳೆಯರ ಹಾಗೂ ಪುರುಷರ ಅಥ್ಲೆಟಿಕ್ಸ್‌ನಲ್ಲಿ ಮೂಡುಬಿದಿರೆಯ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ 175 ಅಂಕಗಳೊಂದಿಗೆ ಸಮಗ್ರ ತಂಡ ಚಾಂಪಿಯನ್‌xiಪ್ ಪ್ರಶಸ್ತಿ ಪಡೆಯಿತು.



ಜೋಸ್ ಬಟ್ಲರ್

ಟೆಸ್ಟ್: ಇಂಗ್ಲೆಂಡ್ ತಂಡಕ್ಕೆ ಮರಳಿದ ಜೋಸ್ ಬಟ್ಲರ್

ಮ್ಯಾಂಚೆಸ್ಟರ್ (ಪಿಟಿಐ):ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಮತ್ತು ಎಡಗೈ ಸ್ಪಿನ್ನರ್ ಜ್ಯಾಕ್ ಲೀಚ್ ಅವರು ಇಂಗ್ಲೆಂಡ್ ತಂಡಕ್ಕೆ ಮರಳಿದ್ದಾರೆ.

ಇದೇ 10ರಂದು ಆರಂಭವಾಗಲಿರುವ ಭಾರತದ ಎದುರಿನ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಅವರು ಕಣಕ್ಕಿಳಿಯುವ ಸಾಧ್ಯತೆ ಇದೆ. ಸೋಮವಾರ ಓವಲ್‌ನಲ್ಲಿ ಮುಕ್ತಾಯವಾದ ನಾಲ್ಕನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಪರಾಭವಗೊಂಡಿತ್ತು. ಅದರಿಂದಾಗಿ ಭಾರತ ತಂಡವು 2–1ರ ಮುನ್ನಡೆ ಸಾಧಿಸಿತು. ಇದೀಗ ಸರಣಿಯನ್ನು ಸಮ ಮಾಡಿಕೊಳ್ಳುವುದೊಂದೇ ಇಂಗ್ಲೆಂಡ್ ಮುಂದಿರುವ ದಾರಿ. ಆದ್ದರಿಂದ ಕೊನೆಯ ಪಂದ್ಯವನ್ನು ಜಯಿಸಲೇಬೇಕಾದ ಒತ್ತಡದಲ್ಲಿದೆ. 2007ರಿಂದ ಇಲ್ಲಿಯವರೆಗೆ ಇಂಗ್ಲೆಂಡ್ ತಂಡವು ತವರಿನಲ್ಲಿ ಭಾರತದ ವಿರುದ್ಧ ಒಂದೂ ಟೆಸ್ಟ್ ಸರಣಿ ಸೋತಿಲ್ಲ.ತಮ್ಮ ಪತ್ನಿಯು ಈಚೆಗೆ ಎರಡನೇ ಮಗುವಿಗೆ ಜನ್ಮ ನೀಡಿದ ಕಾರಣದಿಂದ ರಜೆ ಪಡೆದಿದ್ದ ಜೊಸ್ ಬಟ್ಲರ್ ನಾಲ್ಕನೇ ಪಂದ್ಯದಲ್ಲಿ ಆಡಿರಲಿಲ್ಲ.

ತಂಡ : ಜೋ ರೂಟ್ (ನಾಯಕ), ಮೋಯಿನ್ ಅಲಿ, ಜೇಮ್ಸ್ ಆ್ಯಂಡರ್ಸನ್, ಜಾನಿ ಬೆಸ್ಟೊ, ರೋರಿ ಬರ್ನ್ಸ್, ಜೋಸ್ ಬಟ್ಲರ್, ಸ್ಯಾಮ್ ಕರನ್, ಹಸೀಬ್ ಹಮೀದ್, ಡ್ಯಾನ್ ಲಾರೆನ್ಸ್, ಜ್ಯಾಕ್ ಲೀಚ್, ಡೇವಿಡ್ ಮಲಾನ್, ಕ್ರೇಗ್ ಓವರ್ಟನ್, ಒಲಿ ಪೊಪ್, ಒಲಿ ರಾಬಿನ್ಸನ್, ಕ್ರಿಸ್ ವೋಕ್ಸ್, ಮಾರ್ಕ್ ವುಡ್.

ಕೋಲ್ಕತ್ತ ರೇಸ್

ಸಿತಾರ ಗೆಲ್ಲುವ ನಿರೀಕ್ಷೆ

ಏರೋನ ಹ್ಯಾಂಡಿಕ್ಯಾಪ್ ಬುಧವಾರದಿಂದ ಪ್ರಾರಂಭವಾಗಲಿರುವ ಕೋಲ್ಕತ್ತ ಮಳೆಗಾಲದ ರೇಸ್‌ಗಳ ಮೊದಲನೇ ದಿನದ ಪ್ರಧಾನ ಆಕರ್ಷಣೆಯಾಗಿದ್ದು, ಸಿತಾರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹನಿಕ್ರಿಸ್ಪ್ 5, ಶಿವಾಲಿಕ್ ಸಿಲ್ಕ್ 7, ಬೆಮೂಸೆ 4,
2ನೇ ರೇಸ್: ಡಿ ನೈಟ್ ಮೈಸೂರು 2, ಆಫ್ಟರ್ ಶಾಕ್ 1, ಬಲೂಟ 6
3ನೇ ರೇಸ್: ಜೇಕ್ 3, ಹಾರ್ಬರ್ ಸನ್‌ರೈಸ್ 2, ಡೇರಿಂಗ್ ಹಾರ್ಟ್ 5
4ನೇ ರೇಸ್: ಸಿತಾರ 6, ದಂಡಿ ಮಾರ್ಚ್ 5, ಎಸ್ಟ್ರೆಲ್ಲಾ ಸ್ಟಾರ್ 3
5ನೇ ರೇಸ್: ಗಾಲೆನ್ 7, ಯಹೆಲ್ಲಾ 3, ಫೆನಿಸಿಯಾ ಮಿಸ್ಟ್ 5
6ನೇ ರೇಸ್: ಕ್ಲೆಟಸ್ 2, ಮಿಸ್ಟಿಕಲ್ ಸ್ಟಾರ್ 4, ರೇರ್ ಬರ್ಡ್ 6

ಉತ್ತಮ ಬೆಟ್: ಜೇಕ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6.

ಪೌಷ್ಟಿಕ ಆಹಾರ ಸೇವಿಸಿ

ಆಲ್‌ರೌಂಡರ್‌ಗಳಿಗೆ ಆದ್ಯತೆ ಸಾಧ್ಯತೆ

ಟಿ20 ವಿಶ್ವಕಪ್ ಕ್ರಿಕೆಟ್: ಭಾರತ ತಂಡದ ಆಯ್ಕೆ ಇಂದು

ಬೆಂಗಳೂರು: ಮುಂದಿನ ತಿಂಗಳು ಯುನೈಟೆಡ್ ಅರಬ್ ಎಮಿರೆಟ್ಸ್‌ನಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡವನ್ನು ಬುಧವಾರ ಆಯ್ಕೆ ಮಾಡುವ ನಿರೀಕ್ಷೆ ಇದೆ.

ಈ ತಂಡದಲ್ಲಿ ಆಲ್‌ರೌಂಡರ್‌ಗಳಿಗೆ ಹೆಚ್ಚು ಸ್ಥಾನಗಳು ಸಿಗುವ ಸಾಧ್ಯತೆ ಇದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ರಾಷ್ಟ್ರೀಯ ಆಯ್ಕೆ ಸಮಿತಿಯು 30 ಆಟಗಾರರ ಸಂಭವನೀಯರ ತಂಡದ ಆಯ್ಕೆ ಮಾಡಲಿದೆ. ಇಂಗ್ಲೆಂಡ್‌ನಲ್ಲಿರುವ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಮುಖ್ಯ ಕೋಚ್ ರವಿಶಾಸ್ತ್ರಿ ಅವರು ವಿಡಿಯೊ ಕಾಲ್ ಮೂಲಕ ಸಮಿತಿಯೊಂದಿಗೆ ಪಾಲ್ಗೊಳ್ಳುವರು.



ಹಾರ್ದಿಕ್ ಪಾಂಡ್ಯ, ರಾಹುಲ್ ಚಾಹರ್ ಮತ್ತು ರೋಹಿತ್ ಶರ್ಮಾ

ಸ್ಪಿನ್ನರ್ ವರುಣ್ ಚಕ್ರವರ್ತಿ ಮತ್ತು ರಾಹುಲ್ ಚಾಹರ್ ಅವರಿಗೆ ಸ್ಥಾನ ಸಿಗುವ ಕುರಿತು ಕೇಳಿ ಬರುತ್ತಿದೆ. ಓವಲ್ ಟೆಸ್ಟ್‌ನಲ್ಲಿ ಅಮೋಘವಾಗಿ ಆಡಿರುವ ಶಾರ್ದೂಲ್ ಠಾಕೂರ್, ಮಧ್ಯಮವೇಗಿ ದೀಪಕ್ ಚಾಹರ್, ರವೀಂದ್ರ ಜಡೇಜ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಅವರು ಸ್ಥಾನ ಪಡೆಯುವವರ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ವಾಷಿಂಗ್ಟನ್ ಸುಂದರ್ ಅವರನ್ನು ಆಯ್ಕೆ ಪರಿಗಣಿಸುವುದು ಖಚಿತವಾಗಿಲ್ಲ. ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ಶಿಖರ್ ಧವನ್, ಶ್ರೇಯಸ್ ಅಯ್ಯರ್ ಮತ್ತು ಮುಂಬೈನ ಸೂರ್ಯಕುಮಾರ್ ಯಾದವ್ ಅವರಿಗೆ ಸ್ಥಾನ ಸಿಗಬಹುದು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಉದ್ಯೋಗ ವಾಣಿ

ಅಮೆರಿಕ ಓಪನ್: ಟೂರ್ನಿಯಲ್ಲಿ ಮೊದಲ ಬಾರಿ ಕ್ವಾರ್ಟರ್ ತಲುಪದ ಆತಿಥೇಯ ಆಟಗಾರರು

ದಾಖಲೆಯತ್ತ ಮುನ್ನಡೆದ ನೊವಾಕ್



ನೊವಾಕ್ ಜೊಕೊವಿಚ್ ಆಟದ ವೈಖರಿ– ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಪಿ/ರಾಯಿಟರ್ಸ್/ಪಿಟಿಐ): ದಾಖಲೆಯ 21ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದತ್ತ ವಿಶ್ವದ ಅಗ್ರಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಮುನ್ನಡೆ ಸಾಧಿಸಿದರು.

ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಜೆನ್ಸನ್ ಬ್ರೂಕ್ಸ್‌ಬೈ ಅವರನ್ನು ಮಣಿಸಿದ ಸರ್ಬಿಯಾದ ಆಟಗಾರ ಎಂಟರಘಟ್ಟಕ್ಕೆ ಲಗ್ಗೆಯಿಟ್ಟರು.

ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸ್ಪೇನ್‌ನ ರಫೆಲ್ ನಡಾಲ್ ತಲಾ 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದು, ಜೊಕೊವಿಚ್ ಅವರು ಇಲ್ಲಿ ಚಾಂಪಿಯನ್ ಆದರೆ ಅತಿ ಹೆಚ್ಚು ಗ್ರ್ಯಾನ್‌ಸ್ಲಾಮ್ ಗೆದ್ದ ಆಟಗಾರ ಎನಿಸಿಕೊಳ್ಳಲಿದ್ದಾರೆ.

ಜೆನ್ಸನ್ ಅವರ ಸೋಲಿನೊಂದಿಗೆ, ಟೂರ್ನಿಯ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಅಮೆರಿಕದ ಯಾವ ಆಟಗಾರರೂ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಇಲ್ಲದಂತಾಗಿದೆ. 1881ರಲ್ಲಿ ಅಮೆರಿಕ ರಾಷ್ಟ್ರೀಯ ಚಾಂಪಿಯನ್‌ಷಿಪ್ ಎಂಬ ಹೆಸರಿನಿಂದ ಆರಂಭವಾದ ಟೂರ್ನಿಯಲ್ಲಿ ಇದುವರೆಗೆ ಆ ದೇಶದ 85 ಪುರುಷರು ಮತ್ತು 92 ಮಹಿಳೆಯರು ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿದ್ದರು.

ಅರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಮೊದಲ ಸೆಟ್ ಕಳೆದುಕೊಂಡರೂ ಎದೆಗುಂದದ ಜೊಕೊವಿಚ್ 1-6, 6-3, 6-2, 6-2ರಿಂದ ಜೆನ್ಸನ್ ಎದುರು ಗೆದ್ದು ಬೀಗಿದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಜೆನ್ಸನ್ ಮೊದಲ ಸೆಟ್‌ನಲ್ಲಿ ಕೇವಲ ಒಂದು ಲೋಪ ಎಸಗಿದರೆ, ಜೊಕೊವಿಚ್ 11 ಬಾರಿ ಈ ತಪ್ಪು ಮಾಡಿದರು. ಅದ್ಭುತ ಆಟದೊಂದಿಗೆ ಮುಂದುವರಿದ ಅವರು ಸೆಟ್ ತಮ್ಮದಾಗಿಸಿಕೊಂಡರು. ಇನ್ನುಳಿದ ಮೂರು ಸೆಟ್‌ಗಳಲ್ಲಿ ಜೊಕೊವಿಚ್ ಸಂಪೂರ್ಣ ಪಾರಮ್ಯ ಮೆರೆದರು.

ಮುಂದಿನ ಪಂದ್ಯದಲ್ಲಿ ಸರ್ಬಿಯಾ ಆಟಗಾರನಿಗೆ ಇಟಲಿಯ ಮ್ಯಾಟಿಯೊ ಬೆರೆಟಿನಿ ಸವಾಲು ಎದುರಾಗಿದೆ. 16ರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಬೆರೆಟಿನಿ 6-4, 3-6, 6-3, 6-2ರಿಂದ ಜರ್ಮನಿಯ ಆಸ್ಕರ್ ಒಟ್ಟೆ ಎದುರು ಗೆದ್ದರು. ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-4, 6-4, 7-6 (9/7) ರಿಂದ ಇಟಲಿಯ ಜಾನಿಕ್ ಸಿನ್ನರ್ ಎದುರು ಜಯಿಸಿ ಎಂಟರ ಘಟ್ಟ ತಲುಪಿದರು.

ಮಹಿಳಾ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಗ್ರೀಸ್‌ನ ಮರಿಯಾ ಸಕರಿ ಅವರು 6-7 (2), 7-6 (6), 6-3ರಿಂದ 2019ರ ಚಾಂಪಿಯನ್ ಕೆನಡಾದ ಬಿಯಾಂಕಾ ಆ್ಯಂಡ್ರಿಸ್ಕೂ ಅವರನ್ನು ಮಣಿಸಿದರು.

ಸ್ವಿಟ್ಜರ್ಲೆಂಡ್‌ನ ಬೆಲಿಂಡಾ ಬೆನ್ಸಿಚ್ 7-6 (14/12), 6-3ರಿಂದ ಪೋಲೆಂಡ್‌ನ ಇಗಾ ಸ್ವೆಟೆಕ್ ಎದುರು, ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 7-5, 6-4ರಿಂದ ರಷ್ಯಾದ ಅನಸ್ತೇಸಿಯಾ ಪಾವ್ಲಿಚೆಂಕೊವ ಎದುರು ಜಯಿಸಿ ಕ್ವಾರ್ಟರ್‌ಫೈನಲ್ ತಲುಪಿದರು.


ಗ್ರೀಸ್‌ನ ಮರಿಯಾ ಸಕರಿ ಆಟದ ಶೈಲಿ– ಎಎಫ್‌ಪಿ ಚಿತ್ರ


ವಿವೇಕ್ ಸಾಗರ್– ಪಿಟಿಐ ಚಿತ್ರ

ಹಾಕಿ: ವಿವೇಕ್ ಈಗ ಡಿಎಸ್‌ಪಿ

ಭೋಪಾಲ್ (ಪಿಟಿಐ): ಭಾರತ ಹಾಕಿ ತಂಡದ ಆಟಗಾರ ವಿವೇಕ್ ಸಾಗರ್ ಅವರನ್ನು ಮಧ್ಯಪ್ರದೇಶ ಸರ್ಕಾರವು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿಎಸ್‌ಪಿ) ಹುದ್ದೆಗೆ ನೇಮಿಸಿದೆ.

ವಿವೇಕ್ ಸಾಗರ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿ ಆಡಿದ್ದರು. ಅವರಿಗೆ ಡಿಎಸ್‌ಪಿ ಹುದ್ದೆ ನೀಡುವುದಾಗಿ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ಭರವಸೆ ನೀಡಿದ್ದರು.

ವಿವೇಕ್ ಅವರಿಗೆ ಸೋಮವಾರ ನೇಮಕಾತಿ ಆದೇಶ ಪತ್ರ ನೀಡಲಾಗಿದೆ.

ಬಳ್ಳಾರಿಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್: ಒಲಿಂಪಿಯನ್ ಬಾಕ್ಸರ್‌ಗಳು ಅಲಭ್ಯ?


ಅಮಿತ್ ಪಂಘಲ್– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಭಾರತದ ಬಾಕ್ಸರ್‌ಗಳು, ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಿಂದ ಹೊರಗುಳಿಯುವ ಸಾಧ್ಯತೆಯಿದೆ. ಹೀಗಾದರೆ ಮುಂದಿನ ತಿಂಗಳು ಸರ್ಬಿಯಾದಲ್ಲಿ ನಿಗದಿಯಾಗಿರುವ ವಿಶ್ವಚಾಂಪಿಯನ್‌ಷಿಪ್‌ನಲ್ಲೂ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗುವುದಿಲ್ಲ.

ಅಮಿತ್ ಪಂಘಲ್ (52 ಕೆಜಿ ವಿಭಾಗ), ಮನೀಷ್ ಕೌಶಿಕ್ (63 ಕೆಜಿ), ವಿಕಾಸ್ ಕ್ರಿಶನ್ (69 ಕೆಜಿ), ಆಶಿಶ್ ಚೌಧರಿ (75 ಕೆಜಿ) ಮತ್ತು ಸತೀಶ್ ಕುಮಾರ್ (+91 ಕೆಜಿ) ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಸತೀಶ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಸೋತರೆ ಇನ್ನುಳಿದ ನಾಲ್ವರು ಪ್ರಿಲಿಮನರಿ ಸುತ್ತುಗಳಲ್ಲೇ ನಿರಾಸೆ ಅನುಭವಿಸಿದ್ದರು.

‘ಈ ಐವರು ಬಾಕ್ಸರ್‌ಗಳ ಪೈಕಿ ವಿಕಾಸ್, ಸತೀಶ್ ಮತ್ತು ಆಶಿಶ್ ಗಾಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಮಿತ್ ಹಾಗೂ ಮನೀಷ್ ಕುರಿತು ಯಾವುದೇ ಮಾಹಿತಿ ಇಲ್ಲವಾದರೂ ಸೂಕ್ತ ತಾಲೀಮಿನ ಕೊರತೆಯ ಕಾರಣ ಅವರು ಟೂರ್ನಿಯಿಂದ ಹೊರಗುಳಿಯಬಹುದು‘ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದ ಬಳ್ಳಾರಿಯಲ್ಲಿ ಇದೇ 15ರಿಂದ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಿಗದಿಯಾಗಿದೆ.

ಅಕ್ಟೋಬರ್ 26ರಂದು ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಆರಂಭವಾಗಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ, ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದವರು ಮಾತ್ರ ತೆರಳಲಿದ್ದಾರೆ ಎಂದು ಭಾರತದ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸ್ನೂಕರ್: 3ನೇ ಸುತ್ತಿಗೆ ಅರ್ಜುನ್

ಬೆಂಗಳೂರು: ಅರ್ಜುನ್ ಮೆಹ್ತಾ ಅವರು ಇಲ್ಲಿ ನಡೆಯುತ್ತಿರುವ ಕೆಎಸ್‌ಬಿಎ ರಾಜ್ಯ ರ‍್ಯಾಂಕಿಂಗ್ ಪುರುಷರ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಸುತ್ತಿಗೆ ಮುನ್ನಡೆದರು. ಮಂಗಳವಾರ ಎರಡನೇ ಸುತ್ತಿನಲ್ಲಿ ಅವರು 3–0ಯಿಂದ ಎಲಿಶ ಎಸ್. ಅವರನ್ನು ಮಣಿಸಿದರು.

ಎರಡನೇ ಸುತ್ತಿನ ಇತರ ಪಂದ್ಯಗಳಲ್ಲಿ ಉದಯ್‌ದೇವ್ ಪಟೇಲ್ 3–2ರಿಂದ ಹರೀಶ್ ಪಟೇಲ್ ಎದುರು, ಎಂ.ಎಸ್.ಅರುಣ್ 3–0ಯಿಂದ ವೆಂಕಟೇಶ್ ಕೆ. ವಿರುದ್ಧ, ಬಾಲಾಜಿ ದೀಕ್ಷಿತ್ 3-0ಯಿಂದ ಪ್ರಹಾಸ್ ಮುರಳಿ ಎದುರು, ನವೀದ್ ಪಾಷಾ 3–1ರಿಂದ ದಯಾಳನ್ ಎದುರು ಜಯ ಸಾಧಿಸಿ ಮುನ್ನಡೆದರು.

ಟಿ20 ರ‍್ಯಾಂಕಿಂಗ್: ಶೆಫಾಲಿಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ಶೆಫಾಲಿ ವರ್ಮಾ ಅವರು ಐಸಿಸಿ ಟಿ20 ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಮಂಗಳವಾರ ಪ್ರಕಟಗೊಂಡಿರುವ ರ‍್ಯಾಂಕಿಂಗ್ ಪಟ್ಟಿಯಲ್ಲಿ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಜಂಟಿ ಅಗ್ರಸ್ಥಾನಕ್ಕೇರಿದ್ದಾರೆ.

ಶೆಫಾಲಿ ಅವರ ಬಳಿ ಸದ್ಯ 759 ರ‍್ಯಾಂಕಿಂಗ್ ಪಾಯಿಂಟ್‌ಗಳಿವೆ. ಆಸ್ಟ್ರೇಲಿಯಾದ ಬೆತ್ ಮೂನಿ (744) ಮತ್ತು ಭಾರತ ಟಿ20 ತಂಡದ ಉಪನಾಯಕಿ ಸ್ಮೃತಿ ಮಂದಾನ (716) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಆಸ್ಟ್ರೇಲಿಯಾದ ಇನ್ನೋರ್ವ ಆಟಗಾರ್ತಿ ಮೆಗ್ ಲ್ಯಾನಿಂಗ್ ನಾಲ್ಕನೇ ಸ್ಥಾನದಲ್ಲಿದ್ದು, ಡಿವೈನ್ ಐದನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ಎದುರಿನ ಮೂರನೇ ಪಂದ್ಯದಲ್ಲಿ ಮಿಂಚಿದ್ದ ಡಿವೈನ್, ಆ ದೇಶದ ನತಾಲಿ ಸೀವರ್ ಅವರೊಂದಿಗೆ ಅಲ್‌ರೌಂಡರ್ ವಿಭಾಗದ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಈ ವಿಭಾಗದಲ್ಲಿ ಭಾರತದ ದೀಪ್ತಿ ಶರ್ಮಾ ನಾಲ್ಕನೇ ಸ್ಥಾನದಲ್ಲಿದ್ದರೆ, ಬೌಲರ್‌ಗಳ ಪೈಕಿ ಆರನೇ ಸ್ಥಾನದಲ್ಲಿದ್ದಾರೆ.


ಪಿಎಎಸ್‌ಎಸ್ ಎಫ್‌ಸಿಯ ನಿವೇದಿತಾ ಮತ್ತು ಬೆಂಗಳೂರು ಬ್ಲೂಸ್ ತಂಡದ ತೃಪ್ತಿ ಶೆಟ್ಟಿ ಚೆಂಡಿಗಾಗಿ ಪೈಪೋಟಿ ನಡೆಸಿದರು– ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ರಚನಾ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಚನಾ ಗಳಿಸಿದ ಎರಡು ಗೋಲುಗಳ ಬಲದಿಂದ ಪಿಂಕ್ ಪ್ಯಾಂಥರ್ಸ್ ಫುಟ್‌ಬಾಲ್ ತಂಡವು ಭರ್ಜರಿ ಜಯ ಸಾಧಿಸಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ‘ಎ’ ಡಿವಿಷನ್ ಮಹಿಳಾ ಟೂರ್ನಿಯ ಪಂದ್ಯದಲ್ಲಿ 4–0ಯಿಂದ ಜೋಸ್ ಯುನೈಟೆಡ್ ತಂಡವನ್ನು ಸೋಲಿಸಿತು.

ರಚನಾ ಅವರು 11, 29ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರೆ, ನೂತನಾ (18ನೇ ನಿಮಿಷ) ಮತ್ತು ತ್ರಿನೆಟ್ (30 + 1ನೇ ನಿ.) ಪ್ಯಾಂಥರ್ಸ್ ಪರ ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಪಿಎಎಸ್‌ಎಸ್ ಎಫ್‌ಸಿ 2–1ರಿಂದ ಬೆಂಗಳೂರು ಬ್ಲೂಸ್ ಎದುರು ಜಯಿಸಿತು.

ಪದಕ ಗೆಲುವಿನ ಗುಟ್ಟು ಬಿಚ್ಚಿಟ್ಟ ಪ್ರಿಯಾ


ಕೋಚ್ ಅರ್ಜುನ್ ಅಜಯ್ ಮತ್ತು ಪ್ರಿಯಾ ಮೋಹನ್

ಬೆಂಗಳೂರು: ನೈರೋಬಿಯಲ್ಲಿ ಈಚೆಗೆ ನಡೆದ ವಿಶ್ವ ಯೂತ್ ಅಥ್ಲೆಟಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಬೆಂಗಳೂರಿನ ಪ್ರಿಯಾ ಮೋಹನ್ ತಮ್ಮ ಯಶಸ್ಸಿನ ಹಿಂದಿನ ಗುಟ್ಟು ಬಿಚ್ಚಿಟ್ಟದ್ದಾರೆ.

ಅವರು ಕಳೆದ 11 ತಿಂಗಳುಗಳಿಂದ ಸಕ್ಕರೆ ಇಲ್ಲದ ಕೋಲ್ಡ್ ಕಾಫಿ ಮತ್ತು ಚೀಸ್ ಲೇಪಿಸದ ಸ್ಯಾಂಡ್‌ವಿಚ್‌ಗಳನ್ನು ತಿನ್ನುತ್ತಿದ್ದರು. ಇದೀಗ ಕೂಟವನ್ನು ಮುಗಿಸಿ ಬೆಂಗಳೂರಿಗೆ ಮರಳಿದ ನಂತರ ಮತ್ತೆ ಸಕ್ಕರೆಯುಕ್ತ ಕಾಫಿ ಮತ್ತು ಸ್ಯಾಂಡ್‌ವಿಚ್ ಸೇವಿಸಿ ಖುಷಿಪಟ್ಟಿದ್ದಾರೆ.

ನೈರೋಬಿಯಲ್ಲಿ ನಡೆದಿದ್ದ 4X400 ಮೀ ಮಿಶ್ರ ರಿಲೆಯಲ್ಲಿ ಪ್ರಿಯಾ ಅವರಿದ್ದ ತಂಡವು ಕಂಚಿನ ಪದಕ ಗೆದ್ದಿತ್ತು. ಕೋಚ್ ಅರ್ಜುನ್ ಅಜಯ್ ಅವರ ಮಾರ್ಗದರ್ಶನದಲ್ಲಿ ಪ್ರಿಯಾ ಈ ಸಾಧನೆ ಮಾಡಿದ್ದಾರೆ. ‘ನೈರೋಬಿಯು ಎತ್ತರದ ಪ್ರದೇಶದಲ್ಲಿದೆ. ಆ ವಾತಾವರಣಕ್ಕೆ ಹೊಂದಿ ಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದೆ. ಅದಕ್ಕಾಗಿ ಉದಕಮಂಡಲದಲ್ಲಿ 35 ದಿನಗಳವರೆಗೆ ಅಭ್ಯಾಸ ಮಾಡಿದ್ದೆ. ಉದಕಮಂಡಲವು ಸಮುದ್ರಮಟ್ಟಕ್ಕಿಂತ ಸುಮಾರು 2240 ಮೀ. ಎತ್ತರದಲ್ಲಿದೆ’ ಎಂದು ಪ್ರಿಯಾ ‘ಪ್ರಜಾವಾಣಿ’ಗೆ ತಿಳಿಸಿದರು.

ಬೋಪಣ್ಣ–ದೊಡಿಗ್‌ಗೆ ಸೋಲು

ವೀರೋಚಿತ ಹೋರಾಟ ತೋರಿದ ಭಾರತದ ರೋಹನ್ ಬೋಪಣ್ಣ– ಕ್ರೊವೇಷ್ಯಾದ ಇವಾನ್ ದೊಡಿಗ್ ಅವರು ಅಮೆರಿಕ ಓಪನ್ ಪುರುಷರ ಡಬಲ್ಸ್ ಮೂರನೇ ಸುತ್ತಿನಲ್ಲಿ ಸೋಲು ಅನುಭವಿಸಿದರು. 13ನೇ ಶ್ರೇಯಾಂಕದ ಈ ಜೋಡಿಯು 7-6(4) 4-6 6-7(3)ರಿಂದ ಅಮೆರಿಕದ ರಾಜೀವ್ ರಾಮ್– ಬ್ರಿಟನ್‌ನ ಜೊ ಸ್ಯಾಲಿಸ್ಬರಿ ಎದುರು ಎಡವಿದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿದೆ.

ಪೆಲೆಗೆ ಶಸ್ತ್ರಚಿಕಿತ್ಸೆ: ಚೇತರಿಕೆ



ಪೆಲೆ

ಸಾವೊ ಪಾಲೊ (ಎಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಅವರ ಕರುಳಿನಲ್ಲಿದ್ದ ಗಡ್ಡೆಯನ್ನು ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆಯಲಾಗಿದೆ. ಅವರ ಆರೋಗ್ಯ ಈಗ ಸ್ಥಿರವಾಗಿದೆ.

ಇಲ್ಲಿಯ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯಲ್ಲಿ ಪೆಲೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಸ್ತ್ರಚಿಕಿತ್ಸೆಯು ‘ಅಮೋಘ ವಿಜಯ’ ಆಗಿದೆ ಎಂದು ಪೆಲೆ ಅವರು ಸಾಮಾಜಿಕ ಜಾಲತಾಣಗಳಲ್ಲಿ ಸೋಮವಾರ ಬರೆದಿದ್ದರು.

80 ವರ್ಷದ ಪೆಲೆ ಹೋದ ವಾರ ತಮ್ಮ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ತೆರಳಿದ್ದರು. ಆಗ ಅವರ ಹೊಟ್ಟೆಯಲ್ಲಿ ಗಡ್ಡೆ ಬೆಳೆದಿರುವುದನ್ನು ವೈದ್ಯರು ಪತ್ತೆ ಹಚ್ಚಿದ್ದರು.

‘ದೇವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಆಸ್ಪತ್ರೆಯ ಡಾ. ಫ್ಯಾಬಿಯೊ ಮತ್ತು ಡಾ. ಮಿಗೆಲ್ ಅವರು ನನ್ನ ಆರೋಗ್ಯದ ಕಾಳಜಿ ವಹಿಸಿದರು. ಅವರಿಗೂ ಧನ್ಯವಾದಗಳು. ಹೋದ ಶನಿವಾರ ಶಸ್ತ್ರಚಿಕಿತ್ಸೆ ಮಾಡಿದ್ದಾರೆ’ ಎಂದು ಪೆಲೆ ತಿಳಿಸಿದ್ದಾರೆ.

ಕಬಡ್ಡಿ: ಚಾಮುಂಡೇಶ್ವರಿ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿಯ ಜಯನಗರದ ಚಾಮುಂಡೇಶ್ವರಿ ಕಬಡ್ಡಿ ಕ್ಲಬ್ ಆಟಗಾರರು ರಾಜಸ್ಥಾನದ ಜೈಪುರದಲ್ಲಿ ಸೋಮವಾರ ಕೊನೆಗೊಂಡ ರಾಷ್ಟ್ರಮಟ್ಟದ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಕ್ಲಬ್‌ನ ಆಟಗಾರರು 41–18ರಿಂದ ಮಹಾರಾಷ್ಟ್ರ ತಂಡವನ್ನು ಸೋಲಿಸಿದರು. ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಚಾಮುಂಡೇಶ್ವರಿ ಕ್ಲಬ್ ತಂಡದ ರೈಡರ್‌ಗಳಾದ ಮೊಹಮ್ಮದ್ ಶೋಯಬ್, ತರುಣ್ ಎಚ್. ಕೆ, ಡಿಫೆಂಡರ್ ಶ್ರೀಕಾಂತ್ ಮತ್ತು ಆಲ್‌ರೌಂಡರ್ ಸಂಜೀವ್ ರೆಡ್ಡಿ ಮಿಂಚಿದರು.